ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com


ಸಂಪುಟ 5 ಸಂಚಿಕೆ 38 ಸೆಪ್ಟೆಂಬರ್ 18, 2011 ರೂ. 5/- ಪುಟ 16





ರೆಡ್ಡಿ ಜೈಲಿನಲ್ಲಿ.....
ಯಡ್ಡಿ ದಾರಿಯಲ್ಲಿ....





ದೆಹಲಿ ಹೈಕೋರ್ಟ್‌ನಲ್ಲಿ ಸ್ಫೋಟ

ಭಯೋತ್ಪಾದನೆ ತಡೆಗೆ ಕ್ರಮಗಳೆಲ್ಲಿ?

ಭೂಮಿ-ನಿವೇಶನ-ಮನೆಗಾಗಿ ಚಳುವಳಿ





ಲೋಕಾಯುಕ್ತ ವರದಿ - ದೃಢ ಕ್ರಮಕ್ಕೆ ದುಂಡು ಮೇಜಿನ ಸಭೆ ಒತ್ತಾಯ

ಚಾಮರಾಜನಗರ ಅಷ್ಟಮಂಗಲ ಯಜ್ಞ :ಅಧಿಕಾರಕ್ಕಾಗಿ ಅಂಧಶ್ರದ್ಧೆಗೆ ಕುಮ್ಮಕ್ಕು

ಜನಶಕ್ತಿ
ಕನ್ನಡ ವಾರಪತ್ರಿಕೆ

ದುಡಿವ ಜನರ ಚಳುವಳಿಗೆ ಧಾರೆಯೆರೆದ ಜೀವ

ಕಾಂ. ಪಂಧೆ ಅಂದರೆ ಸಿಐಟಿಯು ಎಂದೇ ಆಗಿತ್ತು ಎನ್ನುತ್ತಾರೆ ಅವರ ದೀರ್ಘ ಕಾಲದ ಒಡನಾಡಿ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿಯವರು

ವಿ.ಜೆ.ಕೆ.ನಾಯರ್

ಭಾರತದಲ್ಲೂ, ವಿದೇಶಗಳಲ್ಲೂ ಪಂಧೆಯವರು ಎಂದರೆ ಸಿಐಟಿಯು ಎಂದೇ ಆಗಿ ಬಿಟ್ಟಿದೆ. ಅತ್ಯಂತ ದೀರ್ಘ ಕಾಲ ಸಿಐಟಿಯು ಮುಖಂಡರಾಗಿದ್ದವರು ಎಂದು ಹೆಸರು ಗಳಿಸಿದ್ದವರು ಅವರು. ಅವರ ಜೀವನದ ಬಹುಭಾಗ ಉಕ್ಕು ಮತ್ತು ಕಲ್ಲಿದ್ದಲು ಕಾರ್ಮಿಕರ ಅಖಿಲ ಭಾರತ ಒಕ್ಕೂಟಗಳ ಮತ್ತು ಸಾರ್ವಜನಿಕ ವಲಯದ ಕೆಲವು ಉದ್ದಿಮೆಗಳ ಕಾರ್ಮಿಕರ (ಬೆಂಗಳೂರಿನ ಘಟಕಗಳೂ ಸೇರಿದಂತೆ) ಸಂಗಡವೇ ಕಳೆದಿದೆ. ಈ ಸಂಪರ್ಕಗಳ ಮೂಲಕ ಅವರು ಕಾರ್ಮಿಕ ಆಂದೋಲನಕ್ಕೆ ಸಂಬಂಧಪಟ್ಟ ಸಮ್ಮೇಳನಗಳ ಉದ್ಘಾಟಕರಾಗಿಯೋ, ಪ್ರಮುಖ ಭಾಷಣಕಾರರಾಗಿಯೋ ಭಾರತದಾದ್ಯಂತ ಪ್ರಯಾಣಿಸಿದವರು. ಸಿಪಿಐ(ಎಂ)ನ ಅಖಿಲ ಭಾರತ ಕಾರ್ಮಿಕ ಉಪಸಮಿತಿಯ ಸಂಯೋಜಕರಾಗಿ, ಬಾಲಾನಂದನ್ ರವರ ನಂತರ ಅವರು ಕಳೆದ ಒಂದು ದಶಕದ ಕಾಲ ಪ್ರಧಾನ ಪಾತ್ರ ವಹಿಸಿದವರು. ಎಲ್ಲ ಅಂತರ್ರಾಷ್ಟ್ರೀಯ ಸಮ್ಮೇಳನಗಳಲ್ಲಿ ಮತ್ತು ಸಂಘಟನೆಗಳಲ್ಲಿ ಸಿಐಟಿಯುನ ಸಾರ್ವಜನಿಕ ಮುಖವಾಗಿದ್ದ ಅವರು ಸಿಐಟಿಯುನ ಹೆಸರನ್ನು ಜಗತ್ತಿನಾದ್ಯಂತ ಒಯ್ದರು ಮತ್ತು ಸಾಮಾಜಿಕ ಬದಲಾವಣೆ ಬಯಸುವ ಎಲ್ಲ ಕಾರ್ಮಿಕ ಸಂಘಟನೆಗಳು ಸಿಐಟಿಯುನ ಲೈನನ್ನು ಸ್ವೀಕರಿಸುವಂತೆ ಮಾಡಿದರು. ಈಗ ಅವರು ನಮ್ಮನ್ನಗಲಿದ ನಂತರ ಮಹತ್ವಕತೆಗಳ ಸಂದರ್ಭಗಳಲ್ಲಿ, ಅಂತರ್ರಾಷ್ಟ್ರೀಯ ಆಂದೋಲನದಲ್ಲಿ ಉಂಟಾಗಿರುವ ತೆರವನ್ನು ತುಂಬಿಸುವುದು ಸುಲಭವೇನಲ್ಲ.

ಪಂಧೆಯವರು ಸಿಐಟಿಯು ಸ್ಥಾಪನೆಯಾದಾಗಿನಿಂದಲೂ ಸಂಘಟನೆಯ ಆಡಳಿತ ನಿರ್ವಹಣೆಯಲ್ಲಿ ತೊಡಗಿದ್ದವರು. ಬಿಟಿಆರ್ ಅಧ್ಯಕ್ಷರಾಗಿ(ಅವರ ನಿಧನದವರೆಗೂ) ಹಾಗೂ ಪಿ.ರಾಮಮೂರ್ತಿ ಪ್ರಧಾನ ಕಾರ್ಯದರ್ಶಿಯಾಗಿ (1983ರಲ್ಲಿ ಅದನ್ನು ಬಿಡುಗಡೆಯಾಗುವವರೆಗೆ) ತಂತಮ್ಮ ಸ್ಥಾನಗಳಲ್ಲಿ ಸಿಐಟಿಯುನಲ್ಲಿ ಪ್ರಾಬಲ್ಯ ಹೊಂದಿದ್ದರೆ, ಕಚೇರಿ ಕಾರ್ಯದರ್ಶಿಯಾಗಿ ಪಂಧೆಯವರು ಸಿಐಟಿಯು ಅಸ್ತಿತ್ವಕ್ಕೆ ಬಂದಂದಿನಿಂದಲೂ ಸತತವಾಗಿ ಅದರ ಕಾರ್ಯ ನಿರ್ವಹಣೆಯನ್ನು ನೋಡಿಕೊಂಡರು.

1970ರಲ್ಲಿ ಸಿಐಟಿಯು ರಚನೆಯಾಗುವ ಮೊದಲು, ಪಂಧೆಯವರು ಎಐಟಿಯುಸಿಯ ಅಖಿಲ ಭಾರತ ಕಾರ್ಯದರ್ಶಿಯಾಗಿದ್ದರು. ಎಐಟಿಯುಸಿ ಅವಧಿಯಲ್ಲಿ ಕಾರ್ಮಿಕ ಮುಖಂಡರ ತರಬೇತಿಗೆ ಪಂಧೆಯವರು ತಯಾರಿಸಿದ ಟಿಪ್ಪಣಿಗಳು ಕಾರ್ಮಿಕ ವರ್ಗದ ಮುಖಂಡರ ಒಂದಿಡೀ ತಲೆಮಾರಿಗೆ ಉಪಯೋಗಕಾರಿಯಾಗಿದ್ದವು, ಈ ಮುಖಂಡರೇ ಮುಂದೆ ಅವರೊಡಗೂಡಿ ಸಿಐಟಿಯುವನ್ನು ಕಟ್ಟಿದರು. ಎಐಟಿಯುಸಿಯೊಂದಿಗೆ ಪಂಧೆಯವರ ಸಹಯೋಗ ಸ್ವಾತಂತ್ರ್ಯಪೂರ್ವದಲ್ಲೇ ಆರಂಭವಾಗಿತ್ತು, ಆಗ ಅದರ ಪ್ರಬಲ ಮುಖಂಡರಾಗಿದ್ದ ಎಸ್.ಎ.ಡಾಂಗೆ ಅವರನ್ನು ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದರು. ಪರಿಷ್ಕರಣವಾದದ ವಿರುದ್ಧ ಮತ್ತು ಎಐಟಿಯುಸಿಯ ಪ್ರಜಾಪ್ರಭುತ್ವವಾದಿಯಲ್ಲದ ನಿರ್ವಹಣೆಯ ವಿರುದ್ಧ ಹೋರಾಟ ಬೆಳೆದು ಬಂದಂತೆ, ಬಿಟಿಆರ್ ಅದಕ್ಕೆ ಮುಖಂಡತ್ವ ನೀಡುತ್ತಿದ್ದಂತೆ ಪಂಧೆಯವರು ಸಿಐಟಿಯು ಸ್ಥಾಪನೆಯ ಮೊದಲೇ ಅವರೊಂದಿಗೆ ನಿಲುವಿನ ಪರ ನಿಂತರು.



ಅವರು ಎಸ್.ಎ.ಡಾಂಗೆ ಅನುಯಾಯಿಯಾಗಿದ್ದಾಗಲೇ, 40ರ ದಶಕದಲ್ಲಿ, ಪುಣೆಯ ಗೋಖಲೆ ಇನ್ಸ್ಟಿಟ್ಯೂಟ್ ಆಫ್ ಪಾಲಿಟಿಕ್ಸ್‌ನಿಂದ ಅರ್ಥಶಾಸ್ತ್ರದಲ್ಲಿ ಪಿ.ಹೆಚ್.ಡಿ ಪಡೆದರು. ಅವರ ಆರಂಭದ ಶಿಕ್ಷಣ ಸೋಲಾಪುರದಲ್ಲಿ ನಡೆಯಿತು. ಅದು ಕಾರ್ಮಿಕ ವರ್ಗದ ಆಂದೋಲನ ಬಲಿಷ್ಠವಾಗಿದ್ದ ಸ್ಥಳ. 1930ರಷ್ಟು ಹಿಂದೆಯೇ ಅದು ಬ್ರಿಟಿಷ್-ವಿರೋಧಿ ಬಂಡಾಯದ ಒಂದು ಕೇಂದ್ರವಾಗಿದ್ದು ಬ್ರಿಟಿಶ್ ಆಡಳಿತವನ್ನು ಯಶಸ್ವಿಯಾಗಿ ಹೊಡೆದೋಡಿಸಿದ ಘಟನೆ ವಿದ್ಯಾರ್ಥಿ ಆಂದೋಲನಕ್ಕೂ ಆಧಾರ ಒದಗಿಸಿರಬೇಕು. ಹೀಗೆ ಪಂಧೆ ಸೋಲಾಪುರದಲ್ಲಿ ವಿದ್ಯಾರ್ಥಿ ಸಂಘಟನೆಯ ಕಾರ್ಯದರ್ಶಿಯಾದಾಗ ವಿದ್ಯಾರ್ಥಿ ಆಂದೋಲನ ಕಾರ್ಮಿಕ ವರ್ಗದ ಆಂದೋಲನದೊಂದಿಗೆ ಸಮಗ್ರೀಕರಣಗೊಂಡಿತು; ಅಲ್ಲಿಂದಲೇ ಅವರು ತಮ್ಮ ಬದ್ಧತೆಯನ್ನು, ನೆಲೆಯನ್ನು ಪಡೆದುಕೊಂಡರು.

ಮಧುಕರ್ ಪಂಧೆಯವರ ತಂದೆ ಕಾಶೀನಾಥ ಪಂಧೆ ಸೋಲಾಪುರ ಜಿಲ್ಲೆಯಲ್ಲಿ ಗುಲ್ಬರ್ಗಾಕ್ಕೆ ಬಹಳ ಸಮೀಪ ಇರುವ ಕಾಗಿನೆಲೆಯೊಂದಿಗೆ ಭೀಮಾನದಿಯ ಸಂಗಮದಲ್ಲಿ ಪೂಜಾರಿಯಾಗಿದ್ದವರು. ಪಂಧೆ ಹುಟ್ಟಿದ್ದು ಪುಣೆಯಲ್ಲಾದರೂ ಅದಕ್ಕೆ ಮೊದಲು ಅವರ ತಂದೆ ವಾಸವಾಗಿದ್ದ ಸ್ಥಳ ಎಂದೇ ಸೋಲಾಪುರದೊಂದಿಗೆ ಅವರಿಗಿರುವ ಸಂಬಂಧ.

ಬಿಟಿಆರ್ ನಿಧನದ ನಂತರ ಕಲ್ಕತ್ತದಲ್ಲಿ ನಡೆದ ಸಿಐಟಿಯು ಸಮ್ಮೇಳನದಲ್ಲಿ ಅದುವರೆಗೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಂ.ಸಮರ್ ಮುಖರ್ಜಿ ಆ ಸ್ಥಾನದಿಂದ ಬಿಡುಗಡೆ ಯಾದಾಗ ತೆರವು ಮಾಡಿದಾಗ ಎಂ.ಕೆ.ಪಂಧೆ ಸಿಐಟಿಯುನ ಪ್ರಧಾನ ಕಾರ್ಯದರ್ಶಿಯಾದರು, ಇ.ಬಾಲನಂದನ್ ಅಧ್ಯಕ್ಷರಾದರು. ಪಂಧೆ ಚೆನ್ನೈ(2003) ಸಮ್ಮೇಳನದ ವರೆಗೂ ಆ ಸ್ಥಾನದಲ್ಲಿ ಮುಂದುವರೆದರು. ಅಲ್ಲಿ ಬಾಲನಂದನ್ ಅಧ್ಯಕ್ಷ ಸ್ಥಾನದಿಂದ ಬಿಡುಗಡೆ ಹೊಂದಿದರು. ಪಂಧೆ ಅಧ್ಯಕ್ಷರಾಗಿ, ಕಾಂ. ಚಿತ್ತಬ್ರತ ಮಝುಂದಾರ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಚಿತ್ತಬ್ರತ ಮಝುಂದಾರ್ ಬೆಂಗಳೂರು ಸಮ್ಮೇಳನದ ವರೆಗೆ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಇಲ್ಲಿ ಅವರು ಪುನರಾಯ್ಕೆಗೊಂಡರೂ, ದುರದೃಷ್ಟವಶಾತ್ ಬೇಗನೇ ನಿಧನರಾದರು. ಆ ಸ್ಥಾನಕ್ಕೆ ಕಾಂ.ಮಹಮ್ಮದ್ ಅಮಿನ್ ಬಂದರು. ಚಿತ್ತಬ್ರತ ಮಝುಂದಾರ್ ನಿಧನದ ನಂತರ ಸಿಐಟಿಯು ಕಾರ್ಯ ನಿರ್ವಹಣೆಯನ್ನು ಪಂಧೆಯವರೇ ನೋಡಿಕೊಂಡರು. ಕಳೆದ ವರ್ಷ ಚಂಡೀಗಢ ಸಮ್ಮೇಳನದಲ್ಲಿ ಅವರು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ನಂತರವೂ ಸಂಘಟನೆಯ ಚುಕ್ಕಾಣಿ ಹಿಡಿದ ಕೇಂದ್ರ ಮುಖಂಡರಾಗಿಯೇ ಇದ್ದರು. ಹೀಗೆ ಅವರ ನಿಧನದೊಂದಿಗೆ ಸಿಐಟಿಯು ತನ್ನ ಮುಖಂಡರನ್ನು ಕಳಕೊಂಡಿದೆ. ಆದರೂ ಸಿಐಟಿಯು ಮುಖಂಡತ್ವ ಈ ಸಂಘಟನೆಯನ್ನು ಖಂಡಿತವಾಗಿಯೂ ಮುಂದೊಯ್ಯುತ್ತದೆ, ಏಕೆಂದರೆ ಸಿಐಟಿಯುನಂತಹ ಸಂಘಟನೆಯನ್ನು ಪೋಷಿಸುತ್ತಿರುವುದು ಕಾರ್ಮಿಕ ವರ್ಗದ ಹಿತಾಸಕ್ತಿಗಳು.

☆



ರೈತ ನಾಯಕ ಕಲ್ಲಪ್ಪ ಕಿರಣಗಿ ಅಗಲಿಕೆ – ಚಳುವಳಿಗೆ ಅವರ ಕೊಡುಗೆಗಳ ಸ್ಮರಣೆ

ಕರ್ನಾಟಕ ಪ್ರಾಂತ ರೈತ ಸಂಘದ ಹಿಂದಿನ ಜಿಲ್ಲಾ ಅಧ್ಯಕ್ಷರು ಹಾಗೂ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯ ಮಾಜಿ ಜಿಲ್ಲಾ ಕಾರ್ಯದರ್ಶಿ ರಾಜ್ಯ ಸಮಿತಿಯ ಸದಸ್ಯರಾಗಿದ್ದ ಕಾಂ॥ ಕಲ್ಲಪ್ಪ ಕಿರಣಗಿಯವರಿಗೆ ಗುಲ್ಬರ್ಗಾ ಕನ್ನಡ ಭವನದಲ್ಲಿ ಸೆಪ್ಟೆಂಬರ್ 03,2011ರಂದು ಸಾರ್ವಜನಿಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಅವರು ಅನಾರೋಗ್ಯದಿಂದ ಮಣಿಪಾಲ್ ಆಸ್ಪತ್ರೆಯಲ್ಲಿ ಆಗಸ್ಟ್ 31 ರಂದು ಕೊನೆಯುಸಿರೆಳೆದರು.

ಕಾಂ॥ ಕಲ್ಲಪ್ಪ ಕಿರಣಗಿಯವರು ಒಬ್ಬ ನಿಷ್ಠಾವಂತ, ಪ್ರಾಮಾಣಿಕ, ತ್ಯಾಗಮಯ ಜೀವನ ನಡೆಸಿದ್ದರೆಂದು ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಅಲ್ಲಮಪ್ರಭು ಪಾಟೀಲ್‌ರವರು ಶ್ಲಾಘಿಸುತ್ತಾ ಇಡೀ ಜಿಲ್ಲೆಯಲ್ಲಿ ರೈತರ ಪರವಾದ ಹೋರಾಟ ಮಾಡುತ್ತಿದ್ದರೆಂದರು.

ಜೆ.ಡಿ.ಎಸ್.ನ ಮುಖಂಡರಾದ ಶ್ಯಾಮರಾವ್‌ಸೂರನ್‌ರವರು ಮತ್ತು ಸಿಪಿಐನ ಮುಖಂಡರಾದ ಕಾಂ॥ಮೌಲಾ ಮುಲ್ಲಾ ಮಾತನಾಡಿದರು. ಅದೇ ರೀತಿಯಲ್ಲಿ ಗುಲ್ಬರ್ಗಾ ಮಹಾನಗರ ಸಭೆಯ ಮಾಜಿ ಸದಸ್ಯ ನ್ಯಾಯವಾದಿ ಸಿ.ಎ. ಪಾಟೀಲ್ ಮತ್ತು ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಮೇಘರಾಜ ಕಠಾರೆಯವರು ಮಾತನಾಡಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ನಿತ್ಯಾನಂದಸ್ವಾಮಿ ಯವರು ಮಾತನಾಡುತ್ತಾ, ಜಾಗತಿಕ ಬಂಡವಾಳದ ಧಾಳಿ ಹೆಚ್ಚಾಗಿದೆ. ಉದಾರೀಕರಣದ ನೀತಿಗಳ ಫಲವಾಗಿ ಭ್ರಷ್ಟಾಚಾರದ ಮಿತಿ ಮೀರಿದೆ. ಹಗರಣಗಳೂ ಹೊರಬರುತ್ತಿವೆ. ಜನತೆಯನ್ನು ತೀವ್ರ ಸಂಕಷ್ಟಕ್ಕೆ ದೂಡುತ್ತಿರುವ ನೀತಿಗಳ ವಿರುದ್ಧ ಹೋರಾಟ ನಡೆಯಬೇಕು. ಅಂದಾಗ ಕಲ್ಲಪ್ಪ ಕಿರಣಗಿಯವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿಯಾಗುತ್ತದೆ. ಕಾಂ॥ಕಲ್ಲಪ್ಪ ಕಿರಣಗಿಯವರು ಜಿಲ್ಲೆಯಲ್ಲಿ ರೈತರ, ವಿದ್ಯಾರ್ಥಿಗಳ, ಕಾರ್ಮಿಕರ ಬೇಡಿಕೆಗಳಿಗಾಗಿ ಹೋರಾಟದಲ್ಲಿ ತೊಡಗಿದವರು. ಸಂಘವನ್ನು ಮತ್ತು ಪಕ್ಷವನ್ನು ಕಟ್ಟುತ್ತಾ ಹೊಸ ಕಾರ್ಯಕರ್ತರನ್ನು ಪಕ್ಷಕ್ಕೆ ತಂದಿದ್ದಾರೆ. ಈ ಸಂದರ್ಭದಲ್ಲಿ ಅವರ ಕುಟುಂಬದ ಜೊತೆ ನಾವಿದ್ದೇವೆ ಎಂದರು. ಪ್ರಾಸ್ತಾವಿಕವಾಗಿ ಜಿಲ್ಲಾ ಕಾರ್ಯದರ್ಶಿ ಯಾದ ಕಾಂ॥ ಭೀಮಶೆಟ್ಟಿ ಯಂಪಳ್ಳಿಯವರು ಮಾತನಾಡಿದರು.

ಸಂಪಾದಕೀಯ

ಬಂಧನವಷ್ಟೇ ಸಾಲದು

ಅಕ್ರಮ ಗಣಿಗಾರಿಕೆ, ಸಾಗಾಣಿಕೆಯಲ್ಲಿ ಪ್ರಧಾನ ಪಾತ್ರವಿರುವ ಮಾಜಿ ಸಚಿವ ಜನಾರ್ಧನ ರೆಡ್ಡಿ ಹಾಗೂ ಓಬಳಾಪುರಂ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ ರೆಡ್ಡಿಯನ್ನು ಬಂಧಿಸಿ, ಆಂಧ್ರದ ಚಂಚಲಗಡ ಜೈಲಿಗಟ್ಟಿರುವುದು ಕಾನೂನಾತ್ಮಕ ಪ್ರಕ್ರಿಯೆಯು ಇನ್ನೂ ಜೀವ ಹಿಡಿದಿರುವುದಕ್ಕೆ ಸಾಕ್ಷಿಯಾಗಿದೆ. ಅಂತಹ ಅಕ್ರಮ ಹಣದಿಂದ ಎಲ್ಲವನ್ನೂ ಖರೀದಿಸಬಲ್ಲೆ, ಕಾನೂನು, ಸಂವಿಧಾನದ ಕಣ್ಣಿಗೆ ಮಣ್ಣೆರಚಿ ಬದುಕಬಲ್ಲೆ ಎಂಬ ಅಹಂಕಾರ ಪ್ರದರ್ಶಿಸುತ್ತಿದ್ದ ಗಾಲಿ ರೆಡ್ಡಿಗಳಿಗೆ ಈ ಬಂಧನ ಒಂದು ಪ್ರಹಾರವಾಗಿದೆ. ಈ ಕಾರ್ಯ ವಿಳಂಬವಾದರೂ ಕ್ರಮಕ್ಕೆ ಮುಂದಾದ ಸಿಬಿಐ ತನಿಖಾ ಸಂಸ್ಥೆಯ ಹೆಜ್ಜೆ ಸ್ವಾಗತಾರ್ಹವಾಗಿದೆ.

ಇಂತಹದ್ದೊಂದು ಕ್ರಮ ಎಂದೋ ಬರಬೇಕಾಗಿತ್ತು. ರೆಡ್ಡಿ ಕಂಪನಿಯ ಹಗರಣ, ಅಕ್ರಮಗಳು ಜಗಜ್ಜಾಹೀರಾದರೂ ಆಂಧ್ರದ ಕಾಂಗ್ರೆಸ್ ಸರ್ಕಾರ ಹಾಗೂ ಕರ್ನಾಟಕ ಬಿಜೆಪಿ ಸರ್ಕಾರಗಳು ದೃಢ ಕ್ರಮಗಳನ್ನು ಕೈಗೊಳ್ಳುವುದನ್ನು ಸತತವಾಗಿ ನಿರಾಕರಿಸುತ್ತಲೇ ಬಂದದ್ದು 'ರೆಡ್ಡಿ'ಗಳ ಬಲವನ್ನೇ ತೋರಿಸುತ್ತದೆ. ಆಂಧ್ರದ ರೆಡ್ಡಿಗಳ ವ್ಯವಹಾರಗಳ ಪಾಲುದಾರರಾಗಿದ್ದ ದಿ. ಮಾಜಿ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ನಿಧನದ ಬಳಿಕಾದ ರಾಜಕೀಯ ಬದಲಾವಣೆಗಳು ರೆಡ್ಡಿಗಳ ಮನಸೋ ಇಚ್ಛೆಯ ಪ್ರವೃತ್ತಿಗೆ ಅಲ್ಪತಡೆಯುಂಟು ಮಾಡಿದರೂ ಮಟ್ಟಹಾಕುವಲ್ಲಿ ಅಲ್ಲಿನ ಸರ್ಕಾರವೂ ದೃಢತೆಯನ್ನು ತೋರಿಸಿರಲಿಲ್ಲ. ಇದಕ್ಕೆದುರಾಗಿ ಆಂಧ್ರದ ವಿಧಾನಸಭೆಯಲ್ಲಿ ತೆಲುಗುದೇಶಂ ಉಭಯ ಕಮ್ಯೂನಿಸ್ಟ್ ಪಕ್ಷಗಳ ತೀವ್ರ ಪ್ರತಿಭಟನೆ ನಡೆದವು. ಕೊನೆಗೆ ಸಿಬಿಐ ತನಿಖೆಗೆ ಆಂಧ್ರದ ಹೈಕೋರ್ಟ್ ನಿರ್ದೇಶನ ನೀಡಬೇಕಾಗಿ ಬಂದದ್ದು ವಾಸ್ತವತೆಗೆ ಹಿಡಿದ ಕನ್ನಡಿ. ಈ ಸ್ಥಿತಿಯ ಹಿನ್ನೆಲೆಯಲ್ಲಿ ಇನ್ನಾದರೂ ಕ್ರಮ ವಹಿಸಲು ಸಿಬಿಐಗೆ ಮುಕ್ತವಾದ ಅವಕಾಶ ಕಲ್ಪಿಸಬೇಕು.

ಜನಾರ್ಧನ ರೆಡ್ಡಿಗಳ ಮೇಲೆ ಸಿಬಿಐಯು ಕಾನೂನು ಉಲ್ಲಂಘನೆ, 420 ಯಂತಹ ವಂಚನೆ, ಮೋಸ ಹಾಗೂ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅನುಸರಿಸಿ ಆರೋಪಿಗಳನ್ನು ಬಂಧಿಸಿದೆ. ಅದೇ ಹೊತ್ತಿನಲ್ಲಿ ರೆಡ್ಡಿ ಬ್ರದರ್ಸ್ ಅಂಡ್ ಕಂಪನಿಯು ನಡೆಸಿದ ಬ್ರಹ್ಮಾಂಡ ಭ್ರಷ್ಟಾಚಾರ, ಅಕ್ರಮಗಳು ಆಂಧ್ರಕ್ಕಿಂತಲೂ ಹಲವಾರು ಪಟ್ಟು ಕರ್ನಾಟಕದಲ್ಲಿವೆ. ಈಗಾಗಲೇ ಅಂತಹ ಅಕ್ರಮಗಳು ಹಾಗೂ ಈ 'ಆರ್ ಕಂಪನಿ' ದೊಡ್ಡ ಕ್ರಿಮಿನಲ್ ಮಾಫಿಯಾವಾಗಿ ವ್ಯಾಪಿಸುತ್ತಿರುವ ಬಗ್ಗೆಯೂ ಸವಿವರ, ಸಾಕ್ಷಿಗಳ ಸಮೇತ ಬೃಹತ್ ವರದಿಯನ್ನು ಲೋಕಾಯುಕ್ತ ಸಂಸ್ಥೆ ನೀಡಿದೆ. ಬಿಜೆಪಿ ಸರ್ಕಾರವು ಹೆಚ್ಚಿನ ತನಿಖೆಗಾಗಿ ಸಿಬಿಐಗೆ ಅವರ ಒಟ್ಟು ವ್ಯವಹಾರಗಳನ್ನು ವಹಿಸಬೇಕು. ಆದ್ದರಿಂದ ಕರ್ನಾಟಕ ಸರ್ಕಾರ ಅದನ್ನು ಒಪ್ಪಿ ದೃಢ ಕ್ರಮ ವಹಿಸಲು ಮುಂದಾಗಬೇಕಿದೆ. ಮಾತ್ರವಲ್ಲ 'ಆರ್ ಕಂಪನಿ' ಯಎಲ್ಲಾ ಕುಕೃತ್ಯ, ಹಗರಣ, ವ್ಯವಹಾರಗಳ ಬಗ್ಗೆ ಆಳವಾದ ಸಿಬಿಐ ತನಿಖೆ ನಡೆಸಬೇಕಿದೆ. ಆದರೆ ಕರ್ನಾಟಕದ ಬಿಜೆಪಿ ಸರ್ಕಾರ ಏನೊಂದೂ ಕ್ರಮವಹಿಸದೇ ಅವರನ್ನು ರಕ್ಷಿಸುವಲ್ಲಿ ಮಗ್ನವಾಗಿರುವುದು ಅತ್ಯಂತ ಖಂಡನೀಯ ಹಾಗೂ ಆತಂಕದ ವಿಚಾರ.

ಈ ಹಿನ್ನೆಲೆಯಲ್ಲಿಯೂ ಕೇಂದ್ರ ಸರ್ಕಾರ ಮುಖ್ಯವಾಗಿ ಆಂಧ್ರದಲ್ಲಿ ತನಿಖೆ ನಡೆಸುತ್ತಿರುವ ಸಿಬಿಐ ಸಂಸ್ಥೆಯೂ ತನ್ನ ಕಾರ್ಯವ್ಯಾಪ್ತಿಯನ್ನು ನಂಟಿರುವ ಕರ್ನಾಟಕಕ್ಕೂ ವಿಸ್ತರಿಸುವುದು ಅತ್ಯಗತ್ಯ. ಇದೇ ಹೊತ್ತಿನಲ್ಲಿ ಕೇವಲ ರೆಡ್ಡಿ ಹಾಗೂ ಸಹಚರರ ಬಂಧನ, ಜೈಲು ವಾಸ ಅಷ್ಟೇ ಸಾಲದು. ಆರೋಪಗಳನ್ನು ಅಪರಾಧಿಗಳನ್ನಾಗಿಸುವ ದಿಕ್ಕಿನಲ್ಲಿ ಸೂಕ್ತವಾದ ದಾಖಲೆಗಳಿಂದ ವಾದ ಮಂಡಿಸಿ, ದಂಡಿಸುವುದು ಅಷ್ಟೇ ಮಹತ್ವದ್ದಾಗಿದೆ.

ಇಂತಹ ಯಾವುದೇ ತನಿಖೆಗಳು ಕೇವಲ ಸುಪ್ರೀಂಕೋರ್ಟ್ ಒಳಗೊಂಡು ಯಾವುದೇ ನ್ಯಾಯಾಲಯಗಳು ಹಾಗೂ ಸಾರ್ವಜನಿಕರ ಕಣ್ಣೊರೆಸುವ ತಂತ್ರವಾಗಬಾರದು. ಆರೋಪಪಟ್ಟಿ ಸಲ್ಲಿಸುವಾಗಲೂ ಅತೀ ಮುತುವರ್ಜಿ, ಎಚ್ಚರವೂ ಅಗತ್ಯ. ದುರ್ಬಲ ಅಂಶಗಳಿಂದ ಕೂಡಿದ ಪಟ್ಟಿಯೇ ಅವರ ಖುಲಾಸೆಗೆ ಕಾರಣವಾದ ಹಲವಾರು ನಿದರ್ಶನಗಳು ನಮ್ಮೆದುರಿವೆ. ಇದರೊಟ್ಟಿಗೆ ಅಕ್ರಮವಾಗಿರುವ ಅವರ ಆಸ್ತಿ - ಸಂಪತ್ತನ್ನು ಸರ್ಕಾರ ಮುಟ್ಟುಗೋಲು ಹಾಕಲು ಕ್ರಮ ವಹಿಸಬೇಕು.

ಈಗಲೂ ಕರ್ನಾಟಕ ಸರ್ಕಾರವು ಲೋಕಾಯುಕ್ತ ವರದಿ ಅಂಗೀಕರಿಸಿ, ಭಾಗಿಯಾದವರ ಮೇಲೆ ದೃಢ ಕ್ರಮ ವಹಿಸಬೇಕಿರುವುದು ತುರ್ತು ಅಗತ್ಯ ಮಾತ್ರವಲ್ಲ, ದೇಶ - ವಿದೇಶಗಳಲ್ಲಿಯೂ ರೆಡ್ಡಿ ಮಾಫಿಯಾದ ವ್ಯವಹಾರಗಳ ಹಸ್ತ ಚಾಚಿದೆ. ಆದ್ದರಿಂದ ಕೇಂದ್ರ ತನಿಖಾ ದಳ (ಸಿಬಿಐ)ದ ತನಿಖೆಯೇ ಸೂಕ್ತವಿದ್ದು ಅದಕ್ಕೊಪ್ಪಿಸಲು ರಾಜ್ಯ ಸರ್ಕಾರ ಮುಂದಾಗಬೇಕು. ಇವೆಲ್ಲದಕ್ಕಾಗಿ ಜನಾಂದೋಲನ ಎದ್ದು ಬರಬೇಕು. ○


ಶ್ರೀರಾಮುಲು ಹೆಗಲಮೇಲೆ ಬಂದೂಕನಿಟ್ಟು.....

ವಾರದ ಏಳು ದಿನ ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿಯೂ ಸದಾ ಶ್ರೀರಾಮುಲುವಿನದ್ದೇ 'ಧ್ಯಾನ' ಮಾಡುವ ಒಂದು 'ಅವಕಾಶ' ಮಾಧ್ಯಮಗಳಿಗೆ ತಪ್ಪಿದೆ! ಶ್ರೀರಾಮುಲು ಶಾಸಕತ್ವಕ್ಕೆ ರಾಜೀನಾಮೆ ಸಲ್ಲಿಸುವ ಎಂಬ ಸುದ್ದಿ ಉದಿರಿದ್ದೇ ತಡ ಎಲ್ಲಾ ಟಿ.ವಿ.ಚಾನೆಲಗಳಂತೂ ಅತ್ಯಂತ ಸಂಭ್ರಮದಿಂದ ಅಷ್ಟ ದಿಕ್ಕುಗಳಿಂದ ವರದಿ ಪ್ರಸಾರ ಮಾಡಲು ಸಿದ್ದವಾಗೇಬಿಟ್ಟವು.



ಮತ್ತೆ ಶ್ರೀರಾಮುಲು

ಅಧಿಕಾರವಿಲ್ಲದೇ ಪರದೇಶಿ ನಾಯಿಗಳಂತಾಗಿ ಬಿಟ್ಟದ್ದ ರೆಡ್ಡಿಗಳು ಹೇಗಾದರೂ ತಮ್ಮ 'ಗಾಲಿ' ರೆಡ್ಡಿ ಕಂಪನಿ'ಯಿಂದ ಕನಿಷ್ಠ ಇಬ್ಬರು ಇಲ್ಲವೇ ಒಬ್ಬರನ್ನಾದರೂ ಮಂತ್ರಿಗಳನ್ನಾಗಿಸಲೇ ಬೇಕೆಂಬ ಹಪಾಹಪಿಯಿಂದ ಕುದಿಯುತ್ತಿದ್ದರು, ಅದಕ್ಕಾಗಿ ಅಲ್ಲವೇ 15 ಜನ ಶಾಸಕರನ್ನು ವಿದೇಶದಲ್ಲಿ ಸುತ್ತಾಡಿಸಿ ರೆಸಾರ್ಟ್ ರಾಜಕೀಯದ ಬಲ ಪ್ರದರ್ಶನದ ಬೆದರಿಕೆ ಹಾಕಿದ್ದು ಹೊಸ ರಾಜಕೀಯ ಪಕ್ಷವನ್ನೇ ಕಟ್ಟಿ ಬಿಡುವ ಮಾತು ತೇಲಿಸಿದ್ದು, ಅದೂ ಅಷ್ಟು ಫಲಿಸದೇ ಹೋದಾಗ ಎಂದಿನಂತೆ ಅನುಸರಿಸಿದ್ದು 'ಬ್ಲಾಕ್‌ಮೇಲ್' ತಂತ್ರ, ಅದಕ್ಕೆ ಬಳಕೆಯಾದದ್ದು ಕೂಡ ಹಿಂದಿನಂತೆ ಮಾಜಿ ಸಚಿವ ಶ್ರೀರಾಮುಲುವೇ.



ಅಕ್ರಮ ಗಣಿಗಾರಿಕೆಯ ಲೋಕಾಯುಕ್ತರ ವರದಿಯಲ್ಲಿ ರೆಡ್ಡಿ ಅಂಡ್ ಕಂಪನಿಯ ಈ ಮೂವರ ಹೆಸರಿದ್ದುದರಿಂದ, (ಪ್ರಧಾನವಾಗಿ) ಸದಾನಂದಗೌಡರ ಸಂಪುಟಕ್ಕೆ ತೆಗೆದುಕೊಳ್ಳುವುದು ಬಿಜೆಪಿಗೂ ನುಂಗಲಾರದ ತುತ್ತೇ ಆಗಿತ್ತು, ಅದು ಭಿನ್ನಮತದ ಬೇಗೆಯಲ್ಲಿ ಬಿರಿಯುತ್ತಿರುವಾಗ, ಹಲವಾರು ಶಾಸಕರು ಸಚಿವ ಸ್ಥಾನಕ್ಕೆ ಲಾಬಿ ಮಾಡುತ್ತಿರುವ ಇಂತಹ ಸ್ಥಿತಿಯಲ್ಲಿ 'ಉಂಡೂ ಕೊಂಡೂ' ಹೋದ ಹೈಕಮಾಂಡ್‌ಗೂ, ರಾಜ್ಯದ ಬಿಜೆಪಿಗೂ ಒತ್ತಡ ಹಾಕದಿದ್ದರೆ ಗತಿಗೇಡೆಂದೇ ಭಾವಿಸಿದ ರೆಡ್ಡಿಗಳು ಶ್ರೀರಾಮುಲು ರಾಜೀನಾಮೆ ನೀಡುವ ಪ್ರಹಸನಕ್ಕೆ ಎಳಸಿದರು.

ಯಾರ ಸ್ವಾಭಿಮಾನಕ್ಕೆ ಧಕ್ಕೆ?

'ಲೋಕಾಯುಕ್ತರ ವರದಿಯಲ್ಲಿ ಕಳಂಕಿತನೆಂದು ಹೆಸರಿರುವುದು' ಸ್ವಾಭಿಮಾನಕ್ಕೆ ಧಕ್ಕೆ ತಂದಿದೆ ಎಂದು ಶ್ರೀರಾಮುಲು ಹೇಳಿ ಪ್ರಹಸನ ಬೆಳೆಸಲೆಂದೇ ಸ್ಪೀಕರ್ ಮನೆಯಿರುವ ಮಡಿಕೇರಿಯವರೆಗೂ ಹೋಗಿ ರಾಜೀನಾಮೆ ಪತ್ರ ನೀಡಿ ಬಂದಿದ್ದು, ಇದರೊಂದಿಗೆ ಶ್ರೀರಾಮುಲು ರೆಡ್ಡಿಗಳನ್ನು ಬೆಂಬಲಿಸಿ ಜನರನ್ನು ಪ್ರತಿಭಟನೆಗೆ ಇಳಿಸಿದ್ದು ಎಲ್ಲವೂ ಪೂರ್ವಯೋಜಿತ ಲೆಕ್ಕಾಚಾರವೇ, ಹೀಗೆ ರಾಜೀನಾಮೆ ನೀಡಿದ ಶ್ರೀರಾಮುಲು ಚುನಾವಣೆಯಲ್ಲಿ ಗೆದ್ದು ಬಂದರೆ 'ಜನರ ಆಶೀರ್ವಾದ' ಪಡೆದು ಬಿಟ್ಟಿರುವುದರಿಂದ ಹಿಂದಿನ ಎಲ್ಲಾ ಕ್ರಿಮಿನಲ್ ಕಳಂಕಗಳಿಂದ ವಿಮೋಚಿತನಾದ್ದು 'ಮಂತ್ರಿಗಿರಿ' ಸಿಗಲೇಬೇಕೆಂದು ಒತ್ತಾಯಿಸುವುದು. ತಂತ್ರದ ಭಾಗವಾಗಿತ್ತು.


ಜಾತಿ ಜಾಲ, ಹಣದ ಬಲ

ಶ್ರೀರಾಮುಲು ಹೆಗಲಮೇಲೆ ಬಂದೂಕಿಟ್ಟು ಗುಂಡು ಹೊಡೆಯುವ ಕಲೆಯಲ್ಲಿ ಜನಾರ್ಧನರೆಡ್ಡಿ ನಿಷ್ಣಾತರಲ್ಲವೇ? ಇದೇ ರೆಡ್ಡಿಗಳೇ ಒಂದೆ ಶ್ರೀರಾಮುಲು ತಲೆಬೋಳಿಸಿ, ವ್ರತ ಹಿಡಿಸಿ ಜನರ ಬೆಂಬಲ ಗಿಟ್ಟಿಸಿಕೊಳ್ಳಲು ಯತ್ನಿಸಿರಲಿಲ್ಲವೇ? ಇಂತಹ ಯಾವುದೇ ಪ್ರಸಂಗ ಬಂದರೂ ಶ್ರೀರಾಮುಲುನನ್ನೇ ಮುಂದಿಟ್ಟುಕೊಂಡು ಕಾರ್ಯ ಸಾಧಿಸಿಕೊಳ್ಳುವುದು ಇವರ ದಂಧೆ, ಈಗಲೂ ಒಂದು ವೇಳೆ ರಾಜೀನಾಮೆ ತಂತ್ರ ಫಲಿಸದೇ ಹೋದರೂ ಅದನ್ನೇ ಆಧಾರವಾಗಿಟ್ಟು ಕೊಂಡು ತಮ್ಮ ಹೀನ ಸಮರ್ಥನೆಗೆ, ರಕ್ಷಣೆಗಾಗಿ ಅತ್ಯಂತ ಶೋಷಿತ ಸಮುದಾಯವನ್ನು ದುರ್ಬಳಕೆ ಮಾಡಲು ಯತ್ನಿಸಿದರು. ವಾಲ್ಮೀಕಿ ಜನಾಂಗದಿಂದ ಬಂದಿರುವ ಶ್ರೀರಾಮುಲುವಿಗೆ ಅನ್ಯಾಯವಾಗಿ ಬಿಟ್ಟಿದೆ ಎಂದು ಬಿಂಬಿಸಿ ಅವರನ್ನು

ಪುಟ 14ಕ್ಕೆ

ಕಾರ್ಟೂನ್ ಕಾರ್ನರ್





ಕಾಮ್ರೇಡ್ ಹೋಳೂರು ಶಂಕರ್ ನೆನಪಿಗೆ ಅರ್ಥಪೂರ್ಣ ಕಾರ್ಯಕ್ರಮ

ಭ್ರಷ್ಟಾಚಾರ ನಿರ್ಮೂಲನೆ ಕುರಿತು ಸಂವಾದ

ವರದಿ: ವಿಶ್ವ ಕುಂದಾಪುರ

ಆಗಸ್ಟ್ 28, 2009 ರಾಜ್ಯದ, ಅದರಲ್ಲೂ ವಿಶೇಷವಾಗಿ ಕೋಲಾರ ಜಿಲ್ಲೆಯ ರೈತಾಪಿ-ಕೃಷಿಕೂಲಿಗಾರರ ಹಾಗೂ ಒಟ್ಟಾರೆಯಾಗಿ ದುಡಿಯುವ ಜನರ ಹೋರಾಟಕ್ಕೆ 'ಗರ ಬಡಿದ' ಅನುಭವವಾಧ ದಿನ. ಬಡಜನತೆಯ ಕಷ್ಟಕಾರ್ಪಣ್ಯಗಳ ನಿವಾರಣೆಗಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟು ಸಂಘರ್ಷವನ್ನೇ ತನ್ನ ಉಸಿರಾಗಿರಿಸಿಕೊಂಡಿದ್ದ ಚೇತನ ತನ್ನ ಉಸಿರನ್ನು ಕೊನೆಗೊಳಿಸಿದ ಆಘಾತಕರ ಸುದ್ದಿ ಆ ದಿನ ಬಂದೆರಗಿತ್ತು. ತನ್ನ ರಾಜಿರಹಿತ ಹೋರಾಟಗಳಿಂದಾಗಿ ಶೋಷಕ ಶಕ್ತಿಗಳಿಗೆ ಸಿಂಹಸ್ವಪ್ನರಾಗಿದ್ದ, ಶೋಷಿತ ಜೀವಿಗಳಿಗೆ ಆತ್ಮೀಯ 'ಶಂಕ್ರಣ್ಣ' ಆಗಿದ್ದ ಕಾಮ್ರೇಡ್ ಹೋಳೂರು ಶಂಕರ್ ಅಂದು ನಿಧನರಾದರು, ಸಾಯುವಂಥ ವಯಸ್ಸಲ್ಲದ ಹರೆಯದಲ್ಲಿ.

ಸಂವಾದ

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಜಿಲ್ಲಾ ನೇತಾರರಾಗಿದ್ದ ಕಾಮ್ರೇಡ್ ಶಂಕರ್‌ರ ಅಗಲಿಕೆಯ ನೋವು ಜಿಲ್ಲೆಯ ಪ್ರಗತಿಪರ ಚಳವಳಿಯನ್ನು ಇನ್ನೂ ಕಾಡುತ್ತಿದೆ. ಅವರ ಹೋರಾಟಗಳ ಸ್ಫೂರ್ತಿಯ ನೆನಪಿನಲ್ಲಿ ಸಂಘರ್ಷವನ್ನು ಮುಂದುವರಿಸುವ ಉದ್ದೇಶದಿಂದ 'ಕಾಮ್ರೇಡ್ ಹೋಳೂರು ಶಂಕರ್ ಸ್ಮಾರಕ ಸಮಿತಿ'ಯನ್ನು ರಚಿಸಲಾಗಿದ್ದು ಸಂಗಾತಿಯ ಅಗಲಿಕೆಯ ಪ್ರಥಮ ವರ್ಷಾಚರಣೆ ಸಂದರ್ಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅದನ್ನು ಕೋಲಾರದಲ್ಲಿ ಉದ್ಘಾಟಿಸಿದ್ದರು. ಆ ಸಂದರ್ಭದಲ್ಲಿ ಜಿಲ್ಲೆಯ ಬದುಕಿನ ಪ್ರಶ್ನೆಯಾದ ನೀರಿಗೆ ಸಂಬಂಧಿಸಿದ ವಿಚಾರಗೋಷ್ಠಿಯನ್ನು ನಡೆಸಲಾಗಿತ್ತು. ಇದೀಗ ಎರಡನೇ ವರ್ಷದ ನೆನಪಿಗೆ ಸಮಿತಿಯು ಕೋಲಾರದಲ್ಲಿ ಆಗಸ್ಟ್ 28ರಂದು 'ಲೋಕಪಾಲ-ಜನಲೋಕಪಾಲ ಮಸೂದೆಯಿಂದ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವೇ?' ಎಂಬ ಪ್ರಸ್ತುತ ವಿಷಯದ ಕುರಿತು ಸಂವಾದವನ್ನು ಏರ್ಪಡಿಸಲಾಗಿತ್ತು.


ವಿಧಾನ ಪರಿಷತ್‌ನ ಮಾಜಿ ಸಭಾಪತಿ ಹಾಗೂ ಹಾಲಿ ಸದಸ್ಯ ವಿ.ಆರ್. ಸುದರ್ಶನ್, ಮಾಜಿ ಕೃಷಿ ಸಚಿವ ಕೆ. ಶ್ರೀನಿವಾಸ ಗೌಡ ಮತ್ತು ಕೆಪಿಆರ್‌ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ಮೊದಲಾದವರು ವಿಚಾರ ಮಂಡನೆ ಮಾಡಿ ಸಭಿಕರಿಂದ ಬಂದ ಪ್ರಶ್ನೆಗಳಿಗೆ ಉತ್ತರ ನೀಡಿದರು.

ರಾತ್ರೋರಾತ್ರಿ ನಿರ್ಮೂಲನೆ ಅಸಾಧ್ಯ

ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವ ಭ್ರಷ್ಟಾಚಾರವನ್ನು ರಾತ್ರೋರಾತ್ರಿ ನಿರ್ಮೂಲನೆ ಮಾಡಲು ಸಾಧ್ಯವಿಲ್ಲ ಎಂದು ಎಂಎಲ್‌ಸಿ ವಿ.ಆರ್.ಸುದರ್ಶನ್ ಅಭಿಪ್ರಾಯಪಟ್ಟರು. ಅಣ್ಣಾ ಹಜಾರೆ ನೇತೃತ್ವದಲ್ಲಿ ಆಗ ನಡೆಯುತ್ತಿದ್ದ ಭ್ರಷ್ಟಾಚಾರ ವಿರೋಧಿ ಹೋರಾಟದ ಜಿಗುಟುತನವನ್ನು ಕಟುವಾಗಿ ಟೀಕಿಸಿದ ಸುದರ್ಶನ್, ಸಾಂವಿಧಾನಿಕ ವಿಧಿವಿಧಾನಗಳನ್ನು ಬುಡಮೇಲು ಮಾಡುವ ಷಡ್ಯಂತ್ರವನ್ನು ವಿಫಲಗೊಳಿಸಬೇಕಾದ ಮಹತ್ವವನ್ನು ಸಾರಿದರು.

ಭ್ರಷ್ಟಾಚಾರವು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಮಾತ್ರ ಸೀಮಿತವೇ?. ವರ್ತಕರು ಜನರಿಂದ ತೆರಿಗೆ ಪಡೆದು ಅದನ್ನು ಸರಕಾರಕ್ಕೆ ಪಾವತಿಸದಿರುವುದು ಭ್ರಷ್ಟಾಚಾರ ಅಲ್ಲವೇ? ಖಾಸಗಿ ವಲಯ, ಎನ್.ಜಿ.ಓ.ಗಳು ಸಮಾಜದಲ್ಲಿ ನಿರ್ವಹಿಸುತ್ತಿರುವ ಪಾತ್ರವೇನು? ಎಂಬಿತ್ಯಾದಿ ಪ್ರಶ್ನೆಗಳನ್ನು ಎತ್ತಿದ ಸುದರ್ಶನ್ ವಿಷಯವನ್ನು ಸಮಗ್ರವಾಗಿ ನೋಡಬೇಕೇ ಹೊರತು ಮೂಗಿನ ನೇರಕ್ಕೆ ನೋಡುವುದು ತರವಲ್ಲ ಎಂದರು. ಕಾರ್ಪೊರೇಟ್ ವಲಯದ ಭ್ರಷ್ಟಾಚಾರದ ಬಗ್ಗೆ ಯಾಕೆ ಈ ಹೋರಾಟಗಾರರು ಪ್ರಶ್ನಿಸುವುದಿಲ್ಲ ಎಂದು ಕೇಳಿದರು.

ಭ್ರಷ್ಟಾಚಾರ ಕುರಿತಂತೆ ಬಿ.ಜೆ.ಪಿ.ಯ ದ್ವಂದ್ವ ನೀತಿಯನ್ನು ಅವರು ಟೀಕಿಸಿದರು. ಹಿಂದೆ ನ್ಯಾ. ಎನ್. ಸಂತೋಷ ಹೆಗ್ಡೆ ರಾಜಿನಾಮೆ ನೀಡಿದ್ದಾಗ, ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ನೀಡುವುದಾಗಿ ಹೇಳಿದ್ದ ಬಿಜೆಪಿಯ ರಾಷ್ಟ್ರೀಯ ನಾಯಕರು ಮತ್ತೆ ಆ ಬಗ್ಗೆ ಚಕಾರವೆತ್ತಿಲ್ಲ. ಅಕ್ರಮ ಗಣಿಗಾರಿಕೆಗೆ ಸಂಬಂಧಪಟ್ಟಂತೆ ಲೋಕಾಯುಕ್ತರು ವರದಿ ಸಲ್ಲಿಸಿ ತಿಂಗಳೇ ಕಳೆದರೂ ಅದಕ್ಕೆ ಸಂಬಂಧಿಸಿ ಯಾವುದೇ ಕ್ರಮಕೈಗೊಳ್ಳದೆ ವರದಿಯನ್ನು ಕಸದಬುಟ್ಟಿಗೆ ಎಸೆಯಲು ಹುನ್ನಾರ ನಡೆಸಲಾಗಿದೆ ಎಂದು ಹಿರಿಯ ಕಾಂಗ್ರೆಸ್ ಧುರೀಣರೂ ಆದ ಸುದರ್ಶನ್ ಹೇಳಿದರು.



ಮಾತನಾಡುತ್ತಿರುವವರು ಬಿ.ಆರ್. ಸುದರ್ಶನ್

ವ್ಯತ್ಯಾಸವೇ ಗೊತ್ತಿಲ್ಲ

ಅಣ್ಣಾ ಹಜಾರೆ ಹೋರಾಟಕ್ಕೆ ಬೆಂಬಲ ನೀಡುತ್ತಿರುವ ಜನರಲ್ಲಿ ಭಾವನಾತ್ಮಕ ಅಂಶ ಮೇಲುಗೈ ಪಡೆದಿದೆಯೇ ಹೊರತು ಲೋಕಪಾಲ ಮತ್ತು ಜನ ಲೋಕಪಾಲ ಮಸೂದೆಗಳ ನಡುವಣ ವ್ಯತ್ಯಾಸ ಅವರಿಗೆ ತಿಳಿದಿಲ್ಲ ಎಂದು ಸಿ.ಪಿ.ಐ. (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಸಿ. ಬಯ್ಯಾರೆಡ್ಡಿ ಹೇಳಿದರು. ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕೆಂಬ ವಿಚಾರದಲ್ಲಿ ಎರಡು ಮಾತಿಲ್ಲ. ಆದರೆ ಮಾರ್ಗೋಪಾಯಗಳ ಬಗ್ಗೆ ಸೂಕ್ತ ಚಿಂತನೆ ಅಗತ್ಯ ಎಂದವರು ಪ್ರತಿಪಾದಿಸಿದರು. ಭ್ರಷ್ಟಾಚಾರ ಬಂಡವಾಳಶಾಹಿ ವ್ಯವಸ್ಥೆಯ ಅನಿವಾರ್ಯ ಕೂಸು. ಈ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವ ಲಂಚಾವತಾರವನ್ನು ನಿರ್ಮೂಲ ಮಾಡಲು ಈ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವ ಸಂಘರ್ಷವನ್ನೂ ತೀವ್ರಗೊಳಿಸುವುದು ಅಗತ್ಯ ಎಂದು ನುಡಿದರು.

ಮಾಜಿ ಕೃಷಿ ಸಚಿವ ಕೆ. ಶ್ರೀನಿವಾಸ ಗೌಡ ಮಾತನಾಡಿ ಮತದಾರರನ್ನು ಭ್ರಷ್ಟಗೊಳಿಸುವ ಪ್ರವೃತ್ತಿ ಹೆಚ್ಚುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು. ರಾಜಕಾರಣಿಗಳು ಭ್ರಷ್ಟರಾಗಲು ಮತದಾರರೂ ಕಾರಣ ಎಂದು ಆರೋಪಿಸಿದ ಅವರು, ಜನಸಾಮಾನ್ಯರು ಎಚ್ಚೆತ್ತುಕೊಂಡರೆ ಮಾತ್ರ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಹೋಳೂರು ಶಂಕರ್ ಸ್ಮಾರಕ ಸಮಿತಿ ಅಧ್ಯಕ್ಷ, ಪತ್ರಕರ್ತ ಎಸ್. ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ (ಎಂ) ರಾಜ್ಯ ಸಮಿತಿ ಸದಸ್ಯ ಗಾಂಧಿನಗರ ನಾರಾಯಣಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಜಿ. ಅರ್ಜುನನ್, ಕೆಪಿಆರ್‌ಎಸ್ ಮುಖಂಡರಾದ ಪಿ.ಆರ್. ಸೂರ್ಯ ನಾರಾಯಣ, ಟಿ.ಎಂ. ವೆಂಕಟೇಶ್, ಜೆ.ಎಂ.ಎಸ್. ನಾಯಕಿ ವಿ.ಗೀತಾ ವೇದಿಕೆಯಲ್ಲಿದ್ದರು. ▲

'ಭ್ರಷ್ಟಾಚಾರ : ಪ್ರಜಾಪ್ರಭುತ್ವಕ್ಕೆ ಗಂಡಾಂತರ' ವಿಶೇಷಾಂಕ

ಜನಶಕ್ತಿಯ ವಿಶೇಷಾಂಕ ಅಕ್ಟೋಬರ್ 2 ರಂದು ಬಿಡುಗಡೆಯಾಗಲಿದೆ. ಈ ಪ್ರಯುಕ್ತ ಸೆಪ್ಟೆಂಬರ್ 25ರ ವಾರದ ಸಂಚಿಕೆ ಪ್ರಕಟವಾಗುವುದಿಲ್ಲ. ವಿಶೇಷ ಸಂಚಿಕೆಯು ಎರಡು ವಾರಗಳ ಜಂಟಿ ಸಂಚಿಕೆಯಾಗಲಿದೆ ಇದನ್ನು ಗಮನಿಸ ಬೇಕಾಗಿ ವಿನಂತಿ.

ಈ ಹಿನ್ನೆಲೆಯಲ್ಲಿ ವಿಶೇಷ ಸಂಚಿಕೆಗೆ ಜಾಹೀರಾತು ನೀಡುವ ಸಂಗ್ರಹಿಸುವ ಗೆಳೆಯರು ಸೆಪ್ಟೆಂಬರ್ 26ರೊಳಗೆ ಜಾಹೀರಾತು ವಿವರಗಳೊಂದಿಗೆ ವಿಷಯವನ್ನು ಕಳುಹಿಸಬೇಕು. ಎಲ್ಲರ ಸಹಕಾರ ನಿರೀಕ್ಷಿಸುತ್ತೇವೆ.

– ಸಂಪಾದಕರು

ಕನ್ನಡ ವಾರಪತ್ರಿಕೆ

ಲೋಕಾಯುಕ್ತ ವರದಿಯ ದೃಢ ಜಾರಿಗೆ ಆಗ್ರಹಿಸಿ ದುಂಡು ಮೇಜಿನ ಸಭೆ

ವ್ಯಾಪಕ ಜನಾಂದೋಲನಕ್ಕೆ ನಿರ್ಧಾರ

ಭಾರತಿ ಗಾಂವ್ಕರ್

ಕರ್ನಾಟಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಹಿಂದೆಂದೂ ಕಂಡು ಕೇಳರಿಯದಷ್ಟು ದೊಡ್ಡ ರೀತಿಯಲ್ಲಿ ಭ್ರಷ್ಟಾಚಾರ ನಡೆಸಿ.ಕೊನೆಗೆ ಆಡಳಿತ ನಡೆಸುತ್ತಿದ್ದ ಮುಖ್ಯಮಂತ್ರಿಯನ್ನೇ ಬದಲಿಸಬೇಕಾದ ಅವಸ್ಥೆಗೆ ಗುರಿಯಾಗಬೇಕಾದ ಸನ್ನಿವೇಶ ಇಂದು ಬಿಜೆಪಿ ನಡೆಸುತ್ತಿರುವ ಸರಕಾರಕ್ಕೆ ಬಂದಿದೆ. ತಮ್ಮನ್ನು ತಾವು ಶಿಸ್ತಿನ ಸಿಪಾಯಿಗಳೆಂದು ಕರೆದುಕೊಂಡು ಭಾರತ ಮಾತೆಯ ಹೆಸರಿನಲ್ಲಿ ಪ್ರತಿಜ್ಞೆ ಮಾಡುವ ಇವರು ಯಾವಾಗಲೂ ಭೂ ಹಗರಣ, ಅಕ್ರಮ ಗಣಿಗಾರಿಕೆ, ಮುಂತಾದ ಭ್ರಷ್ಟ ಕೆಲಸಗಳಲ್ಲಿ ಸದಾ ಕಾರ್ಯನಿರತರಾಗಿರುತ್ತಾರೆ. ಆದರೆ ಇದೇ ಶಾಶ್ವತ ಅಲ್ಲ ನೋಡಿ!

ಎಲ್ಲಾವುದಕ್ಕೂ ಅಂತ್ಯ ಎಂಬುದೊಂದಿದೆ,ಅಕ್ರಮ ಗಣಿಗಾರಿಕೆಗೆ ಸಂಭಂದಿಸಿದಂತೆ ಲೊಕಾಯುಕ್ತ ನ್ಯಾಯಮೂರ್ತಿ ಶ್ರೀ ಸಂತೋಶ ಹೆಗ್ಡೆಯವರು ಈ ಭ್ರಷ್ಟರ ಅಂತ್ಯದ ಹಾದಿಗೆ ಮೊದಲ ಮೆಟ್ಟಿಲು ಹಾಕಿಕೊಟ್ಟಿದ್ದಾರೆ,ಅಧಿಕಾರದ ಅಮಲಿನಲ್ಲಿರುವ ಮಂತ್ರಿಗಳು ಆ ವರದಿಯನ್ನು ದಿಕ್ಕು ತಪ್ಪಿಸುವ ಸರ್ವ ಪ್ರಯತ್ನ ಮಾಡುತ್ತಲೇ ಇದ್ದಾರೆ,ಸಾಲದ್ದಕ್ಕೆ ಲೊಕಾಯುಕ್ತ ವರದಿಯನ್ನು ಇನ್ನೊಂದು ಸಮಿತಿಯ ಮೂಲಕ ಪರಿಶೀಲಿಸಿ ಆನಂತರ ಅಂಗೀಕರಿಸುತ್ತೇವೆಂದು ಹಳೇ ರಾಗವನ್ನೆ ಹೊಸದಾಗಿ ಹಡುತ್ತಿದ್ದಾರೆ. ಈಪ್ರಕ್ರಿಯೆಯನ್ನು ಖಂಡಿಸಲು ಭಾರತ ಕಮ್ಯೂನಿಸ್ಟ ಪಕ?(ಮಾರ್ಕ್ಸವಾದಿ)ಯು ದಿ: 07-09-2011 ರಂದು ಅಕ್ರಮ ಗಣಿಗಾರಿಕೆ ಕುರಿತು ಲೊಕಾಯುಕ್ತ ವರದಿಯ ಧೃಡ ಜಾರಿಗೆಗೆ ಒತ್ತಾಯಿಸಿ ದುಂಡುಮೇಜಿನ ಸಭೆ ಏರ್ಪಡಿಸಿತ್ತು, ಇದರಲ್ಲಿ ಸಾಹಿತಿಗಳು, ಬರಹಗಾರರು, ವಿದ್ಯಾರ್ಥಿ ಯುವಜನ ಸಂಘಟನೆಯ ಮುಖಂಡರು, ರಾಜಕೀಯ ಮುಖಂಡರು, ಪ್ರಗತಿಪರ ಚಿಂತಕರು, ಮಹಿಳೆಯರು, ಕಾರ್ಮಿಕರು ಮುಂತಾದ ಪ್ರಮುಖರು ಭಾಗವಹಿಸಿ ಲೊಕಾಯುಕ್ತ ವರದಿಯನ್ನು ಕರ್ನಾಟಕ ಸರ್ಕಾರ ಮೊದಲು ಒಪ್ಪಿಕೊಬೇಕು, ಅ ನಂತರ ಅದರ ಸಂಪೂರ್ಣ ಜಾರಿಯ ಜವಾಬ್ದಾರಿ ಹೊರಬೇಕು,ಆರೋಪಿತರ ಮೇಲೆ ಎಫ್ ಅಯ್ ಆರ್ ಧಾಕಲಿಸಿ ವಿಚಾರಣೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು.



ಸಭೆಯಲ್ಲಿ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ ಮಾತನಾಡುತ್ತಿರುವುದು



ಸಭೆಯ ದೃಶ್ಯ

ಬಂಡಾಯ ಸಾಹಿತಿಗಳಾದ ಪ್ರೊ. ಬರಗೂರು ರಾಮಚಂದ್ರಪ್ಪನವರು ಲೋಕಾಯುಕ್ತ ತಂಡವನ್ನು ಅವರ ಮಹತ್ವದ ಕಾರ್ಯಕ್ಕೆ ಅಭಿನಂದಿಸಿ ಮಾತನಾಡಿ, ಹಿಂದೆ ಭ್ರಷ್ಟಾಚಾರ ಎಂದಾಗ ಸರಕಾರಿ ವಲಯದ ಬಗ್ಗೆ ಮಾತನಾಡುತ್ತಿದ್ದೆವು, ಆದರೆ ಇಂದು ಖಾಸಗೀಕರಣದ ಪ್ರಭಾವದಿಂದ ಭ್ರಷ್ಟಾಚಾರಕ್ಕೆ ಎಲ್ಲಿಲ್ಲದ ಅವಕಾಶ ಸಿಕ್ಕಿದೆ,ಇಂದು ಸರಕಾರಿ ವಲಯ ಖಸಗೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿದೆ, ಇದನ್ನು ಇಂದಿನ ಜನತೆಗೆ ಅರ್ಥಮಾಡಿಸುವ ಕೆಲಸ ಆಗಬೇಕು.ಪ್ರಗತಿಪರ ಸಂಘಟನೆಗಳು ಜನಾಂದೊಲನಗಳ ಮೂಲಕ ಖಾಸಗೀಕರಣದ ಪ್ರಭಾವ ಮತ್ತು ಅದರಿಂದ ಭ್ರಷ್ಟಾಚರಕ್ಕೆ ಸಿಗುತ್ತಿರುವ ಕುಮ್ಮಕ್ಕಿನ ಬಗ್ಗೆ ಅರಿವು ಮೂಡಿಸಬೇಕು ಎಂದು ಹೇಳಿದರು.

ಖಾಸಗೀಕರಣ ಹೆಚ್ಚಾಗಿರುವ ಇಂದಿನ ದಿನಗಳಲ್ಲಿ ಮಾಧ್ಯಮಗಳು ಸರ್ಕಾರಿ ಕ್ಷೇತ್ರದ ಭ್ರಷ್ಟಾಚಾರಗಳತ್ತ ಮಾತ್ರವೇ ಗಮನ ಹರಿಸಿರುವುದನ್ನು ಬಿಟ್ಟು ಖಾಸಗೀ ವಲಯದ ಭಾರಿ ಭ್ರಷ್ಟಾಚಾರಗಳನ್ನು ಅನಾವರಣಗೊಳಿಸಬೇಕು ಎಂದು ಖ್ಯಾತ ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಲೋಕಾಯುಕ್ತ ಸಂಸ್ಥೆ ಒಂದು ಶಾಸನಬದ್ಧ ಸಂಸ್ಥೆ. ಆದು ಸರ್ಕಾರದ ಒಂದು ಅಂಗ ಸಂಸ್ಥೆ. ಕರ್ನಾಟಕ ರಾಜ್ಯದಲ್ಲಿನ ಗಣಿ ಅಕ್ರಮಗಳ ಕುರಿತು ಲೋಕಾಯುಕ್ತ ಸಂಸ್ಥೆ ನೀಡಿರುವ ವರದಿಯ ಅಧ್ಯಯನಕ್ಕೆ ಮತ್ತೊಬ್ಬರನ್ನು ನೇಮಿಸುವ ಕ್ರಮ ಅಗತ್ಯವಿಲ್ಲ. ಅದು ಹಗರಣವನ್ನು ಮುಚ್ಚಿಹಾಕುವ ತಂತ್ರ ಎಂದೂ ಬರಗೂರು ಹೇಳಿದರು. ಭ್ರಷ್ಟಾಚಾರದ ಬಗೆಗೆ ಜನ ರೋಸಿ ಹೋಗಿದ್ದಾರೆ ಎಂಬುದು ಇತ್ತೀಚಿನ ದಿನಗಳಲ್ಲಿ ಅಣ್ಣಾ ಹಜಾರೆಯವರ ಹೋರಾಟಗಳಲ್ಲಿ ಪಾಲ್ಗೊಂಡ ಜನರ ಪ್ರಮಾಣವನ್ನು ನೋಡಿದರೆ ತಿಳಿಯುತ್ತದೆ ಎಂದ ಅವರು ಜನತೆ ರಾಜಕೀಯ, ಪ್ರಜಾಪ್ರಭುತ್ವದ ಪ್ರಕ್ರಿಯೆಯ ಬಗ್ಗೆಯೇ ನಿರಾಶರಾಗದಂತೆ ಎಚ್ಚರವಹಿಸಬೇಕಾಗಿದೆ ಎಂದರು.

ಗಣಿಗಾರಿಕೆಯ ವಿಚಾರದಲ್ಲಿ ವಹಿಸಿದ ಕ್ರಮಕ್ಕಾಗಿ ನೊಬೆಲ್ ಪ್ರಶಸ್ತಿ ನಿರೀಕ್ಷಿಸುತ್ತಿರುವ ಬಿ.ಎಸ್.ಯಡಿಯೂರಪ್ಪನವರ ಆಡಳಿತ ಸದಾನಂದ ಗೌಡರ ಹೆಸರಿನಲ್ಲಿ ಮುಂದುವರಿಯುತ್ತಿದ್ದು, ಈ ಸರ್ಕಾರ ವರದಿಯನ್ನು ಒಪ್ಪುತ್ತದೆ ಎಂದು ನಿರೀಕ್ಷಿಸುವಂತಿಲ್ಲ, ಮುಖ್ಯವಾಗಿ ಜನ ಚಳುವಳಿಗಳು ಜನ ಜಾಗೃತಿಯ ವಿಚಾರಕ್ಕೆ ಒತ್ತು ನೀಡಬೇಕೆಂದು ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಡಾ. ಕೆ.ಮರುಳಸಿದ್ದಪ್ಪನವರು ಅಭಿಪ್ರಾಯಪಟ್ಟರು.

ಬಳ್ಳಾರಿಯಲ್ಲಿ ಹಣವಂತರ ನಿರಂಕುಶ ಪ್ರಭುತ್ವವೇ ಸೃಷ್ಟಿಯಾಗಿರುವುದನ್ನು ಲೋಕಾಯುಕ್ತ ವರದಿ ಗುರುತಿಸಿದೆ. ಇದು ಅಪಾಯಕಾರಿ. ಆದರೆ ಅಣ್ಣಾ ಹಜಾರೆಯವರ ಸ್ವಂತ ಗ್ರಾಮದಲ್ಲಿ ಗಾಂಧಿವಾದದ ಹೆಸರಿನಲ್ಲಿ ನಿರಂಕುಶ ಪ್ರಭುತ್ವ ಸೃಷ್ಟಿಯಾಗಿದೆ. ಮಹಾರಾಷ್ಟ್ರದ ಆ ಗ್ರಾಮದಲ್ಲಿ ಜನರು ಮಾಂಸಾಹಾರ ತಿನ್ನುವಂತಿಲ್ಲ. ಹುಡುಗ-ಹುಡುಗಿ ಮಾತನಾಡುವಂತಿಲ್ಲ, ಸಿಗರೇಟು ಸೇದುವಂತಿಲ್ಲ. ಇದೂ ಕೂಡಾ ತುಂಬಾ ಅಪಾಯಕಾರಿ. ಪ್ರಜಾಪ್ರಭುತ್ವ ವಿರೋಧಿ. ಜನರು ಈ ವಿಷಯದ ಬಗೆಗೂ ಎಚ್ಚರ ವಹಿಸಬೇಕು ಎಂದು ಖ್ಯಾತ ಚಿಂತಕ ಜಿ.ಕೆ. ಗೋವಿಂದರಾವ್ ಅಭಿಪ್ರಾಯಪಟ್ಟರು.

ದುಂಡು ಮೇಜಿನ ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಮುಖಂಡರೂ, ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ, ಎಸ್.ವೈ.ಗುರುಶಾಂತ್, ಜಿ.ಎನ್.ನಾಗರಾಜ್, ಮಾಜಿ ಸಚಿವೆ ಬಿ.ಟಿ ಲಲಿತಾನಾಯಕ್, ಸಿಪಿಐ ರಾಜ್ಯ ಮುಖಂಡರಾದ ಬಿ.ವಿ.ಲೋಕೇಶ್, ವಿಜ್ಞಾನಿ ಡಾ. ಎಸ್.ಚಟರ್ಜಿ

ಪುಟ 14ಕ್ಕೆ

ಜ್ಞಾನಪೀಠ ಪುರಸ್ಕೃತ ಯು.ಆರ್.ಅನಂತಮೂರ್ತಿ

ಭ್ರಷ್ಟಾಚಾರಕ್ಕೂ ನಾವು ಆಯ್ಕೆ ಮಾಡಿಕೊಂಡಿರುವ ಬಂಡವಾಳಶಾಹಿ ಡೆವಲೆಫ್‌ಮೆಂಟ್‌ಗೂ ಸಂಬಂಧವಿದೆ. ನಾವು ಆಯ್ಕೆ ಮಾಡುವ ಜನಪ್ರತಿನಿಧಿಗಳು ಸಾಮಾನ್ಯರಿಂದ ಓಟು ಪಡೆಯುತ್ತಾರೆ. ಆದರೆ ಅವರು ತಮ್ಮ ಚುನಾವಣೆಗೆ ಹಣಖರ್ಚು ಮಾಡುವ ಸಂಘ ಸಂಸ್ಥೆಗಳ ಹಿತ ಕಾಯಾಲು ಸರ್ಕಾರ ನಡೆಸುತ್ತಾರೆ. ಈಗ ಎಲ್ಲ ಪಕ್ಷಗಳೂ ಧನಾಭಿವೃದ್ಧಿ ಮಾತ್ರ ಗುರಿಯಾಗಿರುವ ಅಮೆರಿಕನ್ ಮಾದರಿಯ 'ಡೆವಲಪ್‌ಮೆಂಟ್'ಗಾಗಿ ದುಡಿಯುತ್ತವೆ. ಗಾಂಧಿಯವರ ಸರ್ವೋದಯ ತತ್ವ ಈಗ ನಮ್ಮ ಗುರಿಯಾಗಿ ಉಳಿದಿಲ್ಲ. ಇದು ನಮ್ಮ ದುರಂತದ ಮೂಲ.

ಲೋಕಪಾಲರು ಗಣಿಗಾರಿಕೆಯಲ್ಲಿ ದೇಶದ ಬೊಕ್ಕಸಕ್ಕೆ ನಷ್ಟವನ್ನುಂಟುಮಾಡಿದ ಅಧಿಕಾರಿಗಳು ಯಾರು, ಮಂತ್ರಿಗಳು ಯಾರು, ಅವರ ಹಿನ್ನೆಲೆಯಲ್ಲಿದ್ದ ರಾಜಕಾರಣಿಗಳು ಯಾರು ಎಂಬುದನ್ನು ಪತ್ತೆ ಮಾಡಿ ವರದಿ ಮಾಡಿದ್ದಾರೆ. ಆದರೆ ನಮ್ಮ ಸರ್ಕಾರ ಅವರ ವರದಿಯಾಧಾರದ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುವಂತೆ ಕಾಣುತ್ತಿಲ್ಲ. ಅಂದರೆ ನಮ್ಮ ಸರ್ಕಾರ ಪ್ರಜಾಸತ್ತೆಯ ಮೂಲೋದ್ದೇಶವನ್ನೇ ನಿರ್ಲಕ್ಷಿಸಿ ತಮ್ಮ ಅಧಿಕಾರವನ್ನು ಏನಕೇನ ಉಳಿಸಿಕೊಳ್ಳಲು ಹೊಂಚುತ್ತ ಇದೆ.ಇದಕ್ಕೆ ಪರಿಹಾರ ಜನಜಾಗೃತಿ ಮಾತ್ರ. ಕಮ್ಯೂನಿಸ್ಟರ ನೇತೃತ್ವದಲ್ಲಿ ಜನಜಾಗೃತಿಯ ಕೆಲಸ ಶುರುವಾಗಬೇಕೆಂದು ನನ್ನ ಆಸೆ.

- ಅನಂತಮೂರ್ತಿ

ಕಳುಹಿಸಿದ ಲಿಖಿತ ಮಾತುಗಳು

ನಿರ್ಣಯಗಳು

- ಕೂಡಲೇ ಲೋಕಾಯುಕ್ತ ಮೊದಲನೇ ಹಾಗೂ ಎರಡನೆ ವರದಿಯಲ್ಲಿ ನಮೂದಾದ ಮುಖ್ಯಮಂತ್ರಿಗಳು, ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು, ಮಾಜಿ ಮಂತ್ರಿಗಳು ಇತರ ರಾಜಕಾರಣಿಗಳ ಮೇಲೆ ತಕ್ಷಣ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಬಂಧಿಸಬೇಕು, ತುರ್ತು ತನಿಖೆ ಮಾಡಿ ಕಠಿಣ ಶಿಕ್ಷೆ ವಿಧಿಸಬೇಕು.
- ಇವರಿಂದ ರಾಜ್ಯ ಬೊಕ್ಕಸಕ್ಕೆ, ರಾಜ್ಯದ ಜನತೆಗೆ ಉಂಟಾದ ನಷ್ಟವನ್ನು ತುಂಬಿಕೊಳ್ಳಲು ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು, ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಬೇಕು.
- ಲೋಕಾಯುಕ್ತರ ವರದಿಯಲ್ಲಿ ಸ್ಪಷ್ಟವಾಗಿ ಹೆಸರಿಸಲ್ಪಟ್ಟ ಅಧಿಕಾರಿಗಳ ಮೇಲೆ ಕೂಡ ಕೂಡಲೇ ಕ್ರಮ ಆರಂಭಿಸಬೇಕು.
- ಜನಾರ್ಧನ ರೆಡ್ಡಿ ಗಣಿ ವ್ಯವಹಾರವೇ ಅಲ್ಲದೆ ಭೂ ಅವ್ಯವಹಾರ ಮೊದಲಾದ ಅನೇಕ ಅವ್ಯವಹಾರಗಳನ್ನು ಸೇರಿಸಿ ಸಿಬಿಐ ತನಿಖೆಗೆ ಒಪ್ಪಿಸಬೇಕು.

ಉಡುಪಿ: ಮನೆ, ನಿವೇಶನಗಳಿಗಾಗಿ, ಹಕ್ಕು ಪತ್ರಗಳಿಗಾಗಿ ಜಿಲ್ಲೆಯಲ್ಲಿ ರೈತ ಕೃಷಿ ಕೂಲಿಕಾರರ ಹೋರಾಟ



ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಮನೆಗಳಿಗಾಗಿ, ಮನೆ ನಿವೇಶನಗಳಿಗಾಗಿ, ಹಕ್ಕು ಪತ್ರಗಳಿಗಾಗಿ, ಬಗರ್‌ಹುಕುಂ ಸಾಗುವಳಿ ಸಕ್ರಮಕ್ಕಾಗಿ, 2006ರ ಅರಣ್ಯ ಹಕ್ಕುಗಳ ಕಾಯಿದೆ ಜಾರಿಗಾಗಿ ಬಲವಂತದ ಭೂ ಸ್ವಾಧೀನ ಕೈಬಿಡುವುದಕ್ಕಾಗಿ, ಭೂಮಿ ಕಳೆದುಕೊಳ್ಳುವ ರೈತರಿಗೆ ಮತ್ತು ಕೆಲಸ ಕಳೆದುಕೊಳ್ಳುವ ಕೃಷಿ ಕೂಲಿಕಾರರಿಗೆ ಗರಿಷ್ಠ ಪರಿಹಾರ ನೀಡಲು ಒತ್ತಾಯಿಸಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗೆ ಆಗ್ರಹಿಸಿ, ರಾಜ್ಯಾದ್ಯಂತ ನಡೆದ ಹೋರಾಟದ ಭಾಗವಾಗಿ ಉಡುಪಿ ಜಿಲ್ಲೆಯಲ್ಲಿ-ಆರಂಭದಲ್ಲಿ ಕುಂದಾಪುರದಲ್ಲಿ ಅನಂತರ ಉಡುಪಿ ತಾಲ್ಲೂಕಿನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಕೂಡಲೇ ಇತ್ಯರ್ಥಪಡಿಸಲು ಒತ್ತಾಯಿಸಿ ಹಲವು ಹೋರಾಟಗಳು ನಡೆದಿವೆ.



ಕುಂದಾಪುರದಲ್ಲಿ ತಾಲ್ಲೂಕು ಕಚೇರಿಯ ಎದುರು, ಅನಂತರ ಗ್ರಾಮ ಪಂಚಾಯತ್ ಎದುರು ಅರ್ಜಿಗಳನ್ನು ಕೂಡಲೇ ಇತ್ಯರ್ಥಪಡಿಸಲು ಒತ್ತಾಯಿಸಿ ಮತ ಪ್ರದರ್ಶನ ಹಾಗೂ ಸಾಮೂಹಿಕ ಧರಣಿ ಕಾರ್ಯಕ್ರಮಗಳು ನಡೆದಿವೆ.

ಉಡುಪಿ ತಾಲ್ಲೂಕಿನಲ್ಲಿ ಮುಖ್ಯವಾಗಿ ನಗರಸಭೆಯ ವ್ಯಾಪ್ತಿಯಲ್ಲಿ ಮನೆಗಳಿಗಾಗಿ ಮನೆ ನಿವೇಶನಗಳಿಗಾಗಿ, ಹಕ್ಕು ಪತ್ರಗಳಿಗಾಗಿ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ತಾಲ್ಲೂಕು ಘಟಕದ ನೇತೃತ್ವದಲ್ಲಿ ಅರ್ಜಿಗಳನ್ನು ಬರೆಯಲು ಆರಂಭಿಸಿದಾಗ, ಆಡಳಿತ ಪಕ್ಷದ ಕಾರ್ಯಕರ್ತರಿಂದ ಹಾಗೂ ಕೆಲವು ಮುಖಂಡರಿಂದ ಆಕ್ಷೇಪ ಹಾಗೂ ಕಿರುಕುಳ ಕೊಡುವುದು ಆರಂಭವಾಯಿತು. ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ತಾಲ್ಲೂಕು ಘಟಕದ ಸಂಚಾಲಕರಾದ ಕಾ॥ ದೋಗು ಸುವರ್ಣನವರಿಗೆ ದೂರವಾಣಿ ಕರೆ ಮೂಲಕ ಬೆದರಿಕೆ, ಪೋಲೀಸರಿಂದ ಹಾಗೂ ಪೋಲೀಸ್ ಅಧಿಕಾರಿಗಳಿಂದ ಅರ್ಜಿ ಬರೆಯುವುದನ್ನು ನಿಲ್ಲಿಸಲು ಒತ್ತಡ ಇತ್ಯಾದಿ ಕಿರುಕುಳ ಕೊಡುವ ಪರಿಸ್ಥಿತಿ ಬಂತು. ಆದರೂ 3-4 ಪ್ರದೇಶಗಳಲ್ಲಿ ಅರ್ಜಿ ಬರೆಯುವುದನ್ನು ನಿಲ್ಲಿಸಲಿಲ್ಲ.

ಆಚಾರ್ಯರ ಅಪಪ್ರಚಾರ-ಆರೋಪ ಲೆಕ್ಕಿಸದ ಕೂಲಿಕಾರರು:

ಜಿಲ್ಲೆಯಲ್ಲಿ ನಿವೇಶನರಹಿತರಿಗೆ ನಿವೇಶನ ಒದಗಿಸುವ ಕುರಿತು ಜೂನ್ ತಿಂಗಳ 25 ರಂದು ಶನಿವಾರ ಉಡುಪಿಯಲ್ಲಿ ತ್ರೈಮಾಸಿಕ ಕೆಡಿಪಿ ಸಭೆಯ ಅನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಸಚಿವರಾದ ಡಾ॥ ವಿ.ಎಸ್.ಆಚಾರ್ಯ ಅವರು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಮನೆ ನಿವೇಶನ ಅರ್ಜಿ ನಮೂನೆಗೆ 50 ರೂ. ಸಂಗ್ರಹಿಸುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಕುರಿತು ಸಂಘದ ರಾಜ್ಯಾಧ್ಯಕ್ಷ ಕಾ॥ ನಿತ್ಯಾನಂದ ಸ್ವಾಮಿ ಸ್ಪಷ್ಟೀಕರಣ ನೀಡಿರುತ್ತಾರೆ.

ರಾಜ್ಯದಲ್ಲಿ ಮನೆ ನಿವೇಶನರಹಿತರಿಂದ ಅರ್ಜಿಗಳನ್ನು ಹಾಕಿಸಿ ಅರ್ಹರಿಗೆ ಸರ್ಕಾರದಿಂದ ಮನೆಗಳು ಸಿಗುವಂತೆ ಮಾಡುವ ಹೋರಾಟವನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಅರ್ಜಿ ಸಲ್ಲಿಸುವ ಕೆಲಸ ನಡೆದಿದೆ. ನಿವೇಶನ ಅರ್ಜಿಗಳೊಂದಿಗೆ ಸಂಘದ ಸದಸ್ಯತ್ವ ಶುಲ್ಕ ಹಾಗೂ ಹೋರಾಟದ ನಿಧಿಯನ್ನು ಸಂಗ್ರಹಿಸಲಾಗುತ್ತದೆ. ಆಯಾ ಮಟ್ಟದ ಸಮಿತಿಗಳ ಉಸ್ತುವಾರಿಯಲ್ಲಿ ನಡೆಯುವ ಈ ಹಣ ಸಂಗ್ರಹದಲ್ಲಿ ಯಾವುದೇ ದುರ್ಬಳಕೆಗೆ ಅವಕಾಶ ಇರುವುದಿಲ್ಲ. ಸಂಘಕ್ಕೆ ಸೇರಬಯಸುವವರು ಸ್ವ ಇಚ್ಛೆಯಿಂದ ಸಂಘದ ನಿಯಮಗಳಿಗೆ ಅನುಗುಣವಾಗಿ ನಿಗದಿತ ಶುಲ್ಕವನ್ನು ನೀಡುತ್ತಿರುತ್ತಾರೆ. ಎಂಬುದು ನಿತ್ಯಾನಂದ ಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಸಚಿವರ ಹೇಳಿಕೆ ಜನರ ತಿರಸ್ಕಾರ: 'ಹಣ ವಸೂಲಿ ಅನಧಿಕೃತ, ಸರ್ಕಾರದ ಒಪ್ಪಿಗೆ ಇಲ್ಲ, ಇದನ್ನು ಮಾನ್ಯ ಮಾಡ ಲಾಗುವುದಿಲ್ಲ. ಯಾರೂ ಇಂತಹವರಿಗೆ ಹಣ ಕೊಡಬಾರದು ಎಂದು ಸಚಿವರು ಹೇಳಿದ್ದನ್ನು ಸಾರ್ವಜನಿಕರು ಯಾರು ಗಣನೆಗೆ ತೆಗೆದುಕೊಂಡಿಲ್ಲ. ಅರ್ಜಿದಾರರ ಸಂಖ್ಯೆ ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚಾಗಿ ಆಗಸ್ಟ್ 9, 2011 ರಂದು ಸುಮಾರು 2000ಕ್ಕೂ ಮಿಕ್ಕಿ ಅರ್ಜಿದಾರರ ಬೃಹತ್ ಮೆರವಣಿಗೆಯ ಮೂಲಕ ಉಡುಪಿ ತಹಶೀಲ್ದಾರ್ ಕಛೇರಿಯ ಎದುರು ಮತ ಪ್ರದರ್ಶನ ನಡೆಸಿ 3,200 ಅರ್ಜಿಗಳನ್ನು ಗ್ರಾಮವಾರು ವಿಂಗಡಿಸಿ ಮನವಿಯೊಂದಿಗೆ ಅರ್ಪಿಸಲಾಯಿತು.

ತಹಶೀಲ್ದಾರ್‌ರವರನ್ನು ಭೇಟಿಯಾಗಿ ಅನಂತರ ವಿಚಾರಿಸಿದಾಗ, ಗ್ರಾಮ ಪಂಚಾಯತ್‌ಗಳಿಗೆ ಅರ್ಜಿಗಳನ್ನು ಕಳುಹಿಸಲಾಗಿದೆ. ಅಲ್ಲಿ ಅರ್ಜಿದಾರರಿಗೆ ರಶೀದಿಯೊಂದಿಗೆ ವಿಚಾರಣೆ ನಡೆಸ ಲಾಗುತ್ತದೆ. ಸ್ವಂತ ಮನೆಯ ನಿವೇಶನ ಇಲ್ಲದವರನ್ನು

ಪುಟ 14ಕ್ಕೆ

ಅಕ್ರಮ ಆಹಾರ ದಾಸ್ತಾನು ಬಯಲಿಗೆಳೆದ ಡಿವೈಎಫ್ಐ

ಬೆಳ್ತಂಗಡಿ ತಾಲೂಕಿನಲ್ಲಿ ಶಾಲೆಗಳಿಗೆ ವಿತರಿಸುವ ಬಿಸಿಯೂಟದ ಅಕ್ಕಿ ವಿತರಣೆಯಲ್ಲಿ ಅವ್ಯವಹಾರ ನಡೆಯುತ್ತಿರುವುದನ್ನು ಬೆಳ್ತಂಗಡಿ ತಾಲೂಕು ಡಿವೈಎಫ್ಐ ಪತ್ತೆ ಹಚ್ಚಿದ್ದು, ತನಿಖೆ ನಡೆಸುವಂತೆ ತಾಲೂಕಿನ ತಹಶೀಲ್ದಾರರಿಗೆ ದೂರು ನೀಡಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿತ್ತು. ಈ ದೂರಿನ ಮೇಲೆ ಬೆಳ್ತಂಗಡಿ ಪೋಲೀಸರು ಆಹಾರ ಧಾನ್ಯಗಳ ದಾಸ್ತಾನು ಮಳಿಗೆಗೆ ಸೆಪ್ಟೆಂಬರ್ 2 ರಂದು ದಾಳಿ ನಡೆಸಿದರು.

ದಾಳಿ ಮತ್ತು ಪರಿಶೀಲನೆ ವೇಳೆ ಡಿವೈಎಫ್ಐ ಮುಖಂಡ ಶೇಖರ ಲಾಯಿಲ ಅವರು ಹಾಜರಾಗಿ ವಿತರಣೆಗೆ ಸಿದ್ಧಪಡಿಸಿದ್ದ ಪ್ರತಿ ಚೀಲಗಳಲ್ಲಿಯೂ ಇರಬೇಕಾದುದಕ್ಕಿಂತ 3 ರಿಂದ 10 ಕೆ.ಜಿ ವರೆಗೆ ಕಡಿಮೆ ಆಹಾರ ಸಾಮಗ್ರಿಗಳಿರುವುದನ್ನು ತೋರಿಸಿಕೊಟ್ಟಿದ್ದು ದೃಢಪಟ್ಟಿರುತ್ತದೆ. ಅಲ್ಲದೆ ದಾಖಲೆ ಗಳಿಲ್ಲದ 5 ಕ್ವಿಂಟಲ್ ಹೆಚ್ಚುವರಿ ಅಕ್ಕಿ ಚೀಲಗಳೂ ಪತ್ತೆಯಾದುವು. ಪರಿಶೀಲನೆ ವೇಳೆ ತಹಶೀಲ್ದಾರ್ ಮತ್ತು ಅಕ್ಷರ ದಾಸೋಹದ ತಾಲೂಕು ಅಧಿಕಾರಿ ಹಾಜರಿದ್ದು, ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.


ಬಿಸಿಯೂಟದ ಆಹಾರ ವಿತರಣೆಯಲ್ಲಿನ ಅಕ್ರಮ ಊರೂರಲ್ಲೂ ಸುದ್ದಿಯಾಗಿದೆ; ಜನ ಡಿವೈಎಫ್ಐಯನ್ನು ಅಭಿನಂದಿಸುತ್ತಿದ್ದಾರೆ.

ಮಂಗಳೂರು : ಹಕ್ಕು, ಸವಲತ್ತುಗಳಿಗಾಗಿ ಕಟ್ಟಡ ಕಾರ್ಮಿಕರ ಆಗ್ರಹ

ಆಧುನಿಕ ನಗರಗಳ ನಿರ್ಮಾಣದಲ್ಲಿ ಕಟ್ಟಡ ಕಾರ್ಮಿಕರ ಪಾತ್ರ ಪ್ರಮುಖವಾದುದು. ಕಳೆದ ಐದಾರು ವರ್ಷಗಳಿಂದ ಮಂಗಳೂರು ನಗರದಲ್ಲಿ ಕಟ್ಟಡ ಕಾರ್ಮಿಕರು ಸಂಘಟನೆಯನ್ನು ಕಟ್ಟಿ ತಮಗಿರುವ ಹಕ್ಕು ಮತ್ತು ಸವಲತ್ತುಗಳನ್ನು ಪಡೆಯಲು ಸಿಐಟಿಯು ನೇತೃತ್ವದ ಕಟ್ಟಡ ಮತ್ತು ಇತರ ನಿರ್ಮಾಣ

ಕಾರ್ಮಿಕರ ಅಖಿಲ ಭಾರತ ಒಕ್ಕೂಟದ ಅಡಿಯಲ್ಲಿ ಪ್ರಯತ್ನಿಸುತ್ತಿದ್ದು, ಸದಸ್ಯ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಟ್ಟಡ ಕಾರ್ಮಿಕರ ನಗರ ಸಮಾವೇಶವು ಸೆಪ್ಟೆಂಬರ್ 4 ರಂದು ನಡೆದಿದ್ದು, ಸಂಘಟನೆಯನ್ನು ಮುನ್ನಡೆಸುವ ಬಗ್ಗೆ ಚಿಂತನೆ ನಡೆದಿದೆ.

ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸಮಾವೇಶವನ್ನು ಉದ್ಘಾಟಿಸಿದರು. ಸಮಾವೇಶಕ್ಕೆ ಶುಭ ಕೋರಿ ಡಿವೈಎಫ್ಐ ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್, ಎಸ್‌ಎಫ್‌ಐ ದ.ಕ.ಜಿಲ್ಲಾ ಕಾರ್ಯದರ್ಶಿ ಮನೋಜ್ ವಾಮಂಜೂರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಿಡಬ್ಲ್ಯೂಎಫ್ಐ ಮಂಗಳೂರು ನಗರಾಧ್ಯಕ್ಷರಾದ ಶಶಿಧರ ಶಕ್ತಿನಗರ ಅವರು ವಹಿಸಿದ್ದರು. ಕಾರ್ಯದರ್ಶಿ ವಾಸುದೇವ ಜೆ.ಪಿ. ವರದಿ ಮಂಡಿಸಿದರು. ಪದಾಧಿಕಾರಿಗಳಾದ ಯೋಗೀಶ್ ಜಪ್ಪಿನಮೊಗರು, ಅಶೋಕ್ ಶ್ರೀಯಾನ್, ರವಿಚಂದ್ರ ಕೊಂಚಾಡಿ, ಉಮಾಶಂಕರ್, ದಿನೇಶ್ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು. ಕೇಂದ್ರದ ಕಾರ್ಮಿಕ ವಿರೋಧಿ ನೀತಿಗಳನ್ನು ಪ್ರತಿಭಟಿಸಲು ಸಮಾವೇಶ ಕರೆ ನೀಡಿದೆ.



ಭಯೋತ್ಪಾದನೆಯ ಪಿಡುಗನ್ನು ಸಮಗ್ರವಾಗಿ ಎದುರಿಸಬೇಕಾಗಿದೆ

(ಸೆಪ್ಟೆಂಬರ್ 8, 2011 ರ 'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸಂಪಾದಕೀಯ)

ಸಂಸತ್ತು ಅಧಿವೇಶನದಲ್ಲಿರುವುದರಿಂದಾಗಿ ಕಟ್ಟೆಚ್ಚರದಲ್ಲಿದ್ದ ದೇಶದ ರಾಜಧಾನಿಯಲ್ಲೇ, ಕೇಂದ್ರ ಗೃಹಮಂತ್ರಿಗಳ ಪ್ರಕಾರ ದಿಲ್ಲಿ ಪೋಲೀಸ್ ವ್ಯವಸ್ಥೆಯನ್ನು ಬಲಗೊಳಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದರೂ, ಸಂಸತ್ತಿನ ಸಮೀಪವೇ ಇರುವ ಬಿಗಿ ಕಾವಲಿನ ಹೈಕೋರ್ಟಿನ ದ್ವಾರದಲ್ಲಿಯೇ ತೀಕ್ಷ್ಣ ಸ್ವರೂಪದ ಸ್ಫೋಟ ಮತ್ತೆ ಅಮಾಯಕ ಜೀವಗಳನ್ನು ಬಲಿ ತೆಗೆದುಕೊಂಡಿದೆ. ಭಯೋತ್ಪಾದಕ ದಾಳಿಗಳ ತನಿಖೆ, ಮತ್ತು ಅವನ್ನು ಎಸಗಿದವರನ್ನು ಶಿಕ್ಷಿಸುವ ವ್ಯವಸ್ಥೆ ಸ್ಥಾಪಿಸುವಂತೆ, ಇಂತಹ ದಾಳಿಗಳ ಪೂರ್ವನಿರೀಕ್ಷೆ ಮತ್ತು ಅವು ಘಟಿಸದಂತೆ ತಡೆಯುವ ಪರಿಣಾಮಕಾರಿ ವ್ಯವಸ್ಥೆಗಳನ್ನು ಕೂಡ ಸ್ಥಾಪಿಸಬೇಕು ಎಂಬುದನ್ನು ಒಪ್ಪಿಕೊಂಡರೂ ಕೇಂದ್ರ ಸರಕಾರ ಇದುವರೆಗೆ ಏನೂ ಮಾಡಿಲ್ಲ. ಈ ವಿಷಯದಲ್ಲಿ ಯಾವುದೇ ಚಂಚಲತೆಯನ್ನು ದೇಶವಾಗಲೀ, ಜನತೆಯಾಗಲೀ ಇನ್ನು ಮುಂದೆ ಎಳ್ಳಷ್ಟೂ ಒಪ್ಪಿಕೊಳ್ಳುವುದಿಲ್ಲ.

ಮತ್ತೊಂದು ಭಯೋತ್ಪಾದಕ ಬಾಂಬ್ ಸ್ಫೋಟಗೊಂಡಿದೆ. ದೇಶದ ರಾಜಧಾನಿ ನವದೆಹಲಿಯಲ್ಲಿ. ಸಪ್ಟಂಬರ್ 7ರಂದು ಹೈಕೋರ್ಟ್ ತೆರೆದ ಕೂಡಲೇ, ಸುಮಾರು 10 ಗಂಟೆಯ ವೇಳೆಗೆ ಒಂದು ತೀಕ್ಷ್ಣ ಸ್ವರೂಪದ ಸ್ಫೋಟ ಈಗಾಗಲೇ 13 ಅಮಾಯಕ ಜೀವಗಳನ್ನು ಬಲಿ ತೆಗೆದುಕೊಂಡಿದೆ, ಇತರ 59 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಗಳ ಗಂಭೀರ ಸ್ವರೂಪಗಳನ್ನು ನೋಡಿದರೆ, ಬಲಿಯಾದವರ ಸಂಖ್ಯೆ ಇನ್ನಷ್ಟು ಏರುವ ಸಾಧ್ಯತೆಯೂ ಇದೆ.

ಈ ದಾಳಿ ಸಂಸತ್ತು ಅಧಿವೇಶನದಲ್ಲಿರುವಾಗಲೇ, ಅದರ ಸಮೀಪವೇ ಇರುವ ಬಿಗಿ ಕಾವಲಿನ ಹೈಕೋರ್ಟಿನ ದ್ವಾರದಲ್ಲಿಯೇ ನಡೆದಿದೆ. ಸಂಸತ್ತು ಅಧಿವೇಶನದಲ್ಲಿರುವಾಗ ದಿಲ್ಲಿಯನ್ನು 'ಹೈ ಅಲರ್ಟ್'ನಲ್ಲಿ ಅಂದರೆ



ಕಟ್ಟೆಚ್ಚರದಲ್ಲಿ ಇಟ್ಟಿರುವುದು ವಾಡಿಕೆ. ಆದರೂ ಈ ದಾಳಿ ನಡೆದಿದೆ. ಅಷ್ಟೇ ಅಲ್ಲ, ಕೇಂದ್ರ ಗೃಹಮಂತ್ರಿಗಳು ಸಂಸತ್ತಿಗೆ ನೀಡಿರುವ ಹೇಳಿಕೆಯ ಪ್ರಕಾರ "ದಿಲ್ಲಿ ಪೋಲೀಸ್ ವ್ಯವಸ್ಥೆಯನ್ನು ಬಲಗೊಳಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಇಂತಹ ಸಾಮರ್ಥ್ಯವನ್ನು ಕಟ್ಟಿ ಬೆಳೆಸಿದ್ದರೂ, ದಿಲ್ಲಿ ಪೋಲೀಸ್ ಕಟ್ಟೆಚ್ಚರದಲ್ಲಿ ಇದ್ದರೂ ಇಂದು ದುರಂತ ಘಟನೆ ಸಂಭವಿಸಿದೆ".

ಭಯೋತ್ಪಾದನೆ ಬಗ್ಗೆ ಶೂನ್ಯ ಸಹನೆ

ಇದು ನಿಜಕ್ಕೂ ಕಳವಳಕಾರಿ. ಒಂದೆಡೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ಪಡೆದಿರುವ ಎಲ್ಲ ರಾಜಕೀಯ ಪಕ್ಷಗಳು ಒಂದಾಗಿ ಈ ಭಯೋತ್ಪಾದಕ ದಾಳಿಯನ್ನು ಖಂಡಿಸಿ, ಭಯೋತ್ಪಾದನೆಯನ್ನು ಸೋಲಿಸುವ ನಮ್ಮ ಪ್ರಯತ್ನಗಳಲ್ಲಿ ಶಾಂತಚಿತ್ತದಿಂದ, ಐಕ್ಯತೆಯಿಂದ ಇರಬೇಕು ಎಂದು ಜನತೆಗೆ ಮನವಿ ಮಾಡಿವೆ. ಇನ್ನೊಂದೆಡೆ, ಈ ವಿಷಯದಲ್ಲಿ ಸರಕಾರಕ್ಕೆ ಸಮಸ್ತ ರಾಜಕೀಯ ಪಂಕ್ತಿಯ ಬೆಂಬಲ ದೊರೆತಿದ್ದರೂ, ಅದೇಕೋ ಇಂತಹ ದಾಳಿಗಳನ್ನು ಹಿಮ್ಮೆಟ್ಟಿಸುವ ಪ್ರಯತ್ನಗಳು ದೇಶ ಮತ್ತು ಜನತೆ ಬಯಸುವ ರೀತಿಯಲ್ಲಿ ಯಶಸ್ವಿಯಾಗುತ್ತಿಲ್ಲ. ಭಯೋತ್ಪಾದನೆಯ ವಿರುದ್ಧ ದೇಶದ ದೃಢ ಇಚ್ಛೆ ಈ ಪ್ರಯತ್ನಗಳ ಫಲಿತಾಂಶಗಳಲ್ಲಿ ಇನ್ನೂ ಉತ್ತಮ ಅಭಿವ್ಯಕ್ತಿ ಕಾಣಬೇಕಾಗಿದೆ. "ಈ ಭೀಕರ ಅಪರಾಧವನ್ನು ಎಸಗಿದವರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸುವ ದೃಢ ನಿರ್ಧಾರ ಮಾಡಿದ್ದೇವೆ" ಎಂದು ಕೇಂದ್ರ ಗೃಹಮಂತ್ರಿಗಳು ಸಂಸತ್ತಿಗೆ ಭರವಸೆ ನೀಡಿದ್ದರೂ ಹಾಗಾಗುತ್ತಿಲ್ಲ.

ಈ ಭರವಸೆ ಆದಷ್ಟು ಬೇಗನೇ ಈಡೇರಬೇಕು. ನಮ್ಮ ದೇಶದಲ್ಲಿ ಭಯೋತ್ಪಾದನೆಗೆ ಧರ್ಮವಿಲ್ಲ, ಜಾತಿ ಅಥವ ಪ್ರದೇಶವಿಲ್ಲ. ಸರಳವಾಗಿ ಹೇಳುವುದಾದರೆಭಯೋತ್ಪಾದನೆಯೆಂಬುದು ರಾಷ್ಟ್ರ–ವಿರೋಧಿ. ದೇಶ ಭಯೋತ್ಪಾದನೆಯನ್ನು ಎಳ್ಳಷ್ಟೂ ಸಹಿಸಿಕೊಳ್ಳಬಾರದು.

ಚಂಚಲತೆ ಸಲ್ಲದು

26/11 ಮುಂಬೈ ದಾಳಿಗಳ ನಂತರ ಇಂತಹ ಭಯೋತ್ಪಾದಕ ಕೃತ್ಯಗಳನ್ನು ಎದುರಿಸಲು ದೇಶ ಹೊಸ ಸಂಸ್ಥೆಗಳನ್ನು, ಪ್ರಾಧಿಕಾರಗಳನ್ನು ನಿರ್ಮಿಸಿತು. 'ರಾಷ್ಟ್ರೀಯ ತನಿಖಾ ಸಂಸ್ಥೆ'(ಎನ್ಐಎ)ಯನ್ನು ಸ್ಥಾಪಿಸಲಾಯಿತು. ಈ ದಾಳಿಯ ತನಿಖೆಯನ್ನು ಈಗ ಇದಕ್ಕೆ ವಹಿಸಲಾಗಿದೆ. ಸಂಸತ್ತಿನಲ್ಲಿ ಈ ಹೊಸ ಕಾನೂನುಗಳನ್ನು ಚರ್ಚಿಸುವಾಗ, ನಮ್ಮಲ್ಲಿ ಕೆಲವರು ಭಯೋತ್ಪಾದಕ ದಾಳಿಗಳ ತನಿಖೆ, ಮತ್ತು ಅವನ್ನು ಎಸಗಿದವರನ್ನು ಶಿಕ್ಷಿಸುವುದು ಮಹತ್ವದ್ದಾದರೂ, ಇಂತಹ ದಾಳಿಗಳ ಪೂರ್ವನಿರೀಕ್ಷೆ ಮತ್ತು ಅವು ಘಟಿಸದಂತೆ ತಡೆಯುವ ಪರಿಣಾಮಕಾರಿ ವ್ಯವಸ್ಥೆಗಳನ್ನು ಕೂಡ ಸ್ಥಾಪಿಸಬೇಕು ಎಂದು ಅಭಿಪ್ರಾಯ ಪಟ್ಟಿದ್ದೆವು. ದೇಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಬೇಹುಗಾರಿಕೆ ಸಂಸ್ಥೆಗಳ ಆಂತರಿಕ ಸಾಮರ್ಥ್ಯವನ್ನು ಬಲಪಡಿಸುವುದಲ್ಲದೆ, ಅವುಗಳ ನಡುವೆ ಸಂಯೋಜನೆಯನ್ನು ಬಲಪಡಿಸುವ ಅಗತ್ಯವೂ ಇದೆ. ಆ ಸಂದರ್ಭದಲ್ಲಿ, 2008ರಲ್ಲಿ, ಇಂತಹ ಪ್ರಶ್ನೆಗಳಿಗೆ ಸ್ಪಂದಿಸುತ್ತ ಕೇಂದ್ರ ಗೃಹಮಂತ್ರಿಗಳು ಸರಕಾರ ಮೂರ್ತ ಪ್ರಸ್ತಾವಗಳೊಂದಿಗೆ ಸಂಸತ್ತಿನ ಮುಂದೆ ಬರುತ್ತದೆ ಎಂದು ತಿಳಿಸಿದ್ದರು. ದುರದೃಷ್ಟವಶಾತ್, ಇದುವರೆಗೂ ಇದು ಸಂಭವಿಸಿಲ್ಲ. ಇದನ್ನು ತುರ್ತಾಗಿ ಮಾಡಬೇಕಾಗಿದೆ. ಈ ವಿಷಯದಲ್ಲಿ ಯಾವುದೇ ಚಂಚಲತೆಯನ್ನು ದೇಶವಾಗಲೀ, ಜನತೆಯಾಗಲೀ ಇನ್ನು ಮುಂದೆ ಎಳ್ಳಷ್ಟೂ ಒಪ್ಪಿಕೊಳ್ಳುವುದಿಲ್ಲ.

ಭಯೋತ್ಪಾದನೆಯ ಇತ್ತೀಚಿನ ಈ ದಾಳಿಗೆ ಬಲಿಯಾದವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ, ತಮ್ಮ ಬದುಕನ್ನು ಕಳಕೊಂಡ ಅವರ ಕುಟುಂಬಗಳಿಗೆ ನಮ್ಮ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸುತ್ತೇವೆ. ಸರಕಾರ ಅವರಿಗೆ ಸೂಕ್ತ ಪರಿಹಾರ ಮತ್ತು ಪುನರ್ವಸತಿ ದೊರೆಯುವಂತೆ ಮಾಡಬೇಕು ಮತ್ತು ಗಾಯಗೊಂಡವರಿಗೆ ಅಗತ್ಯವಾದ ತುರ್ತು ಚಿಕಿತ್ಸೆ ಮತ್ತು ಗಮನ ಕೊಡಲು ಹಿಂಜರಿಯಬಾರದು.

ಈ ಮಾರಣಾಂತಿಕ ರಾಷ್ಟ್ರ–ವಿರೋಧಿ ಪಿಡುಗಿನಿಂದ ನಮ್ಮ ದೇಶವನ್ನು ಐಕ್ಯತೆಯಿಂದ ಮುಕ್ತಗೊಳಿಸೋಣ. *

ಶ್ರೀರಾಮುಲು ಶಾಸಕ ಸ್ಥಾನಕ್ಕೆ ರಾಜೀನಾಮೆ– ಜನಾರ್ದನ ರೆಡ್ಡಿ ಬಂಧನ ಸಿಪಿಐ(ಎಂ) ಪ್ರತಿಕ್ರಿಯೆ

ಆಂಧ್ರಪ್ರದೇಶದಲ್ಲಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆಯ ಕುರಿತು ತನಿಖೆ ನಡೆಸುತ್ತಿದ್ದ ಸಿಬಿಐ ಇಂದು ಬೆಳಿಗ್ಗೆ ರಾಜ್ಯದ ಮಾಜಿ ಸಚಿವ, ಬಳ್ಳಾರಿ ವಿಧಾನ ಪರಿಷತ್ ಸದಸ್ಯ ಜಿ. ಜನಾರ್ದನ ರೆಡ್ಡಿ ಅವರನ್ನು ಸಿಬಿಐ ಬಂಧಿಸಿ ವಿಚಾರಣೆಗೆ ಒಳಪಡಿಸಿರುವ ಕ್ರಮ ಸ್ವಾಗತಾರ್ಹವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಪ್ರತಿಕ್ರಿಯಿಸಿದೆ. ಆದರೆ ಕರ್ನಾಟಕದ ಲೋಕಾಯುಕ್ತರು ನೀಡಿದ ವರದಿಯಲ್ಲಿ ಬಳ್ಳಾರಿ ರೆಡ್ಡಿ ಸಹೋದರರ ವಿರುದ್ಧ ಮಾಡಿರುವ ಆರೋಪಗಳ ವಿಷಯದಲ್ಲಿ ಇದುವರೆಗೆ ಯಾವುದೇ ಕಾನೂನು ಕ್ರಮ ಜರುಗಿಸದಿರುವ ಬಗ್ಗೆ ಸಿಪಿಐ(ಎಂ) ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಕರ್ನಾಟಕ ಲೋಕಾಯುಕ್ತರು ಯಾರ್ಯಾರ ಮೇಲೆ ಆರೋಪಗಳನ್ನು ಮಾಡಿದ್ದಾರೆಯೋ ಅವರೆಲ್ಲರ ವಿರುದ್ಧ ಎಫ್.ಐ.ಆರ್. ದಾಖಲು ಮಾಡಿ, ಅವರೆಲ್ಲರನ್ನು ಬಂಧಿಸಿ ತನಿಖೆಗೆ ಒಳಪಡಿಸಬೇಕೆಂದೂ, ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಬೇಕೆಂದೂ ಹಾಗೂ ಕರ್ನಾಟಕದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆಯ ಸಮಗ್ರವಾದ ತನಿಖೆಗಾಗಿ ಇಡೀ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದೂ ಸಿಪಿಐ(ಎಂ) ಆಗ್ರಹಿಸುತ್ತದೆ.

ಯಡಿಯೂರಪ್ಪ ಸಂಪುಟದಲ್ಲಿ ಆರೋಗ್ಯ ಸಚಿವರಾಗಿದ್ದ ಶ್ರೀರಾಮುಲು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ರೆಡ್ಡಿ ಸಹೋದರರ ಆಣತಿಯಂತೆ ನಡೆದಿರುವ ಬೆಳವಣಿಗೆಯಾಗಿದೆ. ಸದಾನಂದಗೌಡರ ಮಂತ್ರಿ ಮಂಡಳದಲ್ಲಿ ಸ್ಥಾನ ಪಡೆಯುವುದೇ ಇದರ ಹಿಂದಿನ ಉದ್ದೇಶವಾಗಿದೆ. ರೆಡ್ಡಿ ಸಹೋದರರು ಪಕ್ಷದಲ್ಲಿ ಹಾಗೂ ಸರ್ಕಾರದಲ್ಲಿ ಕಳೆದುಕೊಂಡ ಪ್ರಭಾವವನ್ನು ಪುನಃ ಪಡೆದುಕೊಳ್ಳಲು ಶ್ರೀರಾಮುಲು ಮೂಲಕ ಒತ್ತಡ ತಂತ್ರ ಅನುಸರಿಸುತ್ತಿದ್ದಾರೆ. ಅಕ್ರಮ ಗಣಿಗಾರಿಕೆಯ ಮೂಲಕ ರಾಜ್ಯದ ಗಣಿ ಸಂಪತ್ತನ್ನು ಕೊಳ್ಳೆ ಹೊಡೆದಿರುವ ಇವರು ಶ್ರೀರಾಮುಲು ಅವರ ಪರಿಶಿಷ್ಠ ಪಂಗಡದ ಅನುಕಂಪಗಳಿಸುವ ಪ್ರಯತ್ನ ಇದಾಗಿದ್ದು ರಾಜ್ಯದ ಜನತೆ ಇಂತಹ ತಂತ್ರ ಕುತಂತ್ರಗಳಿಗೆ ಮೋಸಹೋಗಬಾರದೆಂದು ಸಿಪಿಐ(ಎಂ) ಮನವಿ ಮಾಡುತ್ತದೆ. +



ಗಣಿ ಲೂಟಿಕೋರ ಜನಾರ್ಧನ ರೆಡ್ಡಿ ಹೈದರಾಬಾದಿನ ಜೈಲಿನಲ್ಲಿ ಕಂಬಿ ಎಣಿಸುತ್ತಿರುವಾಗ... ಭೂಗಳ್ಳತನ ಪ್ರಕರಣಗಳಲ್ಲಿ ಯಡಿಯೂರ್ಪಪ ಜೈಲು ಪಾಲಾಗುವುದರ ಸನಿಹದಲ್ಲಿದ್ದಾರೆ. ಆದರೆ ಇಷ್ಟೇ ಸಾಕೆ?

ರೆಡ್ಡಿ ಜೈಲಿನಲ್ಲಿ... ಯೆಡ್ಡಿ ದಾರಿಯಲ್ಲಿ....

ಸಿತ್ಯಾನಂದಸ್ವಾಮಿ



ಕರ್ನಾಟಕದಲ್ಲಿ ಬಿಜೆಪಿಗೆ ಆಧಾರಸ್ತಂಭವಾಗಿದ್ದ, 2008ರ ಚುನಾವಣೆಯಲ್ಲಿ 224 ಕ್ಷೇತ್ರಗಳ ಪೈಕಿ 110 ಸೀಟು ಗೆಲ್ಲಲು ಅಗಾಧ ಕೊಡುಗೆ ನೀಡಿದ, ನಂತರ ಬಹುಮತಕ್ಕಾಗಿ ಆಪರೇಷನ್ ಕಮಲ ಮೂಲಕ ಪಕ್ಷೇತರರನ್ನು ಸೆಳೆಯುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಬಳ್ಳಾರಿ ರೆಡ್ಡಿಗಳಲ್ಲಿ ಒಬ್ಬರಾದ ಗಾಲಿ ಜನಾರ್ಧನರೆಡ್ಡಿ ಈಗ ಹೈದರಾಬಾದ್ ಚಂಚಲ್‌ಗುಡಾ ಜೈಲು ಸೇರಿದ್ದಾರೆ. ಅಕ್ರಮ ಗಣಿಗಾರಿಕೆ ಕುರಿತು ಆಂಧ್ರಪ್ರದೇಶದಲ್ಲಿ ದಾಖಲಾಗಿದ್ದ ಪ್ರಕರಣಗಳ ಹಿನ್ನೆಲೆಯಲ್ಲಿ ಜನಾರ್ಧನರೆಡ್ಡಿ ಮತ್ತು ಅವರ ಸಂಬಂಧಿ ಓಬಳಾಪುರ ಗಣಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀನಿವಾಸರೆಡ್ಡಿ ಅವರನ್ನು ಸಿಬಿಐ ಪೋಲೀಸರು ಸೆಪ್ಟೆಂಬರ್ 5ರಂದು ನಸುಕಿನಲ್ಲಿ ಅವರ ಬಳ್ಳಾರಿ ಬಂಗ್ಲೆಯಲ್ಲಿ ಬಂಧಿಸಿ ನಂತರ ಹೈದರಾಬಾದ್‌ನಲ್ಲಿರುವ ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ನ್ಯಾಯಾಲಯ ಅವರಿಬ್ಬರನ್ನೂ 14 ದಿನಗಳ ನ್ಯಾಯಾಂಗ ವಶಕ್ಕೆ ಒಪ್ಪಿಸಿತು.

ಜನಾರ್ಧನರೆಡ್ಡಿ ಮತ್ತು ಶ್ರೀನಿವಾಸರೆಡ್ಡಿಗಳ ನಿವಾಸಗಳ ಮೇಲೆ ಅಂದು ಬೆಳಗಿನ ಜಾವ ದಿಢೀರ್ ದಾಳಿ ನಡೆಸಿದ ಸಿಬಿಐ ತಂಡ 30 ಕೆ.ಜಿ.ಚಿನ್ನ, 4.5 ಕೋಟಿ ನಗದು, 11 ಕಾರುಗಳು, ಒಂದು ಹೆಲಿಕಾಪ್ಟರ್, ಒಂದು ರತ್ನ ಖಚಿತ ಸಿಂಹಾಸನ, ಕಂಪ್ಯೂಟರ್ಸ್, ಲ್ಯಾಪ್‌ಟಾಪ್, ಬ್ಯಾಂಕ್ ಖಾತೆಗಳು, ರಾಶಿ ರಾಶಿ ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. 2009ರಲ್ಲಿ ಅಂದಿನ ಆಂಧ್ರ ಮುಖ್ಯಮಂತ್ರಿ ರೋಸಯ್ಯ ಅವರು ಪ್ರತಿಪಕ್ಷಗಳ ಒತ್ತಡಕ್ಕೆ ಮಣಿದು ರೆಡ್ಡಿ ಸಹೋದರರ ಮೇಲಿನ ಅಕ್ರಮ ಗಣಿಗಾರಿಕೆ ಮತ್ತಿತರ ಆರೋಪಗಳ ಬಗ್ಗೆ ಸಿಬಿಐ ತನಿಖೆಗೆ ಆದೇಶ ನೀಡಿದ್ದರು. ಇದಕ್ಕೆ ಆಂಧ್ರ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತಾದರೂ, ಸಿಬಿಐ ಮೇಲ್ಮನವಿ ಬಳಿಕ ಅಕ್ರಮ ಗಣಿ ಪ್ರಕರಣದ ವಿಚಾರಣೆಗೆ ಅನುಮತಿ ದೊರಕಿತ್ತು. ರೆಡ್ಡಿ ಸಹೋದರರ ವಿರುದ್ಧ ಅಕ್ರಮ ಗಣಿಗಾರಿಕೆ, ಗಣಿ ಗಡಿ ಒತ್ತುವರಿ, ಅಕ್ರಮ ಅದಿರು ಸಾಗಾಣಿಕೆ, ತೆರಿಗೆ ವಂಚನೆ, ಆಂಧ್ರ-ಕರ್ನಾಟಕ ಗಡಿ ನಾಶ, ಹಫ್ತಾ ವಸೂಲಿ, ಅರಣ್ಯ ಕಾಯ್ದೆ ಉಲ್ಲಂಘನೆ, ದಬ್ಬಾಳಿಕೆ, ವಂಚನೆ, ಅಧಿಕಾರ ದುರುಪಯೋಗ ಮೊದಲಾದ ಹಲವು ಪ್ರಕರಣಗಳಿವೆ.

ಸಿಬಿಐ ಕೋರ್ಟಿನಲ್ಲಿ ಜನಾರ್ಧನರೆಡ್ಡಿ ಮತ್ತು ಶ್ರೀನಿವಾಸರೆಡ್ಡಿ ಸಲ್ಲಿಸಿರುವ ಜಾಮೀನು ಅರ್ಜಿ ವಿಚಾರಣೆಗೆ ಬರಲಿದೆ. ರೆಡ್ಡಿಗಳ ಪರ ವಾದ ಮಂಡಿಸಲು 11 ವಕೀಲರ ತಂಡವನ್ನು ನೇಮಿಸಿಕೊಳ್ಳಲಾಗಿದೆ. ಜಾಮೀನಿಗಾಗಿ ರೆಡ್ಡಿಗಳು ಶತಾಯಗತಾಯ ಪ್ರಯತ್ನಿಸುತ್ತಿದ್ದಾರೆ. ಆದರೆ ಜಾಮೀನು ನೀಡಿಕೆಗೆ ಸಾಕ್ಷ್ಯ ನಾಶದ ಕಾರಣವೊಡ್ಡಿ ಸಿಬಿಐ ವಿರೋಧ ವ್ಯಕ್ತಪಡಿಸಿದೆ. ಸಿಬಿಐ ವಿಶೇಷ ನ್ಯಾಯಾಲಯದಲ್ಲಿ ಅರ್ಜಿ ತಿರಸ್ಕೃತಗೊಂಡರೆ, ಆಂಧ್ರ ಹೈಕೋರ್ಟ್ ಮೊರೆ ಹೋಗಬೇಕಾಗುವುದು. ಅಲ್ಲೂ ಆಗದಿದ್ದರೆ ಸುಪ್ರೀಂಕೋರ್ಟ್ ಎದುರು ನಿವೇದಿಸಬೇಕಾಗುತ್ತದೆ. ಸುಪ್ರೀಂಕೋರ್ಟ್ ಕೂಡ ಜಾಮೀನು ನಿರಾಕರಿಸಿದರೆ ವಿಚಾರಣೆ ಮುಗಿದು ತೀರ್ಪು ಪ್ರಕಟವಾಗುವವರೆಗೂ ರೆಡ್ಡಿಗಳಿಗೆ ಜೈಲೇ ಗತಿ ಆಗಲಿದೆ.

ಈ ನಡುವೆ ರೆಡ್ಡಿ ಮನೆಯಲ್ಲಿ ಸಿಕ್ಕ ದಾಖಲೆಗಳನ್ನು ಸಿಬಿಐ ಪರಿಶೀಲಿಸುತ್ತಿದ್ದು ಅಕ್ರಮ ಗಣಿಗಾರಿಕೆ, ಅದಿರು ಸಾಗಣೆಗೆ ಸಂಬಂಧಿಸಿ ಇನ್ನೂ ಕೆಲವರನ್ನು ಬಂಧಿಸುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಹೀಗಾಗಿ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ಶ್ರೀರಾಮುಲು ಅದನ್ನು ಅಂಗೀಕರಿಸುವಂತೆ ಸಭಾಧ್ಯಕ್ಷ ಕೆ.ಜಿ. ಬೋಪಯ್ಯ ಅವರನ್ನು ಒತ್ತಾಯಿಸುತ್ತಿಲ್ಲ. ಅದೇ ರೀತಿ ಗಾಲಿ ಕರುಣಾಕರರೆಡ್ಡಿ ಅವರು ಸಹ ಬಂಧನ ಭೀತಿಯನ್ನು ಎದುರಿಸುತ್ತಿದ್ದಾರೆ. ಉಪ್ಪು ತಿಂದವರು ನೀರು ಕುಡಿಯಲೇ ಬೇಕಲ್ಲವೇ?

ಯೆಡ್ಡಿ ದಾರಿಯಲ್ಲಿ....

ಮಾಜಿ ಮಂತ್ರಿ ಕಟ್ಟಾ ಸುಬ್ರಮಣ್ಯನಾಯ್ಡು ಮತ್ತವರ ಪುತ್ರ ಜೈಲು ಪಾಲಾದ ಬೆನ್ನಲ್ಲೇ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಮಕ್ಕಳು ಕೋರ್ಟ್‌ಗಳಿಗೆ ಅಲೆಯುತ್ತಿದ್ದಾರೆ. ಅಕ್ರಮ ಡಿನೋಟಿಫಿಕೇಷನ್ ಪ್ರಕರಣದಲ್ಲಿ ಆರೋಪಿಗಳಾಗಿರುವ ಯಡಿಯೂರಪ್ಪ, ಅವರ ಮಕ್ಕಳಾದ ರಾಘವೇಂದ್ರ, ವಿಜಯೇಂದ್ರ, ಅಳಿಯ ಸೋಹನ್‌ಕುಮಾರ್ ಹಾಗೂ ಶಾಸಕರಾದ ಕೃಷ್ಣಯ್ಯಶೆಟ್ಟಿ, ಹೇಮಚಂದ್ರ ಸಾಗರ್ ಸೇರಿದಂತೆ ಎಲ್ಲಾ 24 ಆರೋಪಿಗಳು ಸೆಪ್ಟೆಂಬರ್ 7ರಂದು ಎರಡನೇ ಬಾರಿ ಲೋಕಾಯುಕ್ತ ನ್ಯಾಯಾಲಯದೆದುರು ಹಾಜರಾಗಿದ್ದರು. ಸಿರಾಜಿನ್ ಬಾಷಾ ಅವರು ಲೋಕಾಯುಕ್ತ ನ್ಯಾಯಾಲಯಕ್ಕೆ ನೀಡಿದ್ದ 2 ಮತ್ತು 3ನೇ ದೂರುಗಳ ಜಾಮೀನು ಅರ್ಜಿ ವಿಚಾರಣೆ ನಡೆಯಬೇಕಾಗಿತ್ತು. ಆದರೆ ಅದಕ್ಕು ಮೊದಲು ಯಡಿಯೂರಪ್ಪ ಪರ ವಕೀಲರಾದ ಸಿ.ವಿ.ನಾಗೇಶ್ ಮತ್ತು ರವಿನಾಯಕ್ ವಾದ ಮಂಡಿಸಿ 'ಈ ಪ್ರಕರಣದಲ್ಲಿ ದೂರುದಾರರ ಪರವಾಗಿ ಸಾರ್ವಜನಿಕ ಅಭಿಯೋಜಕರು (ಪಿ.ಪಿ.)ವಾದ ಮಂಡಿಸಬೇಕೋ ಅಥವಾ ಖಾಸಗಿ ವಕೀಲರು ವಾದ ಮಂಡಿಸಬೇಕೋ ಎನ್ನುವುದು ಮೊದಲು ತೀರ್ಮಾನವಾಗಬೇಕು. ಆ ಬಳಿಕ ಜಾಮೀನು ಅರ್ಜಿ ವಿಚಾರಣೆ ಮತ್ತು ಆಕ್ಷೇಪಣೆ ಸಲ್ಲಿಸುವುದಕ್ಕೆ ಅವಕಾಶ ನೀಡಬೇಕು ಎಂದು ಹೇಳಿದರು.

ಸಿರಾಜನ್ ಬಾಷಾ ಪರ ವಕೀಲ ಸಿ.ಹೆಚ್. ಹನುಮಂತರಾಯ ವಾದಿಸಿ 'ಇಲ್ಲಿಯವರೆಗೆ ನಾನೇ ವಾದ ಮಂಡಿಸಿದ್ದೇನೆ. ಇನ್ನು ಮುಂದೆಯೂ ನಾನೇ ದೂರುದಾರರ ಪರ ವಾದ ಮಂಡಿಸುತ್ತೇನೆ. ಸಾರ್ವಜನಿಕ ಅಭಿಯೋಜಕರನ್ನು ನೇಮಕ ಮಾಡುವುದು ಅಗತ್ಯವಿಲ್ಲ' ಎಂದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶ ಸುಧೀಂದ್ರರಾವ್ 'ಈ ಬಗ್ಗೆ ಎರಡೂ ಕಡೆಯವರ ವಾದ - ಪ್ರತಿವಾದ ಕೇಳಿದ ಮೇಲೆ ಸೂಕ್ತ ಆದೇಶ ಹೊರಡಿಸುತ್ತೇವೆ. ಅದಕ್ಕೂ ಮೊದಲು ಸುದೀರ್ಘವಾಗಿ ವಾದ ಮಂಡಿಸಲು ಸೂಕ್ತ ಕಾಲಾವಕಾಶ ನೀಡುತ್ತೇನೆ ಎಂದು ಹೇಳಿ ವಿಚಾರಣೆಯನ್ನು ಸೆಪ್ಟೆಂಬರ್ 13ಕ್ಕೆ ಮುಂದೂಡಿದರು. ಇದು ಕೋರ್ಟ್ ಕಲಾಪ ವಿಳಂಬಕ್ಕೆ ಅನುಸರಿಸಲಾಗುತ್ತಿರುವ ತಂತ್ರವೆಂದೇ ಭಾವಿಸಲಾಗುತ್ತಿದೆ.

ಲೋಕಾಯುಕ್ತ ಕೋರ್ಟಿನ ಆದೇಶ ಯಡಿಯೂರಪ್ಪನವರಿಗೆ ಪ್ರತಿಕೂಲವಾಗಿ ಬಂದರೆ, ಇದನ್ನೇ ನೆಪವಾಗಿರಿಸಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬಹುದು. ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಾದರೆ ಲೋಕಾಯುಕ್ತ ಕೋರ್ಟ್‌ನಲ್ಲಿ ವಿಚಾರಣೆಯನ್ನು ಮುಂದುವರೆಸುವುದು ತಾಂತ್ರಿಕವಾಗಿ ಅಸಾಧ್ಯವಾಗುತ್ತದೆ. ಇದರಿಂದಾಗಿ ಜಾಮೀನು ಅರ್ಜಿ ವಿಚಾರಣೆ ಸ್ಥಗಿತಗೊಂಡು ಕಲಾಪದ ದಿಕ್ಕೇ ತಪ್ಪಬಹುದು. ವಕೀಲರ ನೇಮಕದ ಬಗ್ಗೆ ಗೊಂದಲ ನಿವಾರಣೆ ಆಗುವವರೆಗೂ ಜಾಮೀನು ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸಾಧ್ಯವಾಗದು.ಈ ಪ್ರಕರಣದಲ್ಲಿ ಜಾಮೀನು ಅರ್ಜಿ ವಜಾಗೊಂಡರೆ ಪ್ರಭಾವಿ ಆರೋಪಿಗಳಾದ ಯಡಿಯೂರಪ್ಪ ಮತ್ತು ಅವರ ಮಕ್ಕಳ ಬಂಧನವಾಗುತ್ತದೆ. ಬಂಧನದ ಭೀತಿಗೆ ಒಳಗಾಗಿರುವ ಯಡಿಯೂರಪ್ಪ ಹಾಗೂ ಅವರ ಬಳಗ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಖ್ಯಾತ ವಕೀಲರ ತಂಡವನ್ನು ನೇಮಿಸಿಕೊಂಡು ಹರಸಾಹಸ ಪಡುತ್ತಿದೆ.

ಇದರೊಂದಿಗೆ ಯಡಿಯೂರಪ್ಪ ಲೋಕಾಯುಕ್ತ ಕೋರ್ಟ್‌ನ ಕಟಕಟೆಯಲ್ಲಿ ನಿಂತ ಮೊದಲ ಮಾಜಿ ಮುಖ್ಯಮಂತ್ರಿ ಎಂಬ ಅಪಖ್ಯಾತಿಗೆ ಪಾತ್ರರಾಗಿದ್ದಾರೆ. ಆಗಸ್ಟ್ 29ರಂದು ಯಡಿಯೂರಪ್ಪ ಮತ್ತು ಇತರ ಆರೋಪಿಗಳು ಲೋಕಾಯುಕ್ತ ಕೋರ್ಟಿಗೆ ಮೊದಲ ಬಾರಿ ಹಾಜರಾದಾಗ ಕೋರ್ಟ್ ಆವರಣದಲ್ಲಿ ಜನ ಬಾರೀ ಸಂಖ್ಯೆಯಲ್ಲಿ ಜಮಾಯಿಸಿದ್ದರು.

ಕಟಕಟೆಯಲ್ಲಿ ಕಾಲಿಟ್ಟ ಯಡಿಯೂರಪ್ಪ

ಪುಟ 12ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಕರ್ನಾಟಕ ರಾಜ್ಯದ ಬಿಜೆಪಿಯ ಮಾಜಿ ಮುಖ್ಯಮಂತ್ರಿ, ಮಂತ್ರಿಗಳು, ಮಾಜಿ ಮಂತ್ರಿಗಳು ಒಳಗೊಂಡಿರುವ ಭ್ರಷ್ಟಾಚಾರದ ಪ್ರಕರಣಗಳು ಹೇಳುತ್ತಿರುವುದೇನು? ಈ ಭ್ರಷ್ಟಾಚಾರ ಕೇವಲ ವ್ಯಕ್ತಿಗತವಲ್ಲ. ಬಿಜೆಪಿಯ ಕೇಂದ್ರ ನಾಯಕತ್ವ ಶಾಮೀಲಾತಿ, ಘೋಷಣೆಯೊಂದಿಗೇ ಕರ್ನಾಟಕ-ಆಂಧ್ರಗಳ ಬಿಜೆಪಿ-ಕಾಂಗ್ರೆಸ್ ನಾಯಕತ್ವದ ಜಾಲ ನಡೆಸಿರುವ ಹಗರಣಗಳೇ ಈ ಗಣಿ ಪ್ರಕರಣಗಳು

ಕೋಟಿ ಕಿರೀಟ ತಿರಸ್ಕರಿಸಲು ಆಗ್ರಹಿಸಿದಂತೆ


ಯೆಡ್ಡಿ-ರೆಡ್ಡಿ ರಾಜಕೀಯವನ್ನು ತಿರಸ್ಕರಿಸಬೇಕಲ್ಲವೇ?

ನಿತ್ಯಾನಂದಸ್ವಾಮಿ

ಅಕ್ರಮ ಗಣಿಗಾರಿಕೆ ಹಾಗೂ ಭ್ರಷ್ಟಾಚಾರ ಪ್ರಕರಣಗಳ ಹಿನ್ನೆಲೆಯಲ್ಲಿ ಸಿಬಿಐನಿಂದ ಬಂಧನಕ್ಕೊಳಗಾಗಿರುವ ಕರ್ನಾಟಕದ ಮಾಜಿ ಮಂತ್ರಿ, ಹಾಲಿ ಕೈದಿ ನಂ.697 ಗಾಲಿ ಜನಾರ್ಧನರೆಡ್ಡಿ ತಿರುಪತಿ ತಿಮ್ಮಪ್ಪನಿಗೆ 2 ವರ್ಷಗಳ ಹಿಂದೆ ನೀಡಿದ್ದ 45 ಕೋಟಿ ರೂ. ಮೌಲ್ಯದ ವಜ್ರಖಚಿತ ಚಿನ್ನದ ಕಿರೀಟವನ್ನು ರೆಡ್ಡಿಗಳಿಗೆ ವಾಪಸ್ ಮಾಡಬೇಕೆಂದು ಆಗ್ರಹಿಸಿ ಸೆಪ್ಟೆಂಬರ್ 6 ರಂದು ಕೆಲ ಭಕ್ತರು ತಿರುಮಲದಲ್ಲಿ ಪ್ರತಿಭಟನೆ ನಡೆಸಿದರು ಎಂಬ ಸುದ್ದಿಯೊಂದು ಕೆಲವೇ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಇದು ಅಕ್ರಮ ಗಣಿ ಹಣದ ಕಿರೀಟವಾಗಿದ್ದರಿಂದ ಅದನ್ನು ತಿಮ್ಮಪ್ಪನಿಗೆ ತೊಡಿಸಬಾರದು ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದರು. ತಿರುಪತಿ ತಿಮ್ಮಪ್ಪನಿಗೆ ಈ ಚಿನ್ನದ ಕಿರೀಟವನ್ನು ಧರಿಸುವ ಬಗ್ಗೆ ಆಕ್ಷೇಪವಿರಲಿಕ್ಕಿಲ್ಲ! ಆದರೆ ಮುಗ್ಧ ಭಕ್ತರಿಗೆ ಇದೆ. ಅವರು ಕಲ್ಲು ದೇವರ ಆರಾಧಕರಾಗಿರಬಹುದು. ಆದರೆ ಅವರ ಹೃದಯಗಳು ಕಲ್ಲಾಗಿರುವುದಿಲ್ಲ. ಅವರಿಗೆ ಅಕ್ರಮ-ಸಕ್ರಮಗಳ ನಡುವಿನ ವ್ಯತ್ಯಾಸ ಅರ್ಥವಾಗುತ್ತದೆ. ಆದ್ದರಿಂದಲೇ ಬಳ್ಳಾರಿಯ ರೆಡ್ಡಿಗಳು ಕೊಟ್ಟ 20 ಕೆ.ಜಿ. ತೂಕದ ವಜ್ರ ಖಚಿತ ಚಿನ್ನದ ಕಿರೀಟವನ್ನು ರೆಡ್ಡಿಗಳಿಗೆ ವಾಪಸ್ ಕೊಡಬೇಕೆಂದು ಅವರು ಆಗ್ರಹಿಸಿದ್ದಾರೆ.

ಆದರೆ, ತಿರುಪತಿ ತಿಮ್ಮಪ್ಪನ ಮುಗ್ಧ ಭಕ್ತರಿಗೆ ಇದ್ದಷ್ಟು ನೈತಿಕತೆ ಬಿಜೆಪಿ ಎಂಬ ರಾಷ್ಟ್ರವಾದಿ(?) ರಾಜಕೀಯ ಪಕ್ಷಕ್ಕೆ ಇಲ್ಲವಲ್ಲ! ಕಳೆದ ಆಗಸ್ಟ್ 12 ರಂದು ಶುಕ್ರವಾರ ಬಳ್ಳಾರಿಯಲ್ಲಿ ರೆಡ್ಡಿ ಸಹೋದರರು ಏರ್ಪಡಿಸಿದ್ದ ವರಮಹಾಲಕ್ಷ್ಮಿ ಪೂಜೆ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿ ಅವರಿಗೆ ರೆಡ್ಡಿಗಳು ಸುಮಾರು 40 ಲಕ್ಷ ರೂ. ಮೌಲ್ಯದ 1.5 ಕೆ.ಜಿ. ತೂಕದ ಅಪ್ಪಟ ಚಿನ್ನದ ಖಡ್ಗವನ್ನು ಉಡುಗೊರೆಯಾಗಿ ನೀಡಿದ್ದರು. ವೇದಿಕೆಯಲ್ಲಿ ಯಡಿಯೂರಪ್ಪನ ಜತೆ ಸೇರಿ ಗಡ್ಕರಿಯವರು ಈ ಖಡ್ಗವನ್ನು ಝಳಪಿಸಿದ್ದರು. ಚಿನ್ನದ ಈ ಖಡ್ಗವನ್ನು ತಿರುಪತಿಯಲ್ಲಿ ತಯಾರಿಸಲಾಗಿತ್ತು. ರೆಡ್ಡಿಗಳ ಬಹುತೇಕ ಚಿನ್ನ ಖರೀದಿ ವ್ಯವಹಾರ ತಿರುಪತಿಯಲ್ಲೇ ನಡೆಯುತ್ತಿತ್ತಂತೆ. ತಮ್ಮ ಕರೆಗೆ ಓಗೊಟ್ಟು ಬಳ್ಳಾರಿಗೆ ಆಗಮಿಸಿದ ಪಕ್ಷದ ರಾಷ್ಟ್ರಾಧ್ಯಕ್ಷರಿಗೆ ರೆಡ್ಡಿಗಳು 1.5 ಕೋಟಿ ರೂ. ಬೆಲೆ ಬಾಳುವ ಐಷಾರಾಮಿ ರೇಂಜ್ ರೋವರ್ ಕಾರೊಂದನ್ನು ಸಹ ಉಡುಗೊರೆಯಾಗಿ ನೀಡಿದ್ದರು ಎಂಬ ಮಾಹಿತಿಯೂ ಇದೆ.

ಬಳ್ಳಾರಿ ರೆಡ್ಡಿಗಳು ಬಿಜೆಪಿಯ ರಾಷ್ಟ್ರೀಯ ನಾಯಕರಿಗೆ ದುಬಾರಿ ಉಡುಗೊರೆಗಳನ್ನು ಕೊಡುವುದು ಇದೇ ಮೊದಲಲ್ಲ. ವರಮಹಾಲಕ್ಷ್ಮಿ ಪೂಜೆ, ಸಾಮೂಹಿಕ ವಿವಾಹ ಮೊದಲಾದ ಕಾರ್ಯಕ್ರಮಗಳ ಹೆಸರಿನಲ್ಲಿ ಬಿಜೆಪಿ ವರಿಷ್ಠರನ್ನು ಬಳ್ಳಾರಿಗೆ ಬರಮಾಡಿಕೊಂಡು ಅವರಿಗೆ ಬೆಳ್ಳಿ, ಬಂಗಾರ, ಮೊದಲಾದ ದುಬಾರಿ ಉಡುಗೊರೆಗಳನ್ನು ನೀಡುವ ಸಂಪ್ರದಾಯವನ್ನು ರೆಡ್ಡಿಗಳು ದಶಕಗಳಿಂದ ನಡೆಸುತ್ತಾ ಬಂದಿದ್ದಾರೆ. ಈ ಹಿಂದೆ ಬಿಜೆಪಿ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಹಾಗೂ ರೆಡ್ಡಿಗಳ ಪಾಲಿನ 'ಅಮ್ಮ' ಎಂದೇ ಖ್ಯಾತರಾಗಿರುವ ಸುಷ್ಮಾ ಸ್ವರಾಜ್ ಅವರುಗಳಿಗೆ ಚಿನ್ನದ ಉಡುಗೊರೆ



ನೀಡಿದ್ದಾರೆ.


ಸುಷ್ಮಾ ಅವರಿಗಂತೂ ಪ್ರತಿ ವರಮಹಾಲಕ್ಷ್ಮಿ ಪೂಜೆ ಸಂದರ್ಭದಲ್ಲಿ ಬೆಲೆ ಬಾಳುವ ಉಡುಗೊರೆಗಳನ್ನು ನೀಡಿ ಸನ್ಮಾನಿಸುತ್ತಾ ಬರಲಾಗಿತ್ತು. ಈ ಸಲವೂ ಅಷ್ಟೇ. ಗಣಿ ರೆಡ್ಡಿಗಳ ಗಣಿ ಅಕ್ರಮಗಳನ್ನು ಸಿಬಿಐ ಜಾಲಾಡುತ್ತಿರುವುದನ್ನು ಗಮನಿಸಿ ಸುಷ್ಮಾ ಸ್ವರಾಜ್ ಕುಂಟು ನೆಪ ಮುಂದೆ ಮಾಡಿ ರೆಡ್ಡಿಗಳನ್ನು ಕೈಬಿಟ್ಟಿದ್ದಾರೆ.

ಬಿಜೆಪಿ ಹಿರಿಯ ನಾಯಕರು ರೆಡ್ಡಿ ಸಹೋದರರಿಂದ ಪಡೆಯುತ್ತಿದ್ದ ದುಬಾರಿ ಉಡುಗೊರೆಗಳಿಗಾಗಲಿ, ತಿರುಪತಿ ತಿಮ್ಮಪ್ಪನಿಗೆ ನೀಡಲಾದ ಚಿನ್ನದ ಕಿರೀಟಕ್ಕಾಗಲಿ ಬಳಕೆಯಾದ ಹಣದ ಮೂಲ-ಗಣಿ ಲೂಟಿ! ಲೂಟಿ ಹಣದಿಂದ ತಯಾರಿಸಲಾದ ಕಿರೀಟವನ್ನು ತಿಮ್ಮಪ್ಪನ ಭಕ್ತರು ವಾಪಸ್ ಕೊಡಲು ಆಗ್ರಹಿಸಿದ್ದಾರೆ. ಆದರೆ ಬಿಜೆಪಿಯ ಗೌರವಾನ್ವಿತ ನಾಯಕರಾದ ಸುಷ್ಮಾ ಸ್ವರಾಜ್ ಅವರಾಗಲಿ, ಎಲ್.ಕೆ.ಅಡ್ವಾಣಿ ಯವರಾಗಲಿ, ನಿತಿನ್ ಗಡ್ಕರಿಯವರಾಗಲಿ ತಾವು ರೆಡ್ಡಿಗಳಿಂದ ಪಡೆದ ದುಬಾರಿ ಉಡುಗೊರೆಗಳನ್ನು ವಾಪಸ್ ಕೊಡುವ ಘೋಷಣೆ ಮಾಡಿಲ್ಲ, ಮಾತ್ರವಲ್ಲ ಅಂತಹ ಯೋಚನೆಯನ್ನು ಸಹ ಮಾಡಿಲ್ಲ. ದಕ್ಷಿಣ ಭಾರತದ ಬಿಜೆಪಿಯ ಚೊಚ್ಚಲ ಸರ್ಕಾರದ ಮಾಜಿ ಮಂತ್ರಿ ಜನಾರ್ಧನರೆಡ್ಡಿ ಜೈಲು ಸೇರಿರುವುದರಿಂದ ಉಂಟಾಗಿರುವ ರಾಜಕೀಯ ಪರಿಸ್ಥಿತಿಯಿಂದ ದೃತಿಗೆಟ್ಟ ಬಿಜೆಪಿ ಹೈಕಮಾಂಡ್ ರೆಡ್ಡಿಗಳ ಗಣಿ ವ್ಯವಹಾರಕ್ಕೂ ಮತ್ತು ತಮಗೂ ಯಾವುದೇ ಸಂಬಂಧವಿಲ್ಲ ಎಂದು ಬಿಂಬಿಸಲು ಪ್ರಯತ್ನಿಸುತ್ತಿದೆ. ರೆಡ್ಡಿ ಸಿಬಿಐ ತನಿಖಾಧಿಕಾರಿಗಳ ಎದುರು ತಮ್ಮ ಬಗ್ಗೆ ಬಾಯಿ ಬಿಟ್ಟರೆ ಹೇಗೆ ಎಂಬ ಚಿಂತೆ ಅವರನ್ನು ಈಗ ಕಾಡುತ್ತಿದೆ.

ಜೈಲಿಗೆ ಹೋಗುವುದನ್ನು ತಪ್ಪಿಸಲು ಹರಸಾಹಸಪಡುತ್ತಿರುವ ಬಿಜೆಪಿಯ ಮೊದಲ ಸರ್ಕಾರದ ಮೊದಲ(ಮಾಜಿ) ಮುಖ್ಯಮಂತ್ರಿ ಯಡಿಯೂರಪ್ಪ 2008 ರಿಂದ 2010ರವರೆಗೆ ಒಟ್ಟು 189 ಕೋಟಿ ರೂ. ಅನುದಾನವನ್ನು ಮಠ-ಮಂದಿರಗಳ ರಸ್ತೆ ಅಭಿವೃದ್ಧಿಗೆ ನೀಡಿದ್ದಾರೆ ಎಂದು ವರದಿಯೊಂದು ಪ್ರಕಟವಾಗಿದೆ. ಇದೇನೂ ಭ್ರಷ್ಟಾಚಾರದಿಂದ ಬಂದ ಹಣವಲ್ಲ. ಸರ್ಕಾರದ ಬೊಕ್ಕಸದಿಂದ ಅಧಿಕೃತವಾಗಿ ಕೊಟ್ಟ ಹಣ ಎಂದು ಖಾವಿಧಾರಿ ಕರೋಡ್‌ಪತಿಗಳು ಸಮರ್ಥಿಸಿ ಕೊಳ್ಳಬಹುದು. ಆದರೆ, ಇತ್ತ ತಮ್ಮ ಪಾದಕ್ಕೆ ಬಿದ್ದು, ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದ ಯಡಿಯೂರಪ್ಪ ಅತ್ತ ಅತ್ಯಂತ ಭ್ರಷ್ಟ ವಿಧಾನಗಳ ಮೂಲಕ ಸ್ವಂತಕ್ಕೆ ಅಕ್ರಮ ದುಡ್ಡು ಕೂಡಿಹಾಕುತ್ತಿರುವುದನ್ನು ಕಂಡೂ ಕಾಣದವರಂತಿದ್ದರು. ರಾಜ್ಯದಲ್ಲಿ ಎಷ್ಟೋ ಹಳ್ಳಿಗಳಿಗೆ ಇವತ್ತಿಗೂ ರಸ್ತೆಗಳಿಲ್ಲ. ಹದಗೆಟ್ಟಿರುವ ತಾಲ್ಲೂಕು ಮತ್ತು ಜಿಲ್ಲಾ ರಸ್ತೆಗಳ ಅಭಿವೃದ್ಧಿಗೆ ಹಣ ಸಿಗುವುದಿಲ್ಲ. ಆದರೆ ಮಠ-ಮಂದಿರಗಳ ಸುತ್ತಲಿನ ರಸ್ತೆಗಳಿಗೆ ಮಾತ್ರ ಯಡಿಯೂರಪ್ಪ ಅವರ ಅನುದಾನದ ಮಹಾಪೂರವೇ ಹರಿದು ಹೋಗಿದೆ. 'ತೆರಿಗೆದಾರರ ಸ್ವರ್ಗ'ದ ಲಾಕರ್‌ಗಳಂತಿರುವ ಈ ಮಠಗಳಿಗೆ ಆಗಾಗ ಹೋಗಿ ಬರಲು ರಸ್ತೆಗಳು ಬೇಡವೇ? ರಾಜ್ಯದ ಜನಸಾಮಾನ್ಯರು ಕಷ್ಟಪಟ್ಟು ಸರ್ಕಾರಕ್ಕೆ ನೀಡುವ ತೆರಿಗೆಗಳಿಂದ ಹರಿದು ಬರುವ ಹಣವನ್ನು ಮಠಗಳಿಗೆ ದಾನ ಮಾಡುವ ಮೂಲಕ ಯಡಿಯೂರಪ್ಪ ಅವರು ಮಠಾಧಿಪತಿಗಳಿಂದ ಜಾತಿ ಬೆಂಬಲದ ಆಶೀರ್ವಾದವನ್ನು ಪಡೆಯುತ್ತಿದ್ದರು ಮಾತ್ರವಲ್ಲ ತಮ್ಮ ಭ್ರಷ್ಟಾಚಾರಕ್ಕೆ ಜನಮನ್ನಣೆಯ ಲೈಸೆನ್ಸ್‌ನ್ನು ನವೀಕರಿಸಿ ಕೊಳ್ಳುತ್ತಿದ್ದರು! 'ಯಡಿಯೂರಪ್ಪನವರೇ, ನೀವು ತಪ್ಪು ದಾರಿ ತುಳಿಯುತ್ತಿದ್ದೀರಿ; ಮುಂದೊಂದು ದಿನ ಬಾರಿ ಪಶ್ಚಾತ್ತಾಪಪಡಬೇಕಾದೀತು' ಎಂದು ಇವರಿಂದ ಲಾಭ ಪಡೆದ ಒಬ್ಬ ಮಠಾಧೀಶರೂ ಅವರನ್ನು ಎಚ್ಚರಿಸುವ ಪ್ರಾಮಾಣಿಕತೆಯನ್ನು ತೋರದಿರುವುದು ಒಂದು ದುರಂತ.

ಮಠಾಧೀಶರು ಇಂದು ಜನತೆಗೆ ಅಪಾಯಕಾರಿ ಸಂದೇಶವನ್ನು ರವಾನಿಸುತ್ತಿದ್ದಾರೆ. ಭ್ರಷ್ಟ ರಾಜಕಾರಣಿಗಳು ಜೈಲಿಗೆ ಹೋಗುತ್ತಿರುವಾಗಲೂ ಅವರನ್ನು ಬೆಂಬಲಿಸುವ ಪ್ರವೃತ್ತಿ ಅತ್ಯಂತ ಅಪಾಯಕಾರಿಯಾಗಿದೆ. ರಾಜ್ಯದ ಸಂಪತ್ತನ್ನು ಲೂಟಿ ಮಾಡಿ ಐಷಾರಾಮಿ ಜೀವನ ನಡೆಸುತ್ತಿರುವವರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸುವ ಬದಲು ಜನ ಅಂತಹ ಭ್ರಷ್ಟರನ್ನೇ ಬೆಂಬಲಿಸಲು ಮುಂದಾಗುತ್ತಿರುವುದು ಖೇದದ ಸಂಗತಿ. ಮೊನ್ನೆ ಬಳ್ಳಾರಿಯಲ್ಲಿ ನಡೆದದ್ದು ಇದುವೆ. ಗಾಲಿ ಜನಾರ್ಧನರೆಡ್ಡಿ ಬಂಧನ ಖಂಡಿಸಿ ಬೀದಿಗಿಳಿದ ಸಾವಿರಾರು ಬಿಜೆಪಿ ಕಾರ್ಯಕರ್ತರು ಅಂಗಡಿ ಮುಂಗಟ್ಟುಗಳನ್ನು ಬಲವಂತವಾಗಿ ಬಂದ್ ಮಾಡಿದ್ದಾರೆ. ಬಂದ್‌ಗೆ ಸಹಕರಿಸಿದ್ದ ಅಂಗಡಿಗಳನ್ನು ಲೂಟಿ ಮಾಡಿದ್ದಾರೆ. ಸರ್ಕಾರಿ ಕಛೇರಿಗಳ ಮೇಲೆ ದಾಳಿ ಮಾಡಿ ಪೀಠೋಪಕರಣ ಗಳನ್ನು, ಕಂಪ್ಯೂಟರ್‌ಗಳನ್ನು, ಕಿಟಕಿ ಗ್ಲಾಸುಗಳನ್ನು ಧ್ವಂಸ ಮಾಡಿದ್ದಾರೆ. ರಾಜ್ಯ ರಸ್ತೆ ಸಾರಿಗೆ ಬಸ್‌ಗಳ ಮೇಲೆ ಕಲ್ಲು ತೂರಾಟ ಮಾಡಿ ಅಪಾರ ಹಾನಿಯನ್ನುಂಟು ಮಾಡಿದ್ದಾರೆ. ರೆಡ್ಡಿಗಳ ಬೆಂಬಲಿಗರ ಈ ದಾಂದಲೆಯನ್ನು ಖಂಡಿಸಲು ಯಾರೂ ಮುಂದೆ ಬರಲಿಲ್ಲ. ಮುಂದೆ ಬಂದಿದ್ದರೂ ಅವರ ಧ್ವನಿ ಕ್ಷೀಣವಾಗಿತ್ತು. ದೇಶ ಒಳ್ಳೆಯ ದಿನಗಳನ್ನು ಕಾಣುವಂತಾಗಬೇಕು ಎಂದು ಬಯಸುವವರಿಗೆ

ಪುಟ 12ಕ್ಕೆ



ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಸರ್ಕಾರ ನೂರು ದಿನ ಪೂರೈಸಿದೆ. ಎಡರಂಗದ ಮೇಲೆ, ಕಾರ್ಯಕರ್ತರ ಮೇಲೆ ದಾಳಿ, ಮಾಜಿ ಭೂಮಾಲಕರ ಪರವಾಗಿ ರೈತರಿಂದ ಭೂಮಿ ಕಿತ್ತುಕೊಳ್ಳುವ ಕೆಲಸ, ಗೂರ್ಖಾ ಲ್ಯಾಂಡ್ ಪ್ರತ್ಯೇಕತಾವಾದಕ್ಕೆ ಕುಮ್ಮಕ್ಕು ಇತ್ಯಾದಿ ಈ ಸರ್ಕಾರದ ಸಾಧನೆಗಳು...

ಮಮತಾ ಬ್ಯಾನರ್ಜಿ ಸರ್ಕಾರ
ನೂರು ದಿನಗಳ ಸಾಧನೆ?

ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಸರ್ಕಾರ ಅಧಿಕಾರದಲ್ಲಿ 100 ದಿನಗಳನ್ನು ಪೂರೈಸಿದೆ. ಕಳೆದ 100 ದಿನಗಳಲ್ಲಿ ಮಾಡಿದ ಸಾಧನೆ ಏನೇನೂ ಇಲ್ಲ. ಅದರ ವೈಫಲ್ಯ ಹಾಗೂ ದ್ವೇಷದ ರಾಜಕೀಯದ ಪಟ್ಟಿಯೇ ದೊಡ್ಡದು.

ಪ್ರತಿಪಕ್ಷದ ವಿರುದ್ಧ ನರಮೇಧವನ್ನೇ ಹರಿಯ ಬಿಡಲಾಗಿದೆ. ಈ ಸರ್ಕಾರದ ಅವಧಿಯಲ್ಲಿ 33 ಎಡ ಕಾರ್ಯಕರ್ತರನ್ನು ಕಗ್ಗೊಲೆ ಮಾಡಲಾಗಿದೆ, ನೂರಾರು ಮಂದಿ ಗಾಯಗೊಂಡಿದ್ದಾರೆ. 684 ಮಹಿಳೆಯರನ್ನು ದೈಹಿಕವಾಗಿ ಹಿಂಸಿಸಲಾಗಿದೆ, 63 ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದ್ದರೆ, 503 ಮಹಿಳೆಯರಿಗೆ ಕಿರುಕುಳ ನೀಡಲಾಗಿದೆ. 40 ಸಾವಿರಕ್ಕೂ ಹೆಚ್ಚು ಮಂದಿ ಜೀವಭಯದಲ್ಲಿ ಮನೆ ತೊರೆದಿದ್ದಾರೆ. ಗ್ರಾಮ ಮಟ್ಟದಲ್ಲಿ ಲೂಟಿಯಂತಹ ಪ್ರಕರಣಗಳು ಹಿಂದೆಂದೂ ಕಾಣದಿರುವಷ್ಟು ಹೆಚ್ಚಾಗಿದೆ.

ಪ್ರತಿಪಕ್ಷದ ಮೇಲೆ ಮತ್ತಷ್ಟು ದಮನಗಳನ್ನು ನಡೆಸಲು ಪೊಲೀಸ್ ಪಡೆಯನ್ನು ಬಳಸಲಾಗುತ್ತಿದೆ. ಎಡ ಪಕ್ಷದ ಕಾರ್ಯಕರ್ತರ ಮೇಲೆ 1500ಕ್ಕೂ ಹೆಚ್ಚು ಸುಳ್ಳು ಕೇಸುಗಳನ್ನು ಹಾಕಲಾಗಿದೆ. ಶಾಸಕ ಹಾಗೂ ಮಾಜಿ ಸಚಿವ ಶುಶಾಂತ್ ಘೋಷ್ ಸೇರಿದಂತೆ ಹಲವು ಸಿಪಿಎಂ ನಾಯಕರನ್ನು ಅನ್ಯಾಯವಾಗಿ ಜೈಲಿಗೆ ತಳ್ಳಲಾಗಿದೆ. ರಾಜ್ಯ ಸಮಿತಿ ಸದಸ್ಯರು ತೃಣಮೂಲ ಸರ್ಕಾರದ ಪ್ರಮುಖ ಟಾರ್ಗೆಟ್ ಆಗಿದೆ ಎಂಬುದು ಈ ದಾಳಿ–ದೌರ್ಜನ್ಯಗಳಿಂದ ಸ್ಪಷ್ಟವಾಗಿದೆ.

ಪಂಚಾಯತ್‌ಗಳನ್ನು ದುರ್ಬಲಗೊಳಿಸಿರುವುದು, ಭೂಸ್ವಾಧೀನ ನೀತಿಗಳು ಜನರ ಸಂಕಷ್ಟವನ್ನು ಹೆಚ್ಚಿಸಿವೆ. ಗೃಹ ಸಚಿವಾಲಯ ಸೇರಿದಂತೆ ಪ್ರಮುಖ ಸಚಿವಾಲಯಗಳ ಬಜೆಟ್ ಹಂಚಿಕೆ ಬಗ್ಗೆ ಚರ್ಚೆಗೆ ಸರ್ಕಾರದ ನಿರಾಕರಣೆ ಅದರ ದ್ವೇಷದ ರಾಜಕಾರಣಕ್ಕೆ ಕನ್ನಡಿ ಹಿಡಿದಿದೆ.

ಹೆಸರು ಬದಲಾವಣೆಯ ಹೊಸ್ತಿಲಲ್ಲಿ ಪಶ್ಚಿಮ ಬಂಗಾಳ

ಈ ಮಧ್ಯೆ, ಪಶ್ಚಿಮ ಬಂಗಾಳ ಇನ್ನು ಮುಂದೆ ತನ್ನ ಹೆಸರನ್ನು ಬದಲಾಯಿಸಿಕೊಳ್ಳಲಿದೆ. ವೆಸ್ಟ್ ಬೆಂಗಾಲ್ ಎಂದು ಕರೆಸಿಕೊಳ್ಳುತ್ತಿದ್ದ ರಾಜ್ಯಕ್ಕೆ 'ಪಶ್ಚಿಮ್ ಬಂಗ' ಎಂದು ನಾಮಕರಣ ಮಾಡಲಿದ್ದು, ಈ ಬಗ್ಗೆ ಅಂತಿಮ ವಿಧಿ ವಿಧಾನಗಳು ನಡೆಯುತ್ತಿವೆ. ರಾಜ್ಯದ ಸರ್ವ ಪಕ್ಷಗಳ ಸಭೆಯಲ್ಲಿ ಈ ಕುರಿತ ಒಮ್ಮತದ ನಿರ್ಧಾರಕ್ಕೆ ಬರಲಾಗಿದೆ. ವಿಧಾನಸಭೆಯಲ್ಲಿ ನಾಮಕರಣವನ್ನು ಸಿಂಧುಗೊಳಿಸಲು ನಿರ್ಣಯ ಸಜ್ಜಾಗಿದೆ. ಹೆಸರು ಬದಲಾವಣೆಯಿಂದ ಆಗುವ ಆಡಳಿತಾತ್ಮಕ ವಿಚಾರಗಳಲ್ಲಿನ ಅನುಕೂಲತೆಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ.

1947ರಲ್ಲಿ ಬಂಗಾಳ ವಿಭಜನೆಯಾದಾಗ ಒಂದು ಭಾಗ ಪೂರ್ವ ಪಾಕಿಸ್ತಾನ (ಈಗಿನ ಬಾಂಗ್ಲಾ) ಹಾಗೂ ಇನ್ನೊಂದು ಪಶ್ಚಿಮ ಬಂಗಾಳವಾಗಿ ಗುರುತಿಸಿಕೊಂಡಿತ್ತು. ಪೂರ್ವ ಪಾಕಿಸ್ತಾನವೇ ಅಸ್ತಿತ್ವ ಕಳೆದುಕೊಂಡಿರುವಾಗ ಪಶ್ಚಿಮ ಬಂಗಾಳ ಹೆಸರು ಅಪ್ರಸ್ತುತವಾಗಿತ್ತು. ಸರ್ಕಾರಿ ಕಡತದಲ್ಲಿ ಇಂಗ್ಲಿಷ್ ವರ್ಣಮಾಲೆ ಪ್ರಕಾರ ರಾಜ್ಯಗಳ ಪಟ್ಟಿಗಳ ಪೈಕಿ ಡಬ್ಲ್ಯು ಕೊನೆಯಲ್ಲಿ ಬರುವುದರಿಂದ ಪಶ್ಚಿಮ ಬಂಗಾಳ ಕೊನೆಯಲ್ಲಿ ಗುರುತಿಸಿಕೊಳ್ಳುತ್ತಿತ್ತು.

ಇದಕ್ಕೂ ಮುನ್ನ ನೂತನ ಹೆಸರನ್ನು ಸೂಚಿಸಲು ತೃಣಮೂಲ ನಾಯಕ ಪಾರ್ಥೊ ಚಟರ್ಜಿ ಮತ್ತು ಪ್ರತಿಪಕ್ಷ ನಾಯಕ ಸೂರ್ಯಕಾಂತ್ ಮಿಶ್ರಾ ನೇತೃತ್ವದ ಸಮಿತಿಯನ್ನು ಮಾಡಲಾಗಿತ್ತು. ಬಾಂಗ್ಲ, ಬಂಗಭೂಮಿ ಸೇರಿದಂತೆ ವಿವಿಧ ಹೆಸರುಗಳು ಪಟ್ಟಿಯಲ್ಲಿದ್ದರೂ ರಾಜ್ಯದ ಇತಿಹಾಸವನ್ನು ಗಮನದಲ್ಲಿಟ್ಟುಕೊಂಡು ಈ ಹೆಸರನ್ನು ಸೂಚಿಸಲಾಗಿದೆ.

ರಾಜ್ಯವನ್ನು ಒಡೆಯುವ ಒಪ್ಪಂದಕ್ಕೆ ಅಂಕಿತ

ರಾಜ್ಯದ ಹೆಸರು ಬದಲಾವಣೆ ಉತ್ತಮ ಹೆಜ್ಜೆ ಎಂದೇ ಹೇಳಲಾಗುತ್ತಿದೆ. ಪ್ರತಿಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಂತಹ ಹೆಜ್ಜೆಗಳನ್ನು ಸರ್ಕಾರ ಇಟ್ಟಿದೆ ಎಂಬುದೇನೋ ನಿಜ. ಆದರೆ, ಒಂದು ಕಡೆಯಿಂದ ರಾಜ್ಯದ ಅಭಿವೃದ್ಧಿ ಬಗ್ಗೆ ಮಾತನಾಡುತ್ತಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಇನ್ನೊಂದೆಡೆ ರಾಜ್ಯವನ್ನು ಒಡೆಯುವ ಅಪಾಯಕಾರಿ ಪ್ರಕ್ರಿಯೆಗೂ ಚಾಲನೆ ನೀಡಿದ್ದಾರೆ. ಇದು ನಿಜಕ್ಕೂ ಆತಂಕದ ಸಂಗತಿ.

ಡಾರ್ಜಿಲಿಂಗ್ ಕುರಿತ ಸರ್ಕಾರದ ಹೆಜ್ಜೆ ಆಘಾತಕಾರಿಯೇ ಆಗಿದೆ. ಸರ್ಕಾರದ ಪ್ರಕಾರ ಡಾರ್ಜಿಲಿಂಗ್‌ನಲ್ಲಿ ಸಂಪೂರ್ಣ ಶಾಂತಿ ನೆಲೆಸಿದೆ. ಆದರೆ, ವಾಸ್ತವ ಸ್ಥಿತಿಯೇ ಬೇರೆ. ಗೂರ್ಖಾಲ್ಯಾಂಡ್ ಎಂಬ ಘೋಷಣೆಗೆ ಮಾನ್ಯತೆ ನೀಡುವ ಅಪಾಯದ ದಾರಿಯನ್ನು ಸರ್ಕಾರ ಹಿಡಿದಿದೆ. ಗೂರ್ಖಾಲ್ಯಾಂಡ್‌ನ ಗಡಿಯನ್ನು ಗುರುತಿಸುವ ಕಾರ್ಯವನ್ನು ಮಾಡಲಾಗುತ್ತಿದೆ. ಗೂರ್ಖಾಲ್ಯಾಂಡ್ ಎಂದು ಕರೆಸಿಕೊಳ್ಳುವ ಪ್ರದೇಶಕ್ಕೆ ಮತ್ತಷ್ಟು ಜಾಗ ಸೇರಿಸಲು ಸರ್ವೇ ಕಾರ್ಯ ನಡೆಯುತ್ತಿದೆ.



ಬರ್ದ್ವಾನ್ ಜಿಲ್ಲೆಯ ಕಮರ್‌ಕಟ ಪ್ರದೇಶದಲ್ಲಿ ಒಕ್ಕಲೆಬ್ಬಿಸಲಾದ ರೈತರಿಂದ ತಮ್ಮ ಜಮೀನಿನ ಮರುವಶ

ಇದಕ್ಕೂ ಮುನ್ನ, ಸಿಲಿಗುರಿಯ ಹೊರವಲಯದಲ್ಲಿರುವ ಪಿಂಟೇಲ್ ಗ್ರಾಮದಲ್ಲಿ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಕೇಂದ್ರ ಸರ್ಕಾರದ ಪರವಾಗಿ ಗೃಹ ಸಚಿವಾಲಯದ ಕಾರ್ಯದರ್ಶಿ ಆರ್.ಕೆ. ಸಿಂಗ್, ರಾಜ್ಯದ ಗೃಹ ಕಾರ್ಯದರ್ಶಿ ಜಿ.ಡಿ. ಗೌತಮ್, ಗೂರ್ಖಾಲ್ಯಾಂಡ್ ಪ್ರತ್ಯೇಕತಾವಾದಿ ಚಳವಳಿಯ ರೋಶನ್ ಗಿರಿ ಈ ಒಪ್ಪಂದಕ್ಕೆ ಸಹಿ ಹಾಕಿದರು. ಈ ಒಪ್ಪಂದ ರಾಜ್ಯದ ಐಕ್ಯತೆಗೆ ಮಾರಕವಾಗಿ ಪರಿಣಮಿಸಲಿದ್ದು, ತ್ರಿಪಕ್ಷೀಯ ಒಪ್ಪಂದಕ್ಕೆ ಪ್ರತಿಪಕ್ಷ ಸಿಪಿಐ(ಎಂ) ಬಹಿಷ್ಕರಿಸಿದ್ದು ಗಮನಾರ್ಹ ವಾಗಿತ್ತು. ಡಾರ್ಜಿಲಿಂಗ್ ಸ್ವಾಯತ್ತತೆಯನ್ನು ಎಡರಂಗ ವಿರೋಧಿಸುವುದಿಲ್ಲ. ಆದರೆ ಈ ಸ್ವಾಯತ್ತ ಮಂಡಳಿಗೆ ಈಗ ನೀಡಲಾಗಿರುವ ಅಧಿಕಾರ ಸ್ವರೂಪದ ಡಾರ್ಜಿಲಿಂಗ್‌ಅನ್ನು ಪಶ್ಚಿಮಬಂಗಾಳದಿಂದ ಬೇರ್ಪಡಿಸುವುದಕ್ಕೆ ಕೇವಲ ಒಂದು ಹೆಜ್ಜೆ ಮಾತ್ರ ಬಾಕಿ ಎಂಬ ಸ್ಥಿತಿಗೆ ತೆಗೆದುಕೊಂಡು ಹೋಗಲಾಗಿದೆ. ಮತ್ತು ಗೂರ್ಖಾಲ್ಯಾಂಡ್ ಪ್ರತ್ಯೇಕತಾವಾದಿಗಳ ಜೊತೆ ಸರ್ಕಾರ ನಡೆಸಿರುವ ಹಲವು ಮಾತುಕತೆ ಗುಪ್ತವಾಗಿದ್ದು, ತೀರಾ ಸಂಶಯಾಸ್ಪದವಾಗಿದೆ.

ನೂತನ ಭೂಸ್ವಾಧೀನ ಕಾಯಿದೆ– ಕಂಗಾಲಾದ ಕೃಷಿಕರು

ಪ್ರತ್ಯೇಕ ರಾಜ್ಯದ ಬೇಡಿಕೆಗೆ ಸ್ಪಂದಿಸುವ ಮೂಲಕ ಐಕ್ಯತೆಗೆ ಧಕ್ಕೆ ತಂದಿರುವ ಕುಖ್ಯಾತಿಗೆ ಒಳಗಾಗಿರುವ ಮಮತಾ ಈಗ ಕೃಷಿ ಕೂಲಿ ಕಾರ್ಮಿಕರ ಆಕ್ರೋಶಕ್ಕೂ ಒಳಗಾಗಿದ್ದಾರೆ. ತೃಣಮೂಲ ಕಾಂಗ್ರೆಸ್ ಮತ್ತದರ ಅಧಿನಾಯಕಿ ಮಮತಾ ನಿಧಾನವಾಗಿ ತಮ್ಮ ನಿಜಬಣ್ಣವನ್ನು ಪ್ರದರ್ಶಿಸುತ್ತಿದ್ದಾರೆ.

ಮಮತಾ ಬ್ಯಾನರ್ಜಿ ಈಗ ನೂತನ ಭೂಸ್ವಾಧೀನ ಕಾಯಿದೆಯನ್ನು ಶೀಘ್ರವೇ ರೂಪಿಸುವುದಾಗಿ ಹೇಳಿದ್ದಾರೆ. ಈಗಾಗಲೇ ಕರಡು ಪ್ರತಿ ಸಿದ್ಧವಿದ್ದು, ಕೇಂದ್ರ ಸಚಿವ ಜೈರಾಂ ರಮೇಶ್ ಜೊತೆ ವಿಸ್ತೃತ ಚರ್ಚೆಯೂ ನಡೆದಿದೆ.

ಮೂರು ದಶಕಗಳ ಹಿಂದೆ ಎಡರಂಗ ಸರ್ಕಾರ ನಡೆಸಿದ ಭೂ ಸುಧಾರಣೆ ಲಾಭವನ್ನು ಗ್ರಾಮೀಣ ಜನತೆಗೆ ದಕ್ಕದಂತೆ ನೋಡಿಕೊಳ್ಳುವ ಕ್ರಮಗಳನ್ನು ಈ ಕಾಯಿದೆಯಲ್ಲಿ ರೂಪಿಸಲಾಗಿದೆ. ಬಗರ್ ಹುಕುಂ ಸೇರಿದಂತೆ ಸಣ್ಣ ಮತ್ತು ಅತಿ ಸಣ್ಣ ಕೃಷಿ ಕಾರ್ಮಿಕರು ಇದರಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಲಿದ್ದಾರೆ.

ತಿರುಗಿಬಿದ್ದ ಬಡ ಕಾರ್ಮಿಕರಿಂದ ಭೂ ಮರುಸ್ವಾಧೀನ– ಸರ್ಕಾರಕ್ಕೆ ಮುಖಭಂಗ

ಭೂಮಿಯ ಪ್ರಶ್ನೆಗೆ ಸಂಬಂಧಿಸಿದಂತೆ ಮಮತಾ ಅವರ ಹೇಳಿಕೆಗಳು ಭೂಮಾಲಕರಿಗೆ ಪುಷ್ಟಿ ನೀಡುತ್ತಿದೆ. ಸಹಜವಾಗಿಯೇ ಅವರ ದೌರ್ಜನ್ಯಗಳು ತಾರಕ್ಕೇರಿದೆ. ಸರ್ಕಾರದ ಕ್ರಮಗಳೂ ಅದಕ್ಕೆ ಪೂರಕವಾಗಿದೆ. ರಾಜ್ಯದ ಕೆಲವು ಪ್ರದೇಶಗಳಲ್ಲಿ ಬಡ ಕೃಷಿ ಕೂಲಿ ಕಾರ್ಮಿಕರಿಂದ ಭೂಮಿಯನ್ನು ಭೂಮಾಲಕರಿಗೆ ಕೊಡುವ ಪ್ರಕ್ರಿಯೆ ನಡೆದಿದ್ದರೆ, ಇನ್ನು ಕೆಲವೆಡೆ ಬಡ ಕೃಷಿಕರಿಂದ ಬಲವಂತವಾಗಿ ಭೂಮಿ ಕಿತ್ತುಕೊಳ್ಳಲಾಗುತ್ತಿದೆ. ಹಲವು ಕಡೆಗಳಲ್ಲಿ ಪೊಲೀಸರೇ ಮಧ್ಯಪ್ರವೇಶಿಸಿ ಭೂಮಾಲೀಕರ ಪರವಾಗಿ ಭೂಸ್ವಾಧೀನ ಮಾಡಿಕೊಡುತ್ತಿದ್ದಾರೆ. ಈ ಮೂಲಕ ರಾಜ್ಯದ ಶೋಷಿತ ಜನತೆ ಮೂರು

ಪುಟ 13ಕ್ಕೆ

ಚಾಮರಾಜನಗರ: ಶಾಪ ವಿಮೋಚನೆಗಾಗಿ ಹೋಮಹವನವೂ ತಂತ್ರಿ, ಜ್ಯೋತಿಷಿಗಳ ಹೊಟ್ಟೆಯೊಳಗಿನ ಜೀರ್ಣೋದ್ಧಾರವೂ


ತಾವು ಮುಖ್ಯಮಂತ್ರಿಯಾಗುವಾಗ ಕೂರುವ ಕುರ್ಚಿಗೇ ಅಗ್ರ ಪೂಜೆ ಮಾಡಿ, ಅಧಿಕಾರದುದ್ದಕ್ಕೂ ಹೋಮ, ಹವನ ಯಜ್ಞ,ಯಾಗ ಮಾಡಿ ಕೋಟಿ, ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಯಡಿಯೂರಪ್ಪನವರು ಕುರ್ಚಿ ಮೇಲೇ ಕುಳಿತು ದರ್ಬಾರ್ ನಡೆಸುವ ಅವಕಾಶ ತಪ್ಪಿಯೇ ಹೋಯಿತು. ಹೇಗೋ ಹಿಂದಿನ ಸೀಟಿನಲ್ಲಿ ಕೂತು ಚಾಲನೆ ಮಾಡುತ್ತಿದ್ದರೂ ಡ್ರೈವರ್ ಸೀಟಿನಲ್ಲಿ ಕೂತು ಕಾರು ಓಡಿಸುವುದರ ಮಜವೇ ಬೇರೆ. ಇರಲಿ ಯಡಿಯೂರಪ್ಪನವರು ಕೀ ಕೊಟ್ಟಂತೆ ತಿರುಗಿ,ಕೂತು, ಎದ್ದು ಮಾಡಬೇಕಿರುವ ಕೀಲಿ ಬೊಂಬೆ ಸದಾನಂದಗೌಡರಿಗೆ ಪಾಪ ಏನು ಕುರ್ಚಿ ವ್ಯಾಮೋಹ ನೋಡಿ. ಇವರೂ ಕೂರುವ ಮುಂಚೆ ಕುರ್ಚಿಯನ್ನು ಪೂಜಿಸಿ ಸಾಷ್ಟಾಂಗ ವಂದಿಸಿದವರೇ. ಅದು ಬೇರೆ ಯಡಿಯೂರಪ್ಪರು ಹಾಕಿ ಕೊಟ್ಟ ದಾರಿಯೇ ನನ್ನದು ಅಂತಲೂ ಅವರು ಹೇಳಿದ್ದಾರೆ. ನಿಜ ಅವರದ್ದು ಇದೇ ದಾರಿ. ರಾಜ್ಯದ ಮುಖ್ಯಮಂತ್ರಿಗಳು ಚಾಮನಗರಕ್ಕೆ ಕಾಲಿಟ್ಟರೆ ಕುರ್ಚಿ ಕಳೆದುಕೊಳ್ಳುತ್ತಾರೆ ಎಂಬುದು ಹಳೆಯ ಮೂಢನಂಬಿಕೆ. ಹಾಗಾಗಿ ರಾಜ್ಯದ ಎಷ್ಟೋ ಜನ ಮುಖ್ಯಮಂತ್ರಿಗಳು ಚಾಮರಾಜನಗರಕ್ಕೆ ಹೆಜ್ಜೆಯನ್ನೆ ಇಡಲಿಲ್ಲ. (ಆದರೂ ಅವರುಗಳಲ್ಲಿ ಹಲವರು ಅಕಾಲಿಕವಾಗಿ ಕುರ್ಚಿ ಕಳಕೊಂಡರು ಎಂಬುದು ಬೇರೇ ವಿಷಯ ಬಿಡಿ.)

ಹಾಲಿ ಮುಖ್ಯಮಂತ್ರಿ ಸನ್ಮಾನ್ಯ ಡಿ.ವಿ. ಸದಾನಂದರ ಗೌಡರು ಈ ವಿಷಯದಲ್ಲಿ ಇತರ ಮು.ಮ.ಗಳಿಗಿಂತಲೂ 'ಪ್ರಗತಿಪರರು' ನೋಡಿ. ಅವರು ಸಮಸ್ಯೆಯ ಮೂಲಕ್ಕೆ ಹೋಗಿ ಈ ದೋಷಗಳಿಗೆ ಮೂಲ ಕಾರಣ ಏನು ಅಂತ ಪತ್ತೆ ಹಚ್ಚಿ ಅದನ್ನೇ ನಿರ್ಮೂಲನೆ ಮಾಡುವುದಕ್ಕೆ ಕೈ ಹಾಕಿದ್ದಾರೆ. ಕೇರಳದ ಪುರೋಹಿತರು, ತಂತ್ರಿಗಳು, ಜ್ಯೊತಿಷಿಗಳು ಎಲ್ಲರನ್ನು ಕರೆದು ಅಷ್ಟ ಮಂಗಳ ಪ್ರಶ್ನೆ ಕೇಳಲಾಗಿ, ದೇವಸ್ಥಾನದ ಮುಂದಿನ ಹಳೆಯ ಕೊಳವೊಂದು ಹೂಳು ತುಂಬಿ ಮುಚ್ಚಿ ಹೋಗಿರುವುದೇ ದೋಷಕ್ಕೆ ಕಾರಣ. ಅದನ್ನು ಜೀರ್ಣೋದ್ಧಾರ ಮಾಡಿ ಭರ್ಜರಿ ಹೋಮ ಹವನ ಮಾಡಿದರೆ ದೋಷ ನಿವಾರಣೆ ಅಂದರಂತೆ. ತಂತ್ರಿಗಳು ಹೇಳಿದ ಕೆಲಸಗಳೆಲ್ಲಾ ಸಾಂಗವಾಗಿ ನೆರವೇರಿದೆ. ಸರ್ಕಾರದ ಸಚಿವರೇ ಸ್ವತಃನಿಂತು, ತಿನ್ನುವ ಆಹಾರ, ತೊಡುವ ಬಟ್ಟೆಗಳನ್ನು ಉರಿಯುವ ಅಗ್ನಿಗೆ ಅರ್ಪಿಸುವ ಹೋಮ ನಡೆಸಿ ಕೃತಾರ್ಥರಾಗಿದ್ದಾರೆ. ಇದು ಚಾಮರಾಜನಗರದ ಶಾಪ ವಿಮೋಚನೆ'ಗಾಗಿ ಎಂದು ಹೇಳಲಾಗುತ್ತದೆ. ಈ ಆಳುವ ಜನರ ಈ ಕುರ್ಚಿ ಕೆವಲಿಗೆ ಸರ್ಕಾರದ ಖಜಾನೆಯಿಂದ ಖರ್ಚಾಗಿರುವುದು ಕೇವಲ 20,0000 ಭಾರತೀಯ ರೂಪಾಯಿಗಳು (ಇಪ್ಪತ್ತು ಲಕ್ಷ ರೂ.) ಅಂತ ಅಧಿಕೃತವಾಗಿ ಹೇಳಲಾಗಿದೆ. ಬೇರೆ ಬೇರೆ ದಾರಿ–ಮಾರ್ಗಗಳಿಂದ ಈ ಹೋಮ ಕುಂಡಕ್ಕೆ ಮತ್ತು ಪುರೋಹಿತರ ಜೋಳಿಗೆಗೆ ಎಷ್ಟೆಷ್ಟು ಲಕ್ಷಗಳನ್ನು ಸುರಿಯಲಾಗಿದೆಯೋ ಗೊತ್ತಿಲ್ಲ. ಈ ಒಟ್ಟು ಪ್ರಕರಣಗಳಲ್ಲಿ ಏನು ಆಗದಿದ್ದರೂ ತಂತ್ರಿಗಳ, ಪೂಜಾರಿಗಳ ಡೊಳ್ಳು ಹೊಟ್ಟೆಗೆ ಸೇರಿದ ಮೃಷ್ಟಾನ್ನ ಭೋಜನ ಮಾತ್ರ ಚೆನ್ನಾಗಿ ಜೀರ್ಣೋದ್ಧಾರವಾಗಿ ವಿಸರ್ಜನೆ ಯಾಗಿರುತ್ತದೆ. ಅದೊಂದೆ ಚಾಮರಾಜನಗರದ ಮಣ್ಣಿಗೆ ಸಿಕ್ಕಿರುವ ಭಾಗ್ಯ. ಇನ್ನೇನಾದರೂ ಸಿಕ್ಕರೆ ಅದು ಹೋಮ' ಕುಂಡದಲ್ಲಿ ಉಳಿಯುವ ಬೂದಿ. ಏನಂತೀರಿ?

★

ಜಾಗತಿಕ ಬಂಡವಾಳ 'ಹರಿದು' ಬಂದುದು ಎಲ್ಲಿಗೆ?

ಜಾಗತಿಕ ಬಂಡವಾಳಗಾರರ ಸಮಾವೇಶ ಮಾಡಿ ವಿಶ್ವದ ಮೂಲೆ ಮೂಲೆಗಳಿಂದ ಕರ್ನಾಟಕ ರಾಜ್ಯಕ್ಕೆ ಬಂಡವಾಳ ಆಹ್ವಾನ ಮಾಡುತ್ತೇವೆ. ಕರ್ನಾಟಕ ರಾಜ್ಯವನ್ನು ಇನ್ನಿಲ್ಲದಂತೆ ಅಭಿವೃದ್ಧಿ ಮಾಡುತ್ತೇವೆ ಅಂತ ರಾಜ್ಯ ಬಿಜೆಪಿ ಸರ್ಕಾರ ಸಿಕ್ಕಾಪಟ್ಟೆ ಊಳಿಟ್ಟು,



ಹುಯಿಲೆಬ್ಬಿಸಿ ಕಳೆದ ವರ್ಷ ನಡೆಸಿದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಬಗೆಗೆ ನಿಮಗೆ ಗೊತ್ತೆ ಇದೆ.

ಈ ಸಮಾವೇಶದಿಂದ ಏನೆಲ್ಲಾ ಲಾಭ (ಯಾರಿಗೆ?)ವಾಗಿದೆ? ಅಂತ ಕೆಲವು ಉದಾಹರಣೆಗಳನ್ನು ನೋಡಿ.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಬಂಡಿಪುರ ಅಭಯಾರಣ್ಯ ಪ್ರದೇಶದ ಪರಿಸರ, ಅಲ್ಲಿನ ಸೂಕ್ಷ್ಮತೆ ಏನು ಅಂತ ನಿಮಗೆ ಗೊತ್ತಿದೆ. ವಿಶಿಷ್ಟ ವನ್ಯಜೀವಿಗಳ ಆವಾಸ ಸ್ಥಾನ ಈ ಪ್ರದೇಶ. ಹುಲಿ, ಜಿಂಕೆ ಕಾಡಾನೆ...ನವಿಲು ಹೀಗೆ ಎಷ್ಟೊ ಕಾಡುಮೃಗಗಳ ನೆಲೆ. ಸುಂದರ ವನ. ಚಿತ್ತಾಕರ್ಷಕ ಪ್ರವಾಸಿ ತಾಣ.

ಹೌದು. ಇವೆಲ್ಲಾ ನಿಜ. ಅದು ಈ ಅತಿ ಸೂಕ್ಷ್ಮ ಭಾಗದಲ್ಲಿನ ಅರಣ್ಯ ಭೂಮಿಯ ಮೇಲೆ ಕಣ್ಣಿಟ್ಟವರಿಗೂ ಗೊತ್ತಿದೆ. ಇಂತಹ ಸುಂದರ ಅರಣ್ಯದ ಅಭಿವೃದ್ಧಿಗಾಗಿ ಅಲ್ಲಿ ದೊಡ್ಡ ದೊಡ್ಡ ರೆಸಾರ್ಟ್‌ಗಳನ್ನು ಆರಂಭಿಸಿದರೆ ಹೇಗೆ ? ಇದು ಹೇಗೂ ರೆಸಾರ್ಟ್ ಸ್ನೇಹಿ, ಅರಣ್ಯ ಪ್ರೇಮಿ, ರಿಯಲ್ ಎಸ್ಟೇಟ್ ಪರ ಬಿಜೆಪಿ ಸರ್ಕಾರ ಅಲ್ಲವೇ? ಹೀಗೆ 'ಅರಣ್ಯ ಅಭಿವೃದ್ಧಿ' ಪಡಿಸುವ ಅಭಿವೃದ್ಧಿಕೋರರ ಕಣ್ಮಣಿ ಅಲ್ಲವೇ ಈ ಸರ್ಕಾರ!!

ಇಲ್ಲಿ ಏನೇನು ನಡೆದಿದೆ ನೋಡಿ. ಎ ಜಗದೀಶ್ ರಾಮ್ ಅಂತ ಒಬ್ಬರು, ' ಟ್ರಾಫಿಕಲ್ ವೈಲ್ಡ್‌ನೆಸ್ ಮತ್ತು ವೆಲ್‌ನೆಸ್ ವಿಲೇಜ್ ಪ್ರೈ.ಲಿಮಿಟೆಡ್' ಅನ್ನೋ ಹೆಸರಿನಲ್ಲಿ ಈ ಪ್ರದೇಶದ ಬಾಚಳ್ಳಿ ಗ್ರಾಮದಲ್ಲಿ 28.25 ಎಕರೆ ಅರಣ್ಯ ಭೂಮಿ ಬಾಚಿಕೊಂಡಿದ್ದಾರೆ. ಆಹಾ ಭಾಗ್ಯವೇ !! ಯಾರಿಗುಂಟು ಯಾರಿಗಿಲ್ಲ ? ತಲೆ ತಲಾಂತರಗಳಿಂದ ಅರಣ್ಯ ಪ್ರದೇಶದಲ್ಲಿ ನೆಲೆಸಿರುವ ಆದಿವಾಸಿಗಳೆಲ್ಲಾ ಕಾಡು ಬಿಟ್ಟು ನಾಡಿಗೆ ಓಡಬೇಕೆಂಬ ಆದೇಶದ ಮೇಲೆ ಆದೇಶ ಗಳನ್ನು ಸರ್ಕಾರಗಳು ಹೊರಡಿಸುತ್ತಿರುವಾಗ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆದು ಇಂತಹ ಮಹಾನ್ 'ಅಭಿವೃದ್ಧಿ' ಕೆಲಸಗಳು ಆಗುತ್ತಿವೆ ನೋಡಿ. ಇದು ಬಿಜೆಪಿ ದರ್ಬಾರ್‌ನ ಮಹಿಮೆ. ಇಲ್ಲಿ ಒಂದೇ ಪ್ರಕರಣ ಇಲ್ಲ. ಮತ್ತೊಂದು ನೋಡಿ. ಇಲ್ಲೆ ಈ ಭಾಗದಲ್ಲೇ ಹಂಗಳ ಹೋಬಳಿಯ ಕೆಬ್ಬೆಪುರ ಗ್ರಾಮದಲ್ಲಿ 'ಪ್ರಾಕೃತಿಕ ಮತ್ತು ಆಯುರ್ವೇದ ರೆಸಾರ್ಟ್'ಗೆ 23.23 ಎಕರೆ. ಅರಣ್ಯ ಭೂಮಿ ದಯಪಾಲಿಸ ಲಾಗಿದೆ.

ಈಗಾಗಲೇ ಈ ಭಾಗದಲ್ಲಿ 10 ರೆಸಾರ್ಟ್‌ಗಳು ಕಾರ್ಯ ನಿರ್ವಹಿಸುತ್ತ ಇವೆ. ಇನ್ನೂ ಹತ್ತಾರು ರೇಸಾರ್ಟ್‌ಗಳು ಇಲ್ಲಿ ಬಂದರೆ ಸರ್ಕಾರ ಬಿಕ್ಕಟ್ಟಿಗೆ ಸಿಕ್ಕಿದಾಗಲೆಲ್ಲಾ, ಭಿನ್ನಮತವೆಂಬುದು 'ಅಭಿವೃದ್ಧಿ'ಯಾದಾಗಲೆಲ್ಲಾ ಶಾಸಕರು, ಸಚಿವರು ಇಲ್ಲಿ ಬಂದು ತಂಗಿ 'ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ' ಇಲ್ಲಿನ ತಂಪಿನ ವಾತಾವರಣದಲ್ಲಿ ಕುಳಿತು 'ಚಿಂತನ', 'ಮಂಥನ'ಗಳನ್ನು ನಡೆಸಲು ಬಲು ಸೊಗಸಾಗಿರುತ್ತದೆ. ಅಂದ ಹಾಗೆ ಜಾಗತಿಕ ಬಂಡವಾಳಗಾರರ ಸಮಾವೇಶದ ಸಂದರ್ಭದಲ್ಲಿ ರಾಜ್ಯದಲ್ಲಿ ಗಣಿಗಾರಿಕೆ ವಲಯದಲ್ಲಿ ಬಂಡವಾಳ ಹೂಡುವ ಬಗ್ಗೆ ಬಾರಿ ಸೂಚನೆಗಳು ಬಂದಿದ್ದವು. ಅವುಗಳ ಒಳಹೊಕ್ಕು ನೋಡಿದರೆ.... ಜನಾರ್ಧನರೆಡ್ಡಿ, ಶ್ರೀನಿವಾಸರೆಡ್ಡಿಗಳ ಮುಖಗಳು ಅಥವಾ ಅದರ ಜೆರಾಕ್ಸ್ ಪ್ರತಿಗಳು ಸಿಗಬಹುದು.

✳




ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

ಬಳ್ಳಾರಿ ಬಂದ್ ಯಾಕೆ

ಗಣಿ ಲೂಟಿಕೋರ ರೆಡ್ಡಿ ಸಹೋದರರ ಒಂದು ದೊಡ್ಡ ತಲೆ ಗಾಲಿ ಜನಾರ್ಧನ ರೆಡ್ಡಿ ಸರ್ ಅಂದರೆ 'ಜಿಜೆಆರ್ ಸರ್' ಅವರು ಈಗ ಹೈದರಾಬಾದ್‌ನ ಜೈಲಿನ ಕಂಬಿಗಳನ್ನು ಎಣಿಸುತ್ತಾ ಕುಳಿತಿದ್ದಾರೆ. ಈ ಬಂಧನವನ್ನು ಪ್ರತಿಭಟಿಸಿ ಬಳ್ಳಾರಿ ಜಿಲ್ಲೆಯ ಬಿಜೆಪಿ ಪದಾಧಿಕಾರಿಗಳು, ರೆಡ್ಡಿ ಬಳಗದ ಪುಂಡು ಪೋಕರಿಗಳು, ರೌಡಿಗಳು ಎಲ್ಲ ಸೇರಿಕೊಂಡು ಸೆಪ್ಟೆಂಬರ್ 6 ರಂದು 'ಯಶಸ್ವಿ' ಬಳ್ಳಾರಿ ಬಂದ್ ನಡೆಸಿದ್ದಾರೆ. ಜಿಲ್ಲಾಧಿಕಾರಿ ಕಛೇರಿ ಸೇರಿದಂತೆ ಸರ್ಕಾರಿ ಕಛೇರಿಗಳ ಮೇಲೆ ದಾಳಿ ನಡೆಸಿ, ಸರ್ಕಾರಿ ಬಸ್‌ಗಳಿಗೆ ಕಲ್ಲು ತೂರಿ ದಾಂದಲೆ ನಡೆಸಿದ್ದಾರೆ. ಬಂದ್ ಮಾಡದ ಜನರ ಮೇಲೆ ಕೈ ಮಾಡಿದ್ದಾರೆ. 'ರೆಡ್ಡಿ ಸರ್' ಅವರನ್ನು ಅರೆಸ್ಟ್ ಮಾಡಿದ್ದು ಸೆಪ್ಟೆಂಬರ್ 5 ರಂದು. ಸೆಪೆಂಬರ್ 6 ಕ್ಕೆ ಆಗಲೇ ಬಳ್ಳಾರಿ ಬಂದ್. ಮೆಚ್ಚ ಬೇಕಾದದ್ದೇ. ಈ ಘನಾಂದಾರಿ ದಾಂದಲೆಯ ಕೆಲಸಗಳೆಲ್ಲ ಅಕ್ರಮ ಗಣಿಗಾರಿಕೆಯ ಜೊತೆಗೆ ಇದುವರೆಗೆ ಏನನ್ನು ಮಾಡಿಕೊಂಡು ಬರಲಾಗಿದೆಯೋ ಅದರ ಮುಂದುವರಿಕೆಯೇ ಆದ್ದರಿಂದ ಎಲ್ಲಾ ಸಲೀಸು. ಹೊಸದಾಗಿ ಸಿದ್ಧತೆ ಏನೂ ಬೇಕಾಗಿಲ್ಲ. ಏನೂ ಕಷ್ಟವೂ ಇಲ್ಲ. ಮುಂದೆ ಕರುಣಾ ಕರ ರೆಡ್ಡಿ ಸರ್, ಸೋಮಶೇಖರ ರೆಡ್ಡಿ ಸರ್....ಶ್ರೀ ರಾಮುಲು ಸರ್...ಅವರುಗಳು ಜೈಲಿಗೆ ಹೋದರೂ ಬಿಜೆಪಿ ಬಳಗ ಇಂಥದ್ದೇ ದಾಂದಲೆಯನ್ನು ಮಾಡಿ 'ಯಶಸ್ವಿ' ಬಂದ್ ಮಾಡಬಹುದು.

✳



ಯೆಡ್ಡಿ-ರೆಡ್ಡಿ ರಾಜಕೀಯವನ್ನು ತಿರಸ್ಕರಿಸಬೇಕಲ್ಲವೇ?

ಪುಟ 9 ರಿಂದ

ಈ ಬೆಳವಣಿಗೆಗಳು ಆಘಾತಕಾರಿಯಾಗಿವೆ.

ರಾಜ್ಯ ಸರ್ಕಾರ ಮತ್ತು ಬಿಜೆಪಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದವರನ್ನು ಸಮರ್ಥಿಸುತ್ತಿರುವುದು ಖಂಡನೀಯ. ಮುಖ್ಯಮಂತ್ರಿ ಸದಾನಂದಗೌಡರು ರೆಡ್ಡಿ ಸಹೋದರರಿಗೆ ಎಲ್ಲ ರೀತಿಯ ಬೆಂಬಲ ನೀಡಲಾಗುವುದು ಎಂದು ಹೇಳುತ್ತಾರೆ. ಯಡಿಯೂರಪ್ಪನವರು ತಮ್ಮ ಅಧಿಕಾರಾವಧಿಯಲ್ಲಿ ಮಾಡಿರುವ ಅಕ್ರಮ-ಅವ್ಯವಹಾರಗಳಿಗಾಗಿ ಶಿಕ್ಷೆಗೊಳಗಾಗುವುದನ್ನು ತಪ್ಪಿಸಲು ರಾಜ್ಯ ಸರ್ಕಾರ ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದೆ. ಇಂತಹ ಒಂದು ರಾಜಕೀಯ ಪಕ್ಷದಿಂದ ಕರ್ನಾಟಕ ಮುಂದೆ ಎಂದಾದರೂ ಒಳ್ಳೆಯ ಆಡಳಿತವನ್ನು ನಿರೀಕ್ಷೆ ಮಾಡಲು ಸಾಧ್ಯವೇ?

ಬಿಜೆಪಿ ಅಧಿಕಾರಕ್ಕಾಗಿ ಏನು ಮಾಡಲೂ ಹೇಸುವುದಿಲ್ಲ ಎಂಬುದು ಈ ಎಲ್ಲ ಬೆಳವಣಿಗೆಗಳಿಂದ ಮತ್ತೆ ಸಾಬೀತಾಗಿದೆ. ಬಿಜೆಪಿಯಲ್ಲಿದ್ದರೆ ಲೂಟಿ ಮಾಡಲು ಎಲ್ಲಿಲ್ಲದ ಅವಕಾಶ ಸಿಗುತ್ತದೆ ಎನ್ನುವ ಕಾರಣಕ್ಕೆ ಬೇರೆ ಪಕ್ಷಗಳಲ್ಲಿರುವ ಭ್ರಷ್ಟರೂ ಬಿಜೆಪಿಯತ್ತ ಜೊಲ್ಲು ಸುರಿಸುತ್ತಾರೆ. ಕೊಪ್ಪಳದ ಕರಡಿ ಸಂಗಣ್ಣ ಇತ್ತೀಚಿನ ಗಿರಾಕಿ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬಿಜೆಪಿಗೆ ನೆಲೆ ಒದಗಿಸಿದವರೇ ನಾವು ಎಂದು ಬಳ್ಳಾರಿಯ ರೆಡ್ಡಿ ಹೇಳಿಕೊಳ್ಳುತ್ತಿದ್ದರು. ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಇವರು ಹರಿಸಿದ ಹಣದ ಹೊಳೆಯ ಮೂಲವೇ ಅಕ್ರಮ ಗಣಿಗಾರಿಕೆ. ಬಿಜೆಪಿ ನಡೆಸಿದ ಹತ್ತು-ಹದಿನಾಲ್ಕು 'ಆಪರೇಷನ್ ಕಮಲ' ಪ್ರಕರಣಗಳಲ್ಲಿಯೂ ಹರಿದು ಬಂದದ್ದು ಗಣಿ ಹಣವೇ. ಯಡಿಯೂರಪ್ಪ ಇನ್ನೊಂದು ರಾಜಕೀಯ ಪಕ್ಷವನ್ನು ಕಟ್ಟುವ ಬೆದರಿಕೆ ಹಾಕಿದ್ದು ಸಹ ಅವರ ಅಕ್ರಮ ಸಂಪಾದನೆಯ ಬಲದಿಂದ. ಈಗ ಇವರು ಒಬ್ಬೊಬ್ಬರಾಗಿ ಮಾಡಿದ್ದನ್ನು ಉಣಲಾರಂಭಿಸಿದ್ದಾರೆ!

ರಾಜ್ಯದ ಜನತೆ, ಈಗಲಾದರೂ, 'ಸಾಕಪ್ಪ ಸಾಕು, ಬಿಜೆಪಿಯ ಸಹವಾಸ ಸಾಕು' ಎಂಬ ತಿಳುವಳಿಕೆಗೆ ಬರಬೇಕಾಗಿದೆ. ರಾಜ್ಯದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ, ಭೂ ಕಬಳಿಕೆ ಮತ್ತು ಭ್ರಷ್ಟಾಚಾರ-ಅಧಿಕಾರ ದುರುಪಯೋಗದಲ್ಲಿ ಪಾಲ್ಗೊಂಡವರ ಎಲ್ಲರ ವಿರುದ್ಧ ಕಾನೂನು ಕ್ರಮ ಜರುಗಬೇಕು ಮತ್ತು ಅದು ಸಾಧ್ಯವಾಗಬೇಕಾದರೆ ಎಲ್ಲವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂಬ ಒತ್ತಾಯ ಎಲ್ಲಾ ಮೂಲೆಗಳಿಂದಲೂ ಬರುವಂತಾಗಬೇಕು. ಬಿಜೆಪಿಯನ್ನು ಪ್ರಾಮಾಣಿಕವಾಗಿಯೇ ಬೆಂಬಲಿಸುತ್ತಾ ಬಂದಿರುವವರು ಸಹ ತಮ್ಮ ನಿಲುಮೆಯನ್ನು ಪುನರ್ ಪರಿಶೀಲಿಸುವುದು ರಾಜ್ಯದ ನೈಜ ಹಿತ ದೃಷ್ಟಿಯಿಂದ ಅತ್ಯಗತ್ಯವಾಗಿದೆ. □

ರೆಡ್ಡಿ ಜೈಲಿನಲ್ಲಿ... ಯೆಡ್ಡಿ ದಾರಿಯಲ್ಲಿ...

ಪುಟ 8 ರಿಂದ

ನ್ಯಾಯಾಧೀಶರ ಪೀಠದತ್ತ ನಮಸ್ಕರಿಸಿ ಸುಮ್ಮನೆ ನಿಂತರು. ಇದನ್ನು ನೋಡಿ ಜನ ನಗತೊಡಗಿದರು. ಕೆಲವರು ಮೊಬೈಲ್‌ನಲ್ಲಿ ಫೋಟೋ ತೆಗೆದರು. ಇನ್ನೂ ಕೆಲವರು ವಿಜಯದ ಸಂಕೇತ ತೋರಿಸಿ ಗೇಲಿ ಮಾಡಿದರು. ನ್ಯಾಯಾಧೀಶರು ಬಂದು ಪೀಠದಲ್ಲಿ ಕುಳಿತಾಗ ಯಡಿಯೂರಪ್ಪ ಅವ ಮುಖದಲ್ಲಿ ಆತಂಕ ಎದ್ದು ಕಾಣುತ್ತಿತ್ತು. ವಿಚಾರಣೆಯನ್ನು ಮುಂದೂಡಲಾದಾಗ ನಿರಾಳವಾಗಿ ಕೋರ್ಟ್‌ನಿಂದ ಹೊರಬಂದರು. ಕೋರ್ಟ್ ವರಾಂಡದಲ್ಲಿ ಹೋಗುವಾಗ ಅಲ್ಲಿ ನೆರೆದಿದ್ದ ಜನ ಜೋರಾಗಿ ಕಿರುಚತೊಡಗಿದರು. ಕೆಲವರು 'ಶೇಮ್, ಶೇಮ್' ಎಂದು ಕೂಗಿದರು. ತೀ ಮುಜುಗರಕ್ಕೆ ಒಳಗಾದ ಯಡಿಯೂರಪ್ಪ ಮೌನವಾಗಿ ಹೊರ ನಡೆದರು.

ಒಟ್ಟಾರೆಯಾಗಿ ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ಸ್ವಜನ ಪಕ್ಷಪಾತದ ಆರೋಪಗಳಿಗೆ ಒಳಗಾಗಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕುರಿತಾದ ಕೋರ್ಟ್ ಕಲಾಪಗಳು ಹೊಸ ಹೊಸ ತಿರುವುಗಳನ್ನು ಪಡೆಯುತ್ತಾ ಅನಾವರಣಗೊಳ್ಳುತ್ತಿದೆ. ವಿಚಾರಣೆಯನ್ನು ನಿಧಾನಗೊಳಿಸುವ ಪ್ರಯತ್ನ ನಡೆಯುತ್ತಿದೆ.

ಯಡಿಯೂರಪ್ಪ ಜೈಲಿಗೆ ಹೋಗುವುದನ್ನು ತಪ್ಪಿಸಲು ಹುನ್ನಾರ ನಡೆದಿದೆ. ಆ ಉದ್ದೇಶಕ್ಕಾಗಿಯೇ ಯಡಿಯೂರಪ್ಪ ಸೂಚಿಸಿದವರನ್ನೇ ಅಂದು ಸದಾನಂದಗೌಡರನ್ನು ಮುಖ್ಯಮಂತ್ರಿ ಗಾದಿ ತರಲಾಗಿದೆ. ಲೋಕಾಯುಕ್ತರು ನೀಡಿದ ವರದಿಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳುವ ಬದಲು ಅದನ್ನು ಅಧ್ಯಯನ ಮಾಡಲು ಮುಖ್ಯ ಕಾರ್ಯದರ್ಶಿ ನೇತೃತ್ವ ಸಮಿತಿಯನ್ನು ರಚಿಸಲಾಗಿದೆ. ಬಿಜೆಪಿ ಹೈಕಮಾಂಡ್ ಸಹ ಯಡಿಯೂರಪ್ಪನವರ ಬೆಂಬಲಕ್ಕೆ ನಿಂತಿದೆ. ಭ್ರಷ್ಟಾಚಾರ ಪ್ರಕರಣ ತನಿಖೆಗೆ ಸಂಬಂಧಿಸಿದ ಅದು ಕೇಂದ್ರ ಸರ್ಕಾರದ ವಿಷಯದಲ್ಲಿ ಒಂದು ರೀತಿಯ ಮತ್ತು ತನ್ನದೇ ಪಕ್ಷದ ಸರ್ಕಾರ ಇರುವ ರಾಜ್ಯಗಳ ಬಗ್ಗೆ ಇನ್ನೊಂದು ರೀತಿಯ ಧೋರಣೆ ಅನುಸರಿಸುತ್ತಿದೆ.

ಬಿಜೆಪಿಯ ಈ ಇಬ್ಬಗೆಯ ನೀತಿ ಖಂಡನೀಯವಾಗಿದೆ. ಕೊನೆಯಲ್ಲಿ ಬಿಜೆಪಿ ವರಿಷ್ಠರು ಯಡಿಯೂರಪ್ಪಗೆ "ಮಾಡಿದುಣ್ಣೋ ಮಹರಾಯ" ಎಂದು ಹೇಳಲೇ ಬೇಕಾಗುವುದು.

ಮಮತಾ ಬ್ಯಾನರ್ಜಿ ಸರ್ಕಾರ

ಪುಟ 11ರಿಂದ

ದಶಕಗಳ ಹಿಂದೆ ನಡೆಸಿದ ಹೋರಾಟದ ಫಲಕ್ಕೆ ಹಿನ್ನಡೆ ಉಂಟಾಗಿದೆ. ತಮ್ಮ ಮೂರು ದಶಕಗಳ ಭೂಮಿಯ ಹಕ್ಕನ್ನು ಪ್ರಶ್ನಿಸಲಾಗುತ್ತಿದೆ. ಆರಂಭದಲ್ಲಿ ಹಿನ್ನಡೆ ಅನುಭವಿಸಿದ ಶೋಷಿತ ವರ್ಗಗಳು ಈಗ ಪ್ರತಿರೋಧ ವ್ಯಕ್ತಪಡಿಸುತ್ತಿವೆ. ಇಂತಹ ಹಲವು ಪ್ರಕರಣಗಳು ರಾಜ್ಯದಲ್ಲಿ ಅಲ್ಲಲ್ಲಿ ವರದಿಯಾಗುತ್ತಿದೆ.

ಬರ್ದ್ವಾನ್ ಜಿಲ್ಲೆಯ ಕಮರ್‌ಕಟಿ ಪ್ರದೇಶದಲ್ಲಿ ಸಮರಧೀರ ಪ್ರತಿರೋಧದ ಘಟನೆ ಇತ್ತೀಚೆಗೆ ವರದಿಯಾಗಿದೆ. ಇಲ್ಲಿನ ಹಳೆಯ ಭೂಮಾಲೀಕ ಕುಟುಂಬವೊಂದು ತಮ್ಮ 18 ಎಕರೆ ಭೂಮಿಯನ್ನು ಹಿಂತಿರುಗಿಸುವಂತೆ ಒತ್ತಾಯಿಸಿತು. ಇದು ಕೇವಲ ಮಾತಿನ ಕೇಳಿಕೆಯಾಗಿರಲಿಲ್ಲ. ಬಡ ಕೃಷಿಕರ ಗದ್ದೆಗಳಿಗೆ ಟ್ರ್ಯಾಕ್ಟರ್‌ಗಳನ್ನು ರಾತೋರಾತ್ರಿ ನುಗ್ಗಿಸಲಾಯಿತು. ಕಷ್ಟಪಟ್ಟು ಬೆಳೆದು ಕಟಾವಿಗೆ ಬಂದಿದ್ದ ಭತ್ತವನ್ನು ಕಿತ್ತುಹಾಕಲಾಯಿತು. ಸಂತ್ರಸ್ತರು ಪೊಲೀಸರ ಮೊರೆ ಹೋದಾಗ ಸಿಕ್ಕಿದ್ದು ಭೂಮಾಲೀಕರ ಪರವಾದ ಸಲಹೆ. ಈಗ ರಾಜ್ಯಾಡಳಿತ ಬದಲಾಗಿದೆ. ಭೂಮಿ ಭೂಮಾಲಕರದ್ದೇ, ಎಂದು ಪೊಲೀಸರೂ ಸಮಜಾಯಿಷಿ ನೀಡಿದರು. ಸಂತ್ರಸ್ತ 435 ಕುಟುಂಬಗಳು ಕಾನೂನು ಹೋರಾಟಕ್ಕೆ ಮುಂದಾದವು. ಚುನಾವಣೆಯಲ್ಲಿ ತೃಣಮೂಲ ಪರ ನಿಂತಿದ್ದ, ಅವರಿಗೆ ಮತ ಚಲಾಯಿಸಿದ್ದ ಜನಸಮುದಾಯಕ್ಕೆ ಪರಿಸ್ಥಿತಿಯ ಅರಿವಾಯಿತು. ಆಕ್ರೋಶಗೊಂಡು ಹಗಲಿಗೆ ಕೆಂಬಾವುಟವನ್ನು ಏರಿಸಿ ಕಬಳಿಸಿದ ಭೂಮಿಯನ್ನು ಮರು ಸ್ವಾಧೀನಕ್ಕೆ ಪಡೆದುಕೊಂಡರು. ಆಗಸ್ಟ್ 1ರಂದು ಹೋರಾಟ ಸಂಪೂರ್ಣಗೊಂಡು ಇಡೀ ಕಮರ್‌ಕಟಿ ಪ್ರದೇಶದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಯಿತು.

ಕಮರ್‌ಕಟಿ ಕೇವಲ ಒಂದು ಉದಾಹರಣೆ ಮಾತ್ರ. ಕಳೆದ ಎರಡು ತಿಂಗಳಲ್ಲಿ 2200 ಬಡ ಕೃಷಿ ಕೂಲಿಕಾರ್ಮಿಕರಿಂದ 1200 ಬಿಘಾ ಜಮೀನನ್ನು ಭೂಮಾಲಕರು ಸ್ವಾಧೀನಕ್ಕೆ ಪಡೆದಿದ್ದಾರೆ. ಇದರಲ್ಲಿ 700 ಬಿಘಾ ಜಮೀನನ್ನು ಕೆಂಬಾವುಟದ ಸಂಘಟಿತ ಶಕ್ತಿಯಿಂದ ಮರು ಸ್ವಾಧೀನ ಮಾಡಿಕೊಳ್ಳಲಾಗಿದೆ. ರಾಜ್ಯದಾದ್ಯಂತ ಇಂತಹ ಹೋರಾಟಗಳು ಮುಂದುವರಿಯುತ್ತಿವೆ.

ಮಾತು ತಪ್ಪಿದ ಸರ್ಕಾರ:
ಮಂಕುಬೂದಿ ಎರಚಿದ ಮಮತಾ

ಒಂದು ಕಡೆ ಭೂಸ್ವಾಧೀನ ಹೋರಾಟಗಳು ನಡೆಯುತ್ತಿದ್ದರೆ; ಇನ್ನೊಂದೆಡೆ ಸಿಂಗೂರು ರೈತರಿಗೆ ಮಮತಾ ಸರ್ಕಾರ ಚಳ್ಳೆ ಹಣ್ಣು ತಿನ್ನಿಸಿದ್ದಾರೆ. 100 ದಿನಗಳ ಸರ್ಕಾರ ಜನತೆಗೆ ವಂಚನೆಯನ್ನೇ ಮಾಡಿದೆ. ಸಿಂಗೂರು ರೈತರಿಗೆ ಒತ್ತಾಯಪೂರ್ವಕವಾಗಿ ಭೂಮಿ ನೀಡುವ ಕಾರ್ಯಕ್ಕೆ ಅಧಿಸೂಚನೆಯನ್ನು ಹೊರಡಿಸಿದೆ. ಪ್ರಕರಣದ ವಿರುದ್ಧ ರೈತರು ನ್ಯಾಯಾಲಯದ ಮೆಟ್ಟಿಲೇರಿದ್ದು ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದೆ.

ಇನ್ನು ಜಂಗಲ್‌ಮಹಲ್ ಪ್ರದೇಶದಲ್ಲಿ ಪಡಿತರ ಸಮಸ್ಯೆಯನ್ನು ಬಗೆಹರಿಸಲು 23 ರೇಶನ್ ಅಂಗಡಿಗಳನ್ನು ತೆರೆಯುವುದಾಗಿ ಸರ್ಕಾರ ಘೋಷಿಸಿತ್ತು. ಇದುವರೆಗೆ ಒಂದೇ ಒಂದು ಅಂಗಡಿ ಆರಂಭಗೊಂಡಿಲ್ಲ.

ಇಲ್ಲಿನ ಕಾನೂನು ಮತ್ತು ಶಿಸ್ತು ಕಾಪಾಡಲು ಮತ್ತು ನಕ್ಸಲ್ ಸಮಸ್ಯೆಯನ್ನು ನಿಭಾಯಿಸಲು ಛತ್ತೀಸ್‌ಗಢ ಮಾದರಿಯಲ್ಲಿ 10 ಸಾವಿರ ಸಿಬ್ಬಂದಿ ಬಲದ ವಿಶೇಷ ಪೊಲೀಸ್ ಪಡೆಯನ್ನು ರಚಿಸುವುದಾಗಿ ಸರ್ಕಾರ ಪ್ರಸ್ತಾಪ ಮುಂದಿಟ್ಟಿತ್ತು. ಇದೇ ವೇಳೆ, ಈ ಸುಪ್ರೀಂ ಕೋರ್ಟ್‌ನ ನಿರ್ದೇಶನಗಳನ್ನು ಸಂಪೂರ್ಣ ಗಾಳಿಗೆ ತೂರಲಾಗಿದೆ. ಮತ್ತೊಂದು ಬೆಳವಣಿಗೆಯಲ್ಲಿ ಮಾವೋವಾದಿಗಳು ಮತ್ತೆ ಸಂಘಟಿತರಾಗುತ್ತಿದ್ದಾರೆ ಎಂಬ ಮಾಹಿತಿಗಳನ್ನು ಗುಪ್ತಚರ ಇಲಾಖೆಗಳು ದೃಢಪಡಿಸಿವೆ. ▲

ಅವರ ಬೆವರು

ಸತ್ಯಕ್ಕೆ ತೆರೆ ಎಳೆಯೆ ಮಾತ್ರವೇ ಅವರು
ನಿತ್ಯವೂ ಸುರಿಸುತ್ತಾ ಬಂದವರು ಬೆವರು
ಉಳಿದುದಕ್ಕೆ ಬೆವರನ್ನು ಮಾಡಿಲ್ಲ ವ್ಯರ್ಥ
ಆದರೂ ಸಾಧಿಸಲು ಆಗಿಲ್ಲ ಸ್ವಾರ್ಥ

- ವಿಡಂಬಾರಿ

ಇಂದಿರಾಗಾಂಧಿ ಬ್ಯಾಂಕ್ ರಾಷ್ಟ್ರೀಕರಣವನ್ನು ಸಂಪೂರ್ಣ ತಲೆಕೆಳಗು ಮಾಡಿದ ಯುಪಿಎ-2 ಸರಕಾರ

ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರಕಾರ 1969ರಲ್ಲಿ ಬ್ಯಾಂಕ್ ರಾಷ್ಟ್ರೀಕರಣವನ್ನು ಮಾಡಿತ್ತು. ಈಗ 42 ವರ್ಷಗಳ ನಂತರ ಅದೇ ಕಾಂಗ್ರೆಸಿನ ಯುಪಿಎ-2 ಸರಕಾರ ಆ ಧೋರಣೆಯನ್ನು ಸಂಪೂರ್ಣವಾಗಿ ತಲೆಕೆಳಗೆ ಮಾಡುವ ನಿರ್ಧಾರವನ್ನು ಮಾಡಿದೆ. ಅದೂ ವಿಶ್ವಾದ್ಯಂತ ದೊಡ್ಡ ಖಾಸಗೀ ಬ್ಯಾಂಕುಗಳ ಗೋಲ್‌ಮಾಲ್‌ಗಳಿಂದಾಗಿ ಜಾಗತಿಕ ಹಣಕಾಸು ವ್ಯವಸ್ಥೆಯಲ್ಲಿ ಕೋಲಾಹಲವೆದ್ದಿರುವಾಗ, ಹಾಗೂ ಭಾರತದ ಹಣಕಾಸು ವ್ಯವಸ್ಥೆ ರಾಷ್ಟ್ರೀಕೃತ ಬ್ಯಾಂಕುಗಳ ಅಸ್ತಿತ್ವದಿಂದಾಗಿಯೇ ಇಂತಹ ಕೋಲಾಹಲದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿರುವಾಗ.

ರಿಝರ್ವ್ ಬ್ಯಾಂಕ್ ಆಗಸ್ಟ್ 29 ರಂದು ಖಾಸಗೀ ವಲಯದಲ್ಲಿ ಬ್ಯಾಂಕುಗಳನ್ನು ತೆರೆಯಲು ಲೈಸೆನ್ಸ್ ಕೊಡಲು ಕರಡು ಮಾರ್ಗನಿರ್ದೇಶನಗಳನ್ನು ಪ್ರಕಟಿಸಿದೆ. ಕಳೆದ ವರ್ಷದ ಬಜೆಟಿನಲ್ಲಿ ಹಣಕಾಸು ಮಂತ್ರಿಗಳು ಈ ಬಗ್ಗೆ ಪ್ರಕಟಿಸಿದ್ದರು. ಈ ಮಾರ್ಗನಿರ್ದೇಶನಗಳು ದೊಡ್ಡ ಉದ್ದಿಮೆ ಮತ್ತು ವ್ಯಾಪಾರೀ ಗುಂಪುಗಳು ಅಂದರೆ ಕಾರ್ಪೊರೇಟ್ ಗಳು ತಮ್ಮದೇ ಬ್ಯಾಂಕುಗಳನ್ನು ತೆರೆಯಲು ಅವಕಾಶ ಕಲ್ಪಿಸಿವೆ. ಉದಾರೀಕರಣದ ನಂತರವೂ ಎರಡು ಬಾರಿ ಖಾಸಗೀ ಬ್ಯಾಂಕುಗಳಿಗೆ ಅವಕಾಶ ನೀಡಿದ್ದಾಗ(1993ರಲ್ಲಿ ಮತ್ತು 2001ರಲ್ಲಿ) ದೊಡ್ಡ ಕಾರ್ಪೊರೇಟ್‌ಗಳಿಗೆ ಲೈಸೆನ್ಸ್ ಕೊಡಲು ನಿಷೇಧವಿತ್ತು. ಹೀಗೆ ಯುಪಿಎ-2 ಸರಕಾರ ಕಾಂಗ್ರೆಸ್ ನೇತೃತ್ವದ ಸರಕಾರದ್ದೇ ಆದ ದೀರ್ಘಕಾಲದ ಧೋರಣೆಯನ್ನು ಕೈಬಿಟ್ಟು, ಮೂರು ವರ್ಷಗಳ ಅಂತರದಲ್ಲೇ ಜಾಗತಿಕ ಕುಸಿತಕ್ಕೆ ಮತ್ತು ಹಣಕಾಸು ಕೋಲಾಹಲಕ್ಕೆ ಕಾರಣವಾದ, ದೊಡ್ಡ ಖಾಸಗಿ ಬ್ಯಾಂಕುಗಳಿಗೆ ಅವಕಾಶ ಕೊಡಲು ಮುಂದಾಗಿದೆ. ಇಷ್ಟೇ ಅಲ್ಲ, ಸದ್ಯಕ್ಕೆ 49% ವಿದೇಶಿ ನೇರ ಹೂಡಿಕೆ ಹಾಗೂ ಇನ್ನೈದು ವರ್ಷಗಳಲ್ಲಿ 74% ದ ವರೆಗೆ ಅವಕಾಶ ಒದಗಿಸಿ ಅವೇ ಜಾಗತಿಕ ಸಟ್ಟಾಕೋರ ಬ್ಯಾಂಕುಗಳಿಗೆ ಪ್ರವೇಶ ನೀಡಲು ಮುಂದಾಗಿದೆ.

ಬ್ಯಾಂಕ್ ರಾಷ್ಟ್ರೀಕರಣದ ಮೊದಲು ದೊಡ್ಡ ಉದ್ದಿಮೆ ಗುಂಪುಗಳಿಗೆ ತಮ್ಮದೇ ಬ್ಯಾಂಕುಗಳಿದ್ದು, ಅವುಗಳ ವ್ಯಾಪಕ ಗೋಲ್‌ಮಾಲ್‌ಗಳನ್ನು ತಪ್ಪಿಸುವುದು ಇಂದಿರಾಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸರಕಾರ ತಂದ ಬ್ಯಾಂಕ್ ರಾಷ್ಟ್ರೀಕರಣದ ಘೋಷಿತ ಉದ್ದೇಶಗಳಲ್ಲಿ ಒಂದಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈಗ ಯುಪಿಎ-2 ಸರಕಾರ ಕೈಗೊಳ್ಳಲು ಹೊರಟಿರುವ ಕ್ರಮಗಳು ಹಣಕಾಸು ಶಕ್ತಿಯ, ಆ ಮೂಲಕ ರಾಜಕೀಯ ಪ್ರಭಾವದ ಕೇಂದ್ರೀಕರಣವನ್ನು ತರುವಂತವು. ಇವು ದೇಶದ ಆರ್ಥಿಕಕ್ಕೆ ಮಾರಕ, ಆದ್ದರಿಂದ ಎಲ್ಲ ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಟನೆಗಳು ಮತ್ತು ಸಾಮೂಹಿಕ ಸಂಘಟನೆಗಳು ಇವನ್ನು ವಿರೋಧಿಸಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.

ನಮ್ಮ ದೇಶದ ಆಳರಸರಿಗೆ ಮಾದರಿಯಾಗಿರುವ ಅಮೆರಿಕಾದಲ್ಲೂ ಉದ್ದಿಮೆ ಗುಂಪುಗಳು ಬ್ಯಾಂಕುಗಳನ್ನು ತೆರೆಯುವುದು ನಿಷಿದ್ಧ ಎಂಬುದನ್ನು ಗಮನಿಸಬೇಕು; ಮತ್ತೊಂದು 'ಮಾದರಿ' ದಕ್ಷಿಣ ಕೊರಿಯಾದಲ್ಲೂ 1997ರ ಹಣಕಾಸು ಬಿಕ್ಕಟ್ಟಿನ ನಂತರ ಉದ್ದಿಮೆ ಗುಂಪುಗಳು ಹೊಸ ಬ್ಯಾಂಕುಗಳನ್ನು ತೆರೆಯುವುದನ್ನು ನಿಷೇಧಿಸಲಾಗಿದೆ.

★

ಹೆಡ್ಲಿ ಹಸ್ತಾಂತರ ಬೇಕಿಲ್ಲ ಎಂದವರು ನಿಜವಾಗಿ ಯಾರು?

ಯುಪಿಎ-2 ಸರಕಾರಕ್ಕೆ ಈ ಹಿಂದೆ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿದ್ದ ಎಂ.ಕೆ.ನಾರಾಯಣನ್ ಪಾಕಿಸ್ತಾನಿ-ಅಮೆರಿಕನ್ ಭಯೋತ್ಪಾದಕ ಡೇವಿಡ್ ಹೆಡ್ಲಿಯ ಹಸ್ತಾಂತರವನ್ನು ಸದ್ಯಕ್ಕ ಕೇಳುತ್ತಿಲ್ಲ, ಆದರೆ ಹಸ್ತಾಂತರದ ಪ್ರಯತ್ನ ಮಾಡುತ್ತಿದ್ದೇವೆ ಎಂದು ತೋರಿಸಿಕೊಳ್ಳದಿರಲು ಸಾಧ್ಯವಿಲ್ಲ ಎಂದು ಹೇಳಿರುವದಾಗಿ ಭಾರತದಲ್ಲಿನ ಅಮೆರಿಕನ್ ರಾಯಭಾರಿ ತಿಮೋಥಿ ರೋಮರ್ ತನ್ನ ದೇಶದ ವಿದೇಶಾಂಗ ವ್ಯವಹಾರಗಳ ಇಲಾಖೆಗೆ ಡಿಸೆಂಬರ್ 17, 2009ರಂದು ಕಳಿಸಿದ ಕೇಬಲ್ ಸಂದೇಶದಲ್ಲಿ ತಿಳಿಸಿರುವುದಾಗಿ ವಿಕಿಲೀಕ್ಸ್ ಮಾಹಿತಿಯಲ್ಲಿ ಬೆಳಕಿಗೆ ಬಂದಿದೆ. ಆದರೆ ತಾನು ಹಾಗೆ ಹೇಳಲು ಸಾಧ್ಯವಿಲ್ಲ, ಭಾರತ ಆತನ ಹಸ್ತಾಂತರದ ಬಗ್ಗೆ ಗಂಭೀರ ಪ್ರಯತ್ನ ನಡೆಸಿದೆ ಎಂದು ಈಗ ಪಶ್ಚಿಮ ಬಂಗಾಲದ ರಾಜ್ಯಪಾಲರಾಗಿರುವ ನಾರಾಯಣನ್ ಹೇಳಿದ್ದಾರೆ. ಬಯಲಾಗಿರುವ ಇನ್ನೊಂದು ಕೇಬಲ್ ಪ್ರಕಾರ ರೋಮರ್ ಅವರೇ ಹೆಡ್ಲಿ ಹಸ್ತಾಂತರವನ್ನು ಕೇಳದಂತೆ ನಾರಾಯಣನ್ ಅವರಿಗೆ 'ಸಲಹೆ' ಮಾಡಿದ್ದರಂತೆ. ಹೆಡ್ಲಿ ಬಗ್ಗೆ ಅಮೆರಿಕಾ ನೀಡಿದ ಮಾಹಿತಿಯನ್ನು ಭಾರತ ಸರಕಾರ ಬಹಿರಂಗ ಪಡಿಸಬಾರದಿತ್ತು ಎಂದೂ ಅವರು ನಾರಾಯಣನ್‌ಗೆ ದೂರಿದ್ದರಂತೆ. ಇಲ್ಲಿ ಯಾರು ನಾಟಕವಾಡುತ್ತಿದ್ದಾರೆ, ಯಾರು ನಿಜ ಹೇಳುತ್ತಿದ್ದಾರೆ ಎಂಬುದನ್ನು ತಿಳಿಯುವುದು ಕಷ್ಟವೇ.

ಆದರೆ ಒಂದು ಸಂಗತಿಯಂತೂ ಸ್ಪಷ್ಟ- ಭಾರತದ ಸರಕಾರ ಅಮೆರಿಕನ್ ಆಳರಸರ ಒತ್ತಡಗಳಿಗೆ ತಲೆಬಾಗುವ ಪ್ರಕ್ರಿಯೆ ನಡೆದಿದೆ, ಇದು ಕಳೆದ ಐದಾರು ವರ್ಷಗಳಿಂದ ಸಾಗಿದೆ, ವಿಶೇಷವಾಗಿ, ವಿದೇಶಾಂಗ ನೀತಿಗಳಲ್ಲಿ ಯುಪಿಎ ಸರಕಾರ ಅಮೆರಿಕನ್ ಸರಕಾರದ ಒಟ್ಟಾರೆ ಒತ್ತನ್ನು ಒಪ್ಪಿಕೊಳ್ಳುತ್ತಿದೆ ಎಂಬುದು ಈ ಕೇಬಲ್‌ಗಳಲ್ಲಿ ಕಾಣ ಬರುವ ಸಂಗತಿ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಹೇಳಿದ್ದಾರೆ.

ಇದೇ ರಾಯಭಾರಿ ನಂತರ ಜನವರಿ 2010ರಲ್ಲಿ ಎಂ.ಕೆ.ನಾರಾಯಣನ್ ಭದ್ರತಾ ಸಲಹೆಗಾರರ ಸ್ಥಾನವನ್ನು ಬಿಟ್ಟು ಕೊಟ್ಟಾಗ ಕಳಿಸಿದ ಇನ್ನೊಂದು ಕೇಬಲ್ ನಲ್ಲಿ ಇದು ಕಾಶ್ಮೀರದ ಪ್ರಶ್ನೆಯಲ್ಲಂತೂ ಇದೊಂದು 'ಸಕಾರಾತ್ಮಕ' ಬೆಳವಣಿಗೆ ಎಂದಿದ್ದರಂತೆ. ಕಳೆದ ಐದಾರು ವರ್ಷಗಳಿಂದ ನಮ್ಮ ಸರಕಾರ ಮತ್ತು ರಾಜಕೀಯ ವ್ಯವಸ್ಥೆಯ ಮೇಲೆ ಅಮೆರಿಕನ್ ಸರಕಾರ ಸತತವಾಗಿ ಒತ್ತಡಗಳನ್ನು ಮತ್ತು ಪ್ರಭಾವವನ್ನು ಹೇರುತ್ತಿದೆ ಎಂಬುದನ್ನು ಈ ವಿಕಿಲೀಕ್ಸ್ ಕೇಬಲ್‌ಗಳು ತೋರಿಸುತ್ತಿವೆ.


ಈ ನಡುವೆ ಅಫಘಾನಿಸ್ತಾನದಲ್ಲಿ ಅಮೆರಿಕಾ ನೇತೃತ್ವದಲ್ಲಿ ವಿನಾಶಲೀಲೆಯಲ್ಲಿ ತೊಡಗಿರುವ ಪಾಶ್ಚಿಮಾತ್ಯ ಮಿಲಿಟರಿ ಕೂಟ ನಾಟೋ ಕೂಡ ಈಗ ಭಾರತ ತನ್ನ 'ಶೀತಲ ಸಮರ ಅವಧಿಯ ಅಲಿಪ್ತ ನೀತಿಯನ್ನು ಕೈಬಿಟ್ಟು' ತನ್ನ ಜತೆಗೆ ಏಕೆ ಸಹಕರಿಸಬಾರದು ಎಂದು ಕೇಳುವ ಮಟ್ಟಿಗೆ ಹೋಗಿದೆ. ಯುಪಿಎ ತನ್ನ ವಿದೇಶಾಂಗ ನಿಲುವುಗಳನ್ನು ಅಮೆರಿಕನ್ ವಿದೇಶಾಂಗ ಧೋರಣೆಗಳಿಗೆ ಹೊಂದಿಸಿಕೊಳ್ಳಲು ಸಿದ್ಧವಿದೆಯೆಂಬ ಸಂಕೇತಗಳನ್ನು ನೀಡುತ್ತಿರುವಾಗ ಇಂತಹ ದಾರ್ಷ್ಟ್ಯ ಸಹಜ ತಾನೇ?

★

ಎಂಪಿಗಳಿಗೆ ವೋಟಿಗಾಗಿ ನೋಟು: ವ್ಯಾಪಕ ತನಿಖೆ ಏಕಿಲ್ಲ?

ಅಮೆರಿಕಾದೊಡನೆ 'ಆಯಕಟ್ಟಿನ ಸಂಬಂಧ'ಗಳನ್ನು ಬೆಸೆಯುವ ಯುಪಿಎ ಸರಕಾರದ ಇಂತಹ ಪ್ರಯತ್ನಗಳಿಗೆ ಎಡಪಕ್ಷಗಳ ಕಡು ವಿರೋಧದ ಹಿನ್ನೆಲೆಯಲ್ಲಿ ಜುಲೈ 2008ರಲ್ಲಿ ಲೋಕಸಭೆಯಲ್ಲಿ ನಡೆದ ವಿಶ್ವಾಸ ಠರಾವಿನ ಸಂದರ್ಭದಲ್ಲಿ ನಡೆದ 'ವೋಟಿಗಾಗಿ ನೋಟು' ಹಗರಣದಲ್ಲಿ ಮಾಜಿ ಸಮಾಜವಾದಿ ಮುಖಂಡ ಅಮರ್ ಸಿಂಗ್ ಮತ್ತು ಇಬ್ಬರು ಮಾಜಿ ಎಂಪಿಗಳು ಹಾಗೂ ಇತರರನ್ನು ಬಂಧಿಸಲಾಗಿದೆ. ಇದು ನಡೆದಿರುವುದು ಸುಪ್ರಿಂ ಕೋರ್ಟ್ ದಿಲ್ಲಿ ಪೋಲೀಸರಿಗೆ ತನಿಖೆಯನ್ನು ತ್ವರಿತಗೊಳಿಸುವಂತೆ ನಿರ್ದೇಶನ ನೀಡಿದ ಮೇಲೆಯೇ ಎಂಬುದು ಗಮನಾರ್ಹ.

ಭಾರತ-ಅಮೆರಿಕಾ ಪರಮಾಣು ವ್ಯವಹಾರವನ್ನು ವಿರೋಧಿಸಿ ಎಡಪಕ್ಷಗಳು ಯುಪಿಎ-1 ಸರಕಾರಕ್ಕೆ ಬೆಂಬಲವನ್ನು ಹಿಂತೆಗೆದುಕೊಂಡ ನಂತರ ಆಳುವ ಕೂಟ ಮಂಡಿಸಿದ ವಿಶ್ವಾಸ ಠರಾವಿನ ಮೇಲೆ ಮತದಾನದಲ್ಲಿ ಹಲವಾರು ಪ್ರತಿಪಕ್ಷಗಳ ಸಂಸತ್ ಸದಸ್ಯರನ್ನು ಸರಕಾರದ ಪರ ಮತ ನೀಡುವಂತೆ ಆಮಿಷ ಒಡ್ಡಲಾಗಿತ್ತು ಎಂಬುದೀಗ ಸ್ಪಷ್ಟವಾಗಿದೆ. ಕನಿಷ್ಟ 19 ಪ್ರತಿಪಕ್ಷಗಳ ಎಂಪಿಗಳು ತಮ್ಮ ಪಕ್ಷಗಳ ಆದೇಶವನ್ನು ಉಲ್ಲಂಘಿಸಿದವು, ಅವರಲ್ಲಿ ಕೆಲವರು ನಂತರ ಅನರ್ಹಗೊಂಡರು. ಇವರಿಗೆಲ್ಲ ಲಂಚ ಕೊಡಲಾಗಿತ್ತು, ಅಥವ ಬೆದರಿಕೆ ಒಡ್ಡಲಾಗಿತ್ತು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಲೋಕಸಭೆಯಲ್ಲಿ ನೋಟುಗಳ ಕಂತೆಗಳನ್ನು ಪ್ರದರ್ಶಿಸಿದ್ದು ಈ ಹಗರಣದ ಒಂದು ಭಾಗವಷ್ಟೇ. ಇದರಲ್ಲಿ ಅಮರ್ ಸಿಂಗ್ ಮತ್ತು ಬೇರೆ ಒಬ್ಬಿಬ್ಬರು ಮಾತ್ರ ತೊಡಗಿದ್ದರು ಎಂದು ಯಾರೂ ನಂಬಲು ಸಾಧ್ಯವಿಲ್ಲ. ಇದರ ಸಮಗ್ರ ತನಿಖೆ ನಡೆಸಬೇಕು ಎಂದು ಎಡಪಕ್ಷಗಳು ಅಂದಿನಿಂದಲೂ ಆಗ್ರಹಿಸುತ್ತಲೇ ಇವೆ. ಆದರೆ ಯುಪಿಎ-2 ಸರಕಾರ ಕಾಲೆಳೆಯುತ್ತಲೇ ಬಂದಿದೆ. ಈಗ ಸುಪ್ರಿಂಕೋರ್ಟ್ ಮಧ್ಯಪ್ರವೇಶದಿಂದಷ್ಟೇ ಇಷ್ಟರ ಮಟ್ಟಿಗೆ ತನಿಖೆ ಮುಂದುವರೆದಿದೆ. ಈಗಲಾದರೂ ಸಮಗ್ರ ತನಿಖೆ ನಡೆಸಬೇಕೆಂಬ ಆಗ್ರಹಕ್ಕೆ ಯುಪಿಎ-2 ಕಿವುಡಾಗಿಯೇ ಇದೆ.



ವೇದರಾಜ ಎನ್.ಕೆ.

ಬುಡಕಟ್ಟು ಪ್ರದೇಶಗಳಲ್ಲೂ ಖಾಸಗಿ ಗಣಿ ಕಂಪನಿಗಳ ಲೂಟಿಗೆ ಅವಕಾಶ

ಯುಪಿಎ-2 ಸರಕಾರ ಗಣಿಗಾರಿಕೆ ಮತ್ತು ಖನಿಜ ಕಾನೂನಿಗೆ ತಿದ್ದುಪಡಿ ತಂದು ಖನಿಜ ಸಂಪತ್ತಿನಿಂದ ತುಂಬಿರುವ ಐದನೇ ಶೆಡ್ಯೂಲ್(ಬುಡಕಟ್ಟು) ಪ್ರದೇಶಗಳಿಗೆ ಗಣಿಕಂಪನಿಗಳ ಮತ್ತು ಕಾರ್ಪೊರೇಟ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಲು ಮುಂದಾಗಿದೆ. ಈ ಕಂಪನಿಗಳು ಬುಡಕಟ್ಟು ಅಭಿವೃದ್ಧಿಗೆ ರಾಯಧನಕ್ಕೆ ಸಮನಾದುದನ್ನು ಕೊಡುತ್ತವೆ ಎಂಬ ನೆಪವೊಡ್ಡಿ ಈ ತಿದ್ದುಪಡಿ ತರಲಾಗುತ್ತಿದೆ. ಇದು ಆದಿವಾಸಿ ಜನತೆಗೆ ಮಾಡಿರುವ ದೊಡ್ಡ ಅವಮಾನ ಎಂದು ಇದನ್ನು 'ಆದಿವಾಸಿ ಅಧಿಕಾರದ ರಾಷ್ಟ್ರೀಯ ವೇದಿಕೆ'(ಎಎಆರ್‌ಎಂ) ಬಲವಾಗಿ ಖಂಡಿಸಿದೆ.

ರಾಜ್ಯಸಭಾ ಸದಸ್ಯೆ-ಬೃಂದಾ ಕಾರಟ್ ನೇತೃತ್ವದಲ್ಲಿ ಯುಪಿಎ ಬುಡಕಟ್ಟು ವ್ಯವಹಾರಗಳ ಮಂತ್ರಿಗಳನ್ನು ಭೇಟಿಯಾದ ಎಎಆರ್‌ಎಂ ನಿಯೋಗ ಈ ತಿದ್ದುಪಡಿ ಉಂಟು ಮಾಡುವ ಹಾನಿಗಳನ್ನು ಅವರ ಗಮನಕ್ಕೆ ತಂದಿದೆ. ಆಶ್ಚರ್ಯವೆಂದರೆ, ಖಾಸಗಿ ಕಂಪನಿಗಳಿಗೆ ಐದನೇ ಶೆಡ್ಯೂಲ್ ಪ್ರದೇಶಗಳಿಗೆ ಪ್ರವೇಶ ಕೊಡುವ ಬಗ್ಗೆ ತನ್ನದೂ ವಿರೋಧವಿದೆ ಎಂದರು ಮಂತ್ರಿಗಳು!

ಶ್ರೀರಾಮುಲು ಹೆಗಲಮೇಲೆ ಬಂದೂಕು ಇಟ್ಟು.....

ಪುಟ 3 ರಿಂದ

ಹಾಗೂ ಇತರೆ ಹಿಂದುಳಿದ ವರ್ಗಗಳನ್ನು, ಜೊತೆಗೆ ಉತ್ತರ ಕರ್ನಾಟಕ ಲಿಂಗಾಯತರನ್ನು ಸೆಳೆಯುವ ಪ್ರಯತ್ನಕ್ಕೆ ಚಾಲನೆ ಬಂದೇ ಬಿಟ್ಟಿತ್ತು. ದೇಶವಿದೇಶಗಳಲ್ಲಿ, ಕರ್ನಾಟಕದ ಮಾನ-ಸ್ವಾಭಿಮಾನವನ್ನು ಸರ್ವನಾಶ ಮಾಡಿದ ಇವರೇ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆಯೆಂದು ಹೇಳುತ್ತಿರುವುದೇ ಅವಮಾನ. ರೆಡ್ಡಿಗಳ ಇಂತಹ ಕುತಂತ್ರಕ್ಕೆ ಗದುಗಿನ ತೋಂಟದಾರ್ಯ ಸ್ವಾಮೀಜಿಯಂತಹವರೂ ಪ್ರಜ್ಞೆ ತಪ್ಪಿ ಬೆಂಬಲಿಸಿದ್ದು ರೆಡ್ಡಿಗಳ ಜಾತಿ ರಾಜ ಕಾರಣದ ಜಾಲ, ಹಣದ ಪ್ರಭಾವ, ಎಷ್ಟೆಂದು ಅರ್ಥವಾದೀತು.

ಮಂತ್ರಿಗಿರಿ ಯಾವುದಕ್ಕೇ?

ಶ್ರೀರಾಮುಲು ಮಂತ್ರಿಯಾದರೆಷ್ಟು, ಬಿಟ್ಟರೆಷ್ಟು?. ಕಂದಾಯ, ಪ್ರವಾಸೋದ್ಯಮ, ಆರೋಗ್ಯದಂತಹ ಬಹಳ ಪ್ರಮುಖ ಖಾತೆಗಳಲ್ಲಿದ್ದರೂ ಏನೆಂದೂ ಗುರುತರ ಕೆಲಸ ಕೊಡುಗೆ ಮಾಡಿದವರಲ್ಲ. ಬಹುತೇಕ ಎಲ್ಲಾ ಬಿಜೆಪಿ ಸಚಿವರಂತೆ ಶ್ರೀರಾಮುಲು ವಿಧಾನಸೌಧದ ಕಚೇರಿ ಯಲ್ಲಿ ಕುಳಿತು ಕೊಂಡದ್ದೋ ಅಪರೂಪ. ಅದೇನಾದ್ದರೂ ರೆಡ್ಡಿಗಳು ಮತ್ತು ಶ್ರೀರಾಮುಲು ಮಂತ್ರಿಗಳಾದದ್ದು, ಗಣಗಾರಿಕೆಯನ್ನು ಒಳಗೊಂಡು ಅವರ ಎಲ್ಲಾ ಅಕ್ರಮಗಳನ್ನು ನಡೆಸಲು ಹಾಗೂ ರಕ್ಷಿಸಿಕೊಳ್ಳಲೆಂದೇ ಅಷ್ಟೇ. ಇಂಥವರನ್ನು ಬಿಜೆಪಿ ಮನವೊಲಿಸಲು ಸಮರ್ಥಿಸಿ ಕೊಳ್ಳಲು ಹೇಸಿಗೆ ತರುವ ಸಂಗತಿ.

ಕಾದೇ ಕುಳಿತಿರುವ ಸಭಾಧ್ಯಕ್ಷರು

ಈಗಲೂ ಶ್ರೀರಾಮುಲು ರಾಜೀನಾಮೆ ಸಲ್ಲಿಸಿ ವಾರವಾಗುತ್ತಿದೆ.ಆದರೆ ಸಭಾಧ್ಯಕ್ಷ ಬೋಪಯ್ಯನವರು ಅದನ್ನು ಅಂಗೀಕರಿಸದೇ ಕುಳಿತಿದ್ದಾರೆ. ಹಿಂದೆ ಬಿಜೆಪಿ ಬೇರೆ ಪಕ್ಷಗಳ ಶಾಸಕರನ್ನು ಖರೀದಿಸಿ ಆಪರೇಷನ್ ಕಮಲ ಮಾಡಿದಾಗ ತಡಮಾಡದೇ ರಾಜೀನಾಮೆ ಅಂಗೀಕರಿಸಿದ ಬೋಪಯ್ಯನವರೇ ರಾಜೀನಾಮೆಗೆ ಒತ್ತಡ-ಆಮಿಷಗಳಿವೆಯೇ ಎಂದು ವಿವರಣೆ ಕೇಳದೇ ಹೋದವರು ಈಗ ಮಾತ್ರ, ಶ್ರೀರಾಮುಲುವಿನಿಂದ ಅಂತಹದ್ದನ್ನು ಬಯಸುತ್ತಲೇ ಇದ್ದಾರೆ! ಅಂದರೆ ಬಿಜೆಪಿ-ಆರ್.ಎಸ್.ಎಸ್.ಗಳ ಹೈಕಮಾಂಡ್ ನಿರ್ದೇಶನಗಳಿಗೆ ಕಾದು ಕುಳಿತಿರುವುದು ಸಭಾಧ್ಯಕ್ಷ ಸ್ಥಾನಕ್ಕೆ ಪ್ರಜಾಪ್ರಭುತ್ವಕ್ಕೆ ಮಾಡುವ ಅಪಮಾನವಲ್ಲವೇ?

ಬೆಚ್ಚಿಬಿದ್ದಿರುವ ಚೆಡ್ಡಿ ಪಡೆ

ರೆಡ್ಡಿ ಜೈಲು ಸೇರುತ್ತಿದ್ದಂತೆ ಲೂಟಿಯ ಫಲಾನುಭವಿಗಳಾದ ಬಿಜೆಪಿ ಹೈಕಮಾಂಡ್, ಆರ್.ಎಸ್.ಎಸ್.ಗಳು ಬೈಠಕ್‌ಗಳನ್ನು ನಡೆಸಲಾರಂಭಿಸಿದವು. ಮುಖ್ಯಮಂತ್ರಿ ಸದಾನಂದಗೌಡ, ಪಕ್ಷದ ಅಧ್ಯಕ್ಷ ಕೆ.ಎಸ್.ಈಶ್ವರಪ್ಪನವರು ನಾಗಪುರದ ಬೈಠಕ್‌ನಲ್ಲಿ ಭಾಗವಹಿಸಿ ಅವರೆಲ್ಲಾ ಸಿಬಿಐ ತನಿಖೆ, ಧಾಳಿಗಳಿಂದ ತಪ್ಪಿಸಿಕೊಳ್ಳುವುದೇ ಒಂದೂ, ರೆಡ್ಡಿಗಳನ್ನು ರಕ್ಷಿಸುವ ಇಲ್ಲವೇ ದೂರ ಗೋಳಿಸುವ ಹಂಚಿಕೆಗಳೂ ಇಲ್ಲದಿಲ್ಲ. ಈ ಬೆಳವಣಿಗೆಗಳು ಕೇಶವ ಶಿಲ್ಪವನ್ನೂ ಬಚ್ಚಿ ಬೀಳಿಸಿ ಆಂತರಿಕದ ಮಡುವಿನಲ್ಲಿ ಕೆಡವಿದೆ.

ಶ್ರೀರಾಮುಲು ಮೂಲಕ ರಾಜ್ಯದ ರಾಜಕೀಯದಲ್ಲಿ ತಾವೇ ಕೇಂದ್ರದ ವಿಷಯವಾಗಿ ಅದರ ರಕ್ಷಣೆ ಪಡೆಯಬೇಕೆಂಬ ರೆಡ್ಡಿಗಳ ಹಂಚಿಕೆ 'ಠುಸ್' ಆದದ್ದೇ ಕೇಂದ್ರ ತನಿಖಾ ದಳ(ಸಿಬಿಐ) ರೆಡ್ಡಿಗಳ ಮೇಲೆ ನಡೆಸಿದ ದಾಳಿಯಿಂದ ಬಂಧನದಿಂದ, ಇದನ್ನು ಗಂಭೀರವಾಗಿ ಗಮನಿಸಿದ ಸಿಬಿಐ ತಡಮಾಡಿದರೆ ಬಲ ಕ್ರೋಢೀಕರಣ ಮಾಡಿಕೊಳ್ಳುವ ಅಪಾಯ ಮನಗಂಡೇ ಕ್ಷಿಪ್ರ ಕಾರ್ಯಾಚರಣೆ ಇಳಿಸಿರೆಂಬುದು ದಟ್ಟ ನಂಬಿಕೆ.

ಎಂತಹ ವಿಚಿತ್ರ ನೋಡಿ! ಪಾತಕಗಳನ್ನು ನಡೆಸಿ ಕಾನೂನು, ಸಂವಿಧಾನವನ್ನೇ ಬುಡಮೇಲು ಮಾಡಿದ ಗಣಿಗಳ್ಳರು ಜೈಲಿಗೆ ಹೋಗಿರುವಾಗ ಅವರು ಸತ್ಯವಂತರು, ನ್ಯಾಯ ನಿಷ್ಠರು ಎಂದು ಬಿಜೆಪಿಯು ಬಳ್ಳಾರಿ ಬಂದ್, ಪ್ರತಿಭಟನೆಗಳನ್ನು ನಡೆಸುತ್ತಿದೆ. ಇಲ್ಲಿ ಕಳ್ಳರು ಹೀರೋಗಳು, ಆದರೆ ಕಾನೂನುಕ್ರಮ ವಹಿಸಿದವ ಕಳ್ಳರು, ದೌರ್ಜನ್ಯಕಾರರು! ಹೇಗಿದೆ ಬಿಜೆಪಿಯ ಗೋಬೆಲ್ಸ್ ಕುತಂತ್ರ. ತಾಲ್ಲೂಕು, ಜಿಲ್ಲಾ ಬಂದ್‌ಗಳನ್ನು ನಡೆಸಿದ ರೆಡ್ಡಿ ಗಣಿ ಮಾಫಿಯಾ ಆ ಪ್ರಸಂಗವನ್ನು ತನಗೆ ಆಗದವರು ಕಾನೂನು ಕ್ರಮಕ್ಕೆ ಮುಂದಾದ ಬಳ್ಳಾರಿ ಜಿಲ್ಲಾಧಿಕಾರಿಗಳ ಕಚೇರಿ ಮೇಲೆ ದಾಳಿ ನಡೆಸಿ ಸೇಡು ತೀರಿಸಿಕೊಳ್ಳುವ ಬೆದರಿಕೆಗೆ ಇಳಿದಿದ್ದು ಪ್ರಜಾಪ್ರಭುತ್ವಕ್ಕೆ ಒಡ್ಡಿದ ಬೆದರಿಕೆಯಾಗಿದೆ.

ಈಗಂತೂ ಜೈಲಿನಲ್ಲಿರುವ ಜನಾರ್ಧನರೆಡ್ಡಿ, ಶ್ರೀನಿವಾಸರೆಡ್ಡಿಗಳ ಜಾಮೀನಿನ ಕೋರಿಕೆಯನ್ನು ನ್ಯಾಯಾಲಯ ತಿರಸ್ಕರಿಸಿದೆ. ಹೀಗಾಗಿ ಗಣಿಗಳ್ಳರ ಜೈಲಿಗೆ ಸಂದರ್ಶನ ಯಾತ್ರೆಗಳು ಹೆಚ್ಚಲಿವೆ. ಆದ್ದರಿಂದಲೇ ಟಿ.ವಿ., ಪತ್ರಿಕೆಗಳಿಗೆ ಬಿಡುವಿಲ್ಲದ ಕೆಲಸ!

ಉಡುಪಿ ಜಿಲ್ಲೆಯಲ್ಲಿ ರೈತ ಕೃಷಿ ಕೂಲಿಕಾರರ ಹೋರಾಟ

ಪುಟ 6 ರಿಂದ

ಗುರುತಿಸಿ ಹಂಚಲಾಗುತ್ತದೆ ಎಂದು ತಿಳಿಸಿರುತ್ತಾರೆ.

ಹೋರಾಟದ ಒತ್ತಡ-ಬಾಯಿ ತೆರೆದ ಆಡಳಿ

ಈ ಮೇಲಿನ ಬೆಳವಣಿಗೆಗಳ ನಂತ ಜಿಲ್ಲೆಯಲ್ಲಿ ನಿವೇಶನ ರಹಿತರಿಗೆ ನಿವೇಶ ಒದಗಿಸುವ ಪೂರ್ವಭಾವಿ ಪ್ರಕ್ರಿ ಆರಂಭಗೊಂಡಿದೆ ಎಂದು ಸಚಿವ ಡ ವಿ.ಎಸ್.ಆಚಾರ್ಯ ಪತ್ರಿಕಾ ಹೇ ನೀಡಿರುತ್ತಾರೆ. ಈಗ ಜಿಲ್ಲೆಯಲ್ಲಿ 186 ಭೂಮಿ ಇದೆ ಎಂದು ಗುರುತಿಸಲಾಗಿದೆ. ಇದರ 150 ಎಕ್ರೆಯನ್ನು 44,500 ಜನ ಹಂಚಬಹುದೆಂದು ಅಂದಾಜಿಸಲಾಗಿದೆ ಎಂ ಕೂಡಾ ಹೇಳಿರುತ್ತಾರೆ. ಆದರೆ ಈ ಮೊದ ಈ ರೀತಿ ಹೇಳಲಿಲ್ಲ.

ಆಗಸ್ಟ್ 25 ರಿಂದ 27ರವ ಜಿಲ್ಲಾಧಿಕಾರಿಯವರ ಕಛೇರಿಯ ಮುಂದೆ ರ ಸಂಘ ಮತ್ತು ಕೃಷಿ ಕೂಲಿಕಾರರ ಸಂಘ ನೇತೃತ್ವದಲ್ಲಿ ಅರ್ಜಿಗಳನ್ನು ಕೂಡ ಇತ್ಯರ್ಥಪಡಿಸಲು, ರಾಷ್ಟ್ರೀಯ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯನ್ನ ಸಮರ್ಪಕವಾಗಿ ಜಾರಿಗೆ ಆಗ್ರಹಿಸಿ ಸಾಮೂ ಧರಣಿ ಮತ್ತು ಪ್ರತಿಭಟನೆ ನಡೆಯಿತು.

ಮೊದಲನೆಯ ದಿವಸ 600 ಮ ಎರಡನೇಯ ದಿವಸ 1200 ಮಂದಿ ಹಾ ಮೂರನೇಯ ದಿವಸ 450 ಮಂದಿ ರ ಕೃಷಿ ಕೂಲಿಕಾರರು ಭಾಗವಹಿಸಿರುತ್ತಾರೆ. ದಿವಸ ಹೋರಾಟ ಯಶಸ್ವಿಯಾಗಿ ಜಿಲ್ಲಾಧಿಕಾರಿಯವರನ್ನು ಭೇಟಿಯಾ ಮಾತನಾಡಿದಾಗ, ವಸತಿ ರಹಿತ ಮನೆಗಳಿಗಾಗಿ ಸಲ್ಲಿಸಿರುವ ಅರ್ಜಿಗಳ ಕೂಡಲೇ ಪರಿಶೀಲಿಸಿ ಸ್ವಂತ ಮನೆ ಇಲ್ಲ ಕುಟುಂಬಗಳಿಗೆ ಮನೆಗಳನ್ನು ಒದಗಿಸ ಕುರಿತು ಗ್ರಾಮ ಪಂಚಾಯತ್‌ಗಳಿಂದ ಕ್ರ ಕೈಗೊಳ್ಳುವಂತೆ ಪ್ರಯತ್ನಿಸುತ್ತೇನೆ ಎಂದು ಭರ ನೀಡಿದರು. ಕೆಲವು ಪ್ರದೇಶಕ್ಕೆ ಹಾಗೂ ಗ್ರಾ ಪಂಚಾಯತ್‌ಗಳಿಗೆ ಭೇಟಿ ಕೊಡುವುದ ತಿಳಿಸಿರುತ್ತಾರೆ.

ಹೀಗೆ ಅರ್ಜಿ ಸಲ್ಲಿಸುವವರು ಸಂಘ ಮೂಲಕ ಸಲ್ಲಿಸುತ್ತಾ ಇದ್ದಾರೆ. ಮುಂ ವಿಳಂಬವಾದಲ್ಲಿ ಅರ್ಜಿ ಸಲ್ಲಿಸಿದವರ ಮೂ ಗ್ರಾಮ ಪಂಚಾಯತ್ ಎದುರು ತೀ ಹೋರಾಟದ ಕಾರ್ಯಕ್ರಮಗಳ ಹಮ್ಮಿಕೊಳ್ಳಲಾಗುವುದು ಎಂದು ಸಂಘ ಎಚ್ಚರಿಕೆ ನೀಡಿದೆ.

-ಕೆ.ಶಂಕರ್, ಕುಂದಾ

ದುಂಡು ಮೇಜಿನ ಸಭೆ

ಪುಟ 5 ರಿಂದ

ಮುಂತಾದವರು ಮಾತನಾಡಿದರು. ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ. ಯು.ಆರ್. ಅನಂತಮೂರ್ತಿಯವರ ಗೈರು ಹಾಜರಿಯಲ್ಲಿ ಅವರ ಲಿಖಿತ ಸಂದೇಶವನ್ನು ಓದಲಾಯಿತು.

ಅದೇ ರೀತಿ ಡಾ.ಮರುಳಸಿದ್ದಪ್ಪ, ಜಿ.ಕೆ ಗೋವಿಂದರಾವ್ ಮತ್ತು ಬಿ.ಟಿ.ಲಲಿತಾ ನಾಯಕ್ ಅವರು ಮಾತನಾಡಿ, ಸರ್ಕಾರ ಲೋಕಾಯುಕ್ತ ವರದಿಯನ್ನು ಇನ್ನೊಂದು ವರದಿಯ ಆಧಾರದ ಮೇಲಲ್ಲದೆ ನೇರವಾಗಿ ಲೋಕಾಯುಕ್ತ ವರದಿಯನ್ನೆ ಒಪ್ಪುವಂತೆ ಪಟ್ಟು ಹಿಡಿಯಬೇಕು, ಅದಕ್ಕಾಗಿ ಗ್ರಾಮೀಣ ಯುವಶಕ್ತಿಯನ್ನು ಜಾಗ್ರತಗೊಳಿಸಬೇಕು, ಗಣಿ ಅಕ್ರಮದಿಂದ ಸರ್ಕಾರಕ್ಕೆಆದ ನಷ್ಟ 16,085 ಕೋಟಿ ರೂಪಾಯಿ,ಅದಲ್ಲದೆ ಇಲ್ಲಿ ನಾವು ಕೇವಲ ಗಣಿ ಹಗರಣದ ಬಗ್ಗೆ ಮಾತ್ರ ಮಾತನಾಡುತ್ತಿದ್ದೇವೆ, ಇನ್ನುಳಿದ ಪಡಿತರ ವಿತರಣೆ ವ್ಯವಸ್ಥೆಯಲ್ಲಿ ಸೋರಿಕೆ,ಭೂ ಕಬಳಿಕೆ, ಇತ್ಯಾದಿಗಳನ್ನು ಜನರ ಗಮನಕ್ಕೆ ತರಬೇಕಿದೆ ಎಂದರು.

ಸಿ.ಪಿ.ಐ(ಎಂ).ನ ರಾಜ್ಯ ಸಹ ಕಾರ್ಯದರ್ಶಿ ಕಾಂ.ಲೋಕೇಶ ಮಾತನಾಡಿ, ಯಡಿಯೂರಪ್ಪ ಮತ್ತು ರೆಡ್ಡಿ ಸಹೋದರರು ತಮ್ಮ ಮೇಲಿನ ಆರೋಪಗಳನ್ನು ಒಬ್ಬರಿಗಾಗಿ ಇನ್ನೊಬ್ಬರು ಸಮರ್ಥಿಸಿಕೊಳ್ಳುತ್ತಿದ್ದಾರೆ, ಸಾಲದ್ದಕ್ಕೆ ಗಡ್ಕರಿ, ಸದಾನಂದರ ಸಾಥ್ ಬೇರೆ, ಇದನ್ನು ನೋಡಿದರೆ ಲೋಕಾಯುಕ್ತ ವರದಿ ಜಾರಿಯಾಗುವ ಯಾವ ಸೂಚನೆ ಕಾಣುತ್ತಿಲ್ಲ. ಅದನ್ನು ಜಾರಿಗೊಳಿಸಲು ರಾಜ್ಯದ ಎಲ್ಲ ಮೂಲೆಗಳಿಂದ, ವಿವಿಧ ರಂಗದಿಂದ ಒತ್ತಡ, ಒತ್ತಾಯ ವ್ಯಕ್ತ ಆಗಬೇಕು. ಹಗರಣಗಳಿಂದ ರಾಜ್ಯ ಬೊಕ್ಕಸಕ್ಕೆ ಆಗಿರುವ ನಷ್ಟದ ಬಗ್ಗೆ ಕೇಂದ್ರದ ಉನ್ನತ ಮಟ್ಟದ ತನಿಖಾ ತಂಡ ನೇಮಕವಾಗಬೇಕು, ಜಾರಿ ನಿರ್ದೇಶನಾಲಯದಿಂದ ತನಿಖೆ ಆಗಬೇಕು, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನ ಪಾಲನೆ ಆಗಬೇಕು ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ.ವಿ.ಜೆ.ಕೆ ನಾಯರ್ ಮಾತನಾಡಿ, ಕಬ್ಬಿಣದ ಅದಿರು ನಮ್ಮ ದೇಶದ ನೈಸರ್ಗಿಕ ಸಂಪತ್ತು, ಅದನ್ನು ಅಕ್ರಮವಾಗಿ ರಫ್ತು ಮಾಡಿ ನಮ್ಮ ಸಂಪತ್ತನ್ನು ಲೂಟಿ ಮಾಡಿದ್ದಾರೆ. ಸುಮಾರು ಹದಿನೇಳು ಕೋಟಿ ಅರವತ್ತನಾಲ್ಕು ಲಕ್ಷ ಮೆಟ್ರಿಕ್ ಟನ್ ಅದಿರನ್ನು ಕಾನೂನು ಬಾಹಿರವಾಗಿ ರಫ್ತು ಮಾಡಲಾಗಿದೆ, ಇದನ್ನು ಮರಳಿ ತರಲು ಸಾದ್ಯವಿಲ್ಲ,ಇದರಿಂದ ಭಾರತದ ಒಂದು ಸಾಮಾನ್ಯ ಉಕ್ಕಿನ ಕಾರ್ಖಾನೆ ಸುಮಾರು 3-4 ವರ್ಷಗಳಕಾಲ ಉಕ್ಕನ್ನು ತಯಾರಿಸ ಬಹುದಿತ್ತು ಎಂದರು.

ಸಾಮಾನ್ಯವಾಗಿ ದೊಡ್ಡದೊಂದು ಹಗರಣದಿಂದ ಜನರ ಗಮನ ತಪ್ಪಿಸಲು ಇನ್ನಾವುದೂ ಮಹತ್ವವಲ್ಲದ ಘಟನೆಯನ್ನು ದೊಡ್ಡದಾಗಿಸುವುದು ಒಂದು ರಾಜಕೀಯ ಚದುರಂಗದಾಟ, ಅಣ್ಣಾ ಹಜಾರೆ ಪ್ರಚಾರಕ್ಕೆ ಬರುವ ಮೊದಲು ರತನ್ ಟಾಟಾ, ನೀರಾ ರಾಡಿಯಾ, ಜೈಲಿಗೆ ಹೊಗುವ ಹಂತದಲ್ಲಿದ್ದವರು, ಅಷ್ಟರಲ್ಲಿ ಎಲ್ಲರ ಗಮನ ಹಜಾರೆಕಡೆ ಸೆಳೆಯಲಾಯಿತು, ಇಂದು 'ತರಂಗಾಂತರ ಎರಡು' ಹಗರಣ ಜನರ ನೆನಪಿನಿಂದ ಮಾಸುತ್ತಿದೆ, ಅದೇರೀತಿ ಲೋಕಾಯುಕ್ತ ವರದಿಯೂ ಕುಡಾ ಆಗಬಾರದು, ಅದರ ಪರಿಣಾಮಕಾರಿ ಜಾರಿಗೆ ಒತ್ತಾಯಿಸಬೇಕು ಮತ್ತು ಆ ಪ್ರಕ್ರಿಯೆ ಈಗಿನಿಂದಲೇ ಆರಂಭ ಆಗಬೇಕು ಎಂದರು.

ಉ.ಕ. ಜಿಲ್ಲಾಧಿಕಾರಿ ಕಛೇರಿ ಎದುರು 3 ದಿನ ಧರಣಿ

ಅರಣ್ಯ ಅತಿಕ್ರಮಣ-ಪಟ್ಟಾ ನೀಡಲು ಆಗ್ರಹ



ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 43 ಸಾವಿರ ಅರಣ್ಯ ವಾಸಿಗಳು ತಾವು ಅರಣ್ಯ ಅತಿಕ್ರಮಣ ಮಾಡಿಕೊಂಡು ಜೀವಿಸುತ್ತಿರುವ, ಸಾಗುವಳಿ ಮಾಡುತ್ತಿರುವ ಅರಣ್ಯ ಅತಿಕ್ರಮಣ ಭೂಮಿಯನ್ನು 2006ರ ಅರಣ್ಯ ಕಾಯ್ದೆಯಂತೆ ಪಟ್ಟಾ ನೀಡಿ ಸಕ್ರಮಗೊಳಿಸಬೇಕೆಂದು ಅರ್ಜಿ ಹಾಕಿಕೊಂಡು ಕಾಯುತ್ತಿದ್ದಾರೆ. ಈ ಬೇಡಿಕೆಯ ಮೇಲೆ ಅಗಸ್ಟ 25 ರಿಂದ 27ರ ವರೆಗೆ 3 ದಿನಗಳ ಕಾಲ ಕಾರವಾರದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ನಡೆಸಲಾಯಿತು. ಸಾವಿರಾರು ಜನ ಬಡ ರೈತರು, ಕೂಲಿಕಾರರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಜಿಲ್ಲಾ ಅರಣ್ಯ ಅತಿಕ್ರಮಣದಾರರ ಹೋರಾಟ ಸಮಿತಿ ಮತ್ತು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಜಂಟಿಯಾಗಿ ಈ ಹೋರಾಟ ಸಂಘಟಿಸಿದ್ದವು.

ಧರಣಿ ಸತ್ಯಾಗ್ರಹದ ಮುಖ್ಯ ಬೇಡಿಕೆಗಳೆಂದರೆ ಅರಣ್ಯ ಭೂಮಿಯಲ್ಲಿ ಅನೇಕ ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ, ಕೃಷಿ ಮಾಡುತ್ತಿರುವ ಬಡ ಕುಟುಂಬಗಳ ಅರಣ್ಯ ಹಕ್ಕನ್ನು ಕೂಡಲೇ ಮಾನ್ಯ ಮಾಡಬೇಕು. ಅರಣ್ಯ ಕಾಯ್ದೆ 2006ರಲ್ಲಿ ಪ್ರಸ್ತಾಪವಾಗಿರುವಂತೆ ಮೂರು ತಲೆಮಾರು, ಅಂದರೆ 75 ವರ್ಷದ ಮಾನದಂಡ ಪರಿಗಣಿಸಬಾರದು. ರಾಜ್ಯ ಸರ್ಕಾರದ 25 ವರ್ಷ ಮಾನದಂಡವಾಗಬೇಕೆನ್ನುವ ಪ್ರಸ್ತಾಪವನ್ನು ತಿರಸ್ಕರಿಸಬೇಕು. 2005 ಡಿಸೆಂಬರ 13 ಎಸ್.ಟಿ.ಗಳಿಗೆ ಮಾನದಂಡವಾಗಿರುವುದನ್ನೆ ಎಲ್ಲಾ ಅರಣ್ಯವಾಸಿಗಳಿಗೂ ಪರಿಗಣಿಸಬೇಕು. ಅಲ್ಲದೇ ಮತ್ತಿತರೇ ದಾಖಲೆ ಪರಿಗಣಿಸಬೇಕು. ಡಾ. ಬಾಲಸುಬ್ರಮಣ್ಯಂ ಸಮಿತಿ ವರದಿಯಲ್ಲಿ ಸೂಚಿಸಿರುವಂತೆ ಸರ್ಕಾರಿ ಭೂಮಿಯಲ್ಲಿ ಬಗರ್‌ಹುಕಂ ಸಾಗುವಳಿ ಮಾಡುತ್ತಿರುವ ಬಡವರನ್ನು, ಅರಣ್ಯ ಅತಿಕ್ರಮಣದಾರರನ್ನು ಒಕ್ಕಲೆಬ್ಬಿಸಬಾರದು. ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು. ನಗರ ಪ್ರದೇಶದಲ್ಲಿ ಅರಣ್ಯ ಅತಿಕ್ರಮಣ ಮಾಡಿಕೊಂಡವರಿಗೂ ಅರಣ್ಯ ಭೂಮಿ ಸಕ್ರಮಗೊಳಿಸಿ ಪಟ್ಟಾ ನೀಡಬೇಕು. ಆದಿವಾಸಿಗಳ ಅರಣ್ಯ ಹಕ್ಕನ್ನು ಸಂಪೂರ್ಣವಾಗಿ ಮಾನ್ಯ ಮಾಡಬೇಕು. ವಸತಿರಹಿತರು ಮನೆಗಳಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಕೂಡಲೇ ಪರಿಶೀಲಿಸಿ ಸ್ವಂತ ಮನೆ ಇಲ್ಲದ ಕುಟುಂಬಗಳಿಗೆ ಮನೆಗಳನ್ನು ಒದಗಿಸಬೇಕು. ಸರ್ಕಾರಿ ಭೂಮಿಯಲ್ಲಿ ಹಾಗೂ ಅರಣ್ಯ ಭೂಮಿಯಲ್ಲಿ ಅನೇಕ ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸ ಇರುವ ಬಡವರ ಅನಧಿಕೃತ ಮನೆಗಳನ್ನು ಸಕ್ರಮಗೊಳಿಸಿ ಅವರಿಗೆ ಹಕ್ಕು ಪತ್ರಗಳನ್ನು ವಿತರಿಸಬೇಕು. ಬಗರ್ ಹುಕುಂ ಸಾಗುವಳಿ ಸಕ್ರಮ ಮಾಡುವಾಗ ಬೆಂಗಳೂರು ಮಹಾನಗರದಿಂದ 18 ಕಿ.ಮೀ., ಇತರೆ ನಗರಪಾಲಿಕೆಗಳಿಂದ 10 ಕಿ.ಮೀ., ನಗರಸಭೆಗಳ ವ್ಯಾಪ್ತಿಯಿಂದ 5 ಕಿ.ಮೀ. ಹಾಗೂ ಪುರಸಭೆ, ಪಟ್ಟಣ ಪಂಚಾಯ್ತಿ ವ್ಯಾಪ್ತಿಯಿಂದ 3 ಕಿ.ಮೀ. ಒಳಗಿರುವ ಸಾಗುವಳಿದಾರರನ್ನು ಪರಿಗಣಿಸುವುದಿಲ್ಲ ಎಂಬ ನಿರ್ಬಂಧವನ್ನು ರದ್ದುಗೊಳಿಸಬೇಕು. ರಾಜ್ಯ ಸರ್ಕಾರ ಯಾವುದೇ ಸಾರ್ವಜನಿಕ - ಖಾಸಗಿ ಉದ್ದೇಶಕ್ಕಾಗಿ ಕೃಷಿ ಭೂಮಿಯನ್ನು ರೈತರ ಒಪ್ಪಿಗೆ ಇಲ್ಲದೆ ಸ್ವಾಧೀನಪಡಿಸಿಕೊಳ್ಳಬಾರದು. ರೈತರ ಬೆಳೆಹಾನಿಗೆ ಯೋಗ್ಯ ಪರಿಹಾರ, ಉದ್ಯೋಗ ಖಾತ್ರಿ ಸಮರ್ಪಕ ಜಾರಿ, ರೇಷನ್ ಕಾರ್ಡ ಎಲ್ಲರಿಗೂ ಸಿಗಬೇಕು. ಸ್ಥಗಿತಗೊಳಿಸಲಾದ ವೃದ್ಧಾಪ್ಯ ಯೋಜನೆ, ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ಭಾಗ್ಯಲಕ್ಷ್ಮಿ ಯೋಜನೆ ಮೊದಲಾದವುಗಳನ್ನು ಕೂಡಲೇ ಪುನರಾರಂಭಿಸಬೇಕು. ಕರೆಂಟ್ ಬಿಲ್ ನೀಡಿಲ್ಲ ಎಂದು ಗ್ಯಾಸ್ ಸಂಪರ್ಕ ಕಡಿತಗೊಳಿಸಬಾರದು ಎನ್ನುವುದಾಗಿದೆ.



ಉತ್ತರ ಕನ್ನಡ ಜಿಲ್ಲಾಧಿಕಾರಿಗಳು ಮತ್ತು ಸಚಿವ ಆನಂದ ಅಸ್ನೋಟಿಕರ ಧರಣಿ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿ ಬೇಡಿಕೆಗಳ ಬಗ್ಗೆ ಚರ್ಚಿಸಿದರು.

ಸುರಿಯುವ ಮಳೆಯಲ್ಲಿ ಅಗಸ್ಟ 25 ರಂದು ಕಾರವಾರ ನಗರದಲ್ಲಿ ಮೆರವಣಿಗೆ ನಡೆಸಿ ಧರಣಿ ಸತ್ಯಾಗ್ರಹ ಆರಂಭಿಸಲಾಯಿತು. ಧರಣಿಯನ್ನು ಉದ್ಘಾಟಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕ ಮಾತನಾಡಿ, ಉ.ಕ. ಜಿಲ್ಲೆಯಲ್ಲಿ 50-60 ವರ್ಷಗಳಿಂದ ಅರಣ್ಯ ಅತಿಕ್ರಮಣ ಮಾಡಿಕೊಂಡು ವಾಸಿಸುತ್ತಿರುವವರ ಭೂಮಿಗೆ ಪಟ್ಟಾ ನೀಡಿಲ್ಲ. ಹತ್ತಾರು ಸಲ ಸರ್ಕಾರಕ್ಕೆ ಅರ್ಜಿಗಳನ್ನು ಹಾಕಿಕೊಂಡು ಜನ ಹಲವಾರು ಹಂತದಲ್ಲಿ ಹೋರಾಟ ನಡೆಸುತ್ತಿದ್ದಾರೆ. 2006ರ ಅರಣ್ಯ ಕಾಯ್ದೆಯಂತೆ ಅರ್ಜಿ ಹಾಕಿಕೊಂಡಿದ್ದಾರೆ. ವಿವಿಧ ಹಂತದ ಸಮಿತಿಗಳು 75 ವರ್ಷದ ದಾಖಲೆ ಇಲ್ಲವೆಂದು ತಿರಸ್ಕರಿಸಿದಾಗ ಮೇಲ್ಮನವಿ ಹಾಕಿಕೊಂಡ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಇದೊಂದೇ ಮಾನದಂಡ ಕಡ್ಡಾಯ ಸರಿಯಲ್ಲ. ಕಾನೂನಿನಲ್ಲಿರುವ ಇತರೆ ಅಂಶಗಳನ್ನು ಪರಿಗಣಿಸಬೇಕೆಂದು ಒತ್ತಾಯಿಸಿದರು. ಕೂಡಲೇ ಜಿಲ್ಲಾಧಿಕಾರಿಗಳು ಪಟ್ಟಾ ನೀಡಬೇಕೆಂದು ಒತ್ತಾಯಿಸಿದರು. ಕಾರ್ಮಿಕ ಮುಖಂಡರಾದ ಸುಭಾಶ ಕೊಪ್ಪಿಕರ, ತಿಮ್ಮಪ್ಪ ಗೌಡ, ಮಂಜುನಾಥ ಗೌಡ, ಮುತ್ತಾ ಪೂಜಾರಿ, ಗಣಪತಿ ಭಾಗ್ವತ, ರೈತ ಸಂಘದ ಮುಖಂಡರಾದ ವಿಷ್ಣು ಶಂಕರ ನಾಯ್ಕ, ಶ್ಯಾಮನಾಥ ನಾಯ್ಕ, ಗೌರೀಶ ನಾಯಕ, ಕೂಲಿಕಾರರ ಸಂಘದ ಮುಖಂಡ ಬೀಮಣ್ಣ ಭೋವಿ, ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನಾಗೇಂದ್ರ ಸಿದ್ದಿ, ನಾರಾಯಣ ಸಿದ್ದಿ ಮುಂತಾದವರು ನೇತೃತ್ವ ವಹಿಸಿದ್ದರು.

2 ದಿನ ಧರಣಿ ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಜಿಲ್ಲಾಡಳಿತದ ಮೇಲೆ ತೀವ್ರ ಒತ್ತಡವನ್ನೂ ಬೇಡಿಕೆಗಳ ಮೇಲೆ ಹೇರಲಾಯಿತು. ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷ ಮಂಜುನಾಥ ಮಲ್ಯರ ಧರಣಿ ನಿರತರನ್ನುದ್ದೇಶಿಸಿ ಮಾತನಾಡಿದರು. ಅಂಕೋಲಾ ತಾಲೂಕಿನ 4 ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಭಾಗವಹಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಅರಣ್ಯ ಅತಿಕ್ರಮಣದಾರರ ಮುಖಂಡರಾದ ವಿ.ಡಿ. ಭಟ್ ಅಚವೆ, ಸುಧಾಕರ ಜಾಂಬಾವಳಿಕರ ಬೇಲೆಕೇರಿ, ನಾಗರಾಜ ಹೆಗಡೆ ಕೊಡ್ಲಗದ್ದೆ, ವಕೀಲ ಆರ್.ಕೆ. ದೇಸಾಯಿ ಮುಂತಾದವರು ಹೋರಾಟವನ್ನು ಬೆಂಬಲಿಸಿ ಮಾತನಾಡಿದರು.


3ನೇ ದಿನ ಹೋರಾಟ ಇನ್ನಷ್ಟು ತೀವ್ರಗೊಂಡಿತು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಧರಣಿಯಲ್ಲಿ ಪಾಲ್ಗೊಂಡಿದ್ದರು. ಜೋಯಿಡಾ, ಹಳಿಯಾಳ ತಾಲೂಕಿನ ದೂರದ ಊರುಗಳಿಂದ ಜನ ಧರಣಿಯಲ್ಲಿ ನೂರಾರಿ ಸಂಖ್ಯೆಯಲ್ಲಿ ಪಾಲ್ಗೊಂಡರು.

ಧರಣಿ ನಿರತರನ್ನು ಉದ್ದೇಶಿಸಿ ಮಾರುತಿ ಮಾನ್ಪಡೆಯವರು ಮಾತನಾಡಿ ರಾಜ್ಯದಲ್ಲಿ ನಿಷ್ಕ್ರಿಯ ಸರ್ಕಾರವಿದೆ. ಭೂಗಳ್ಳರು ಒಬ್ಬೊಬ್ಬರಾಗಿ ಜೈಲಿಗೆ ಸೇರುತ್ತಿದ್ದಾರೆ. ವಿದೇಶಿ ಕಂಪನಿಗಳಿಗೆ ಭೂಮಿ ನೀಡುವ ಸರ್ಕಾರ ಹತ್ತಾರು ವರ್ಷಗಳಿಂದ ಅರಣ್ಯ ಭೂಮಿಯಲ್ಲಿ ವಾಸಮಾಡುವವರಿಗೆ ಪಟ್ಟಾ ನೀಡುತ್ತಿಲ್ಲ. ಅತಿಕ್ರಮಣದಾರರನ್ನು ಜೈಲಿಗೆ ಕಳುಹಿಸಲು ಕಾಯ್ದೆ ತರಲಾಗುತ್ತಿದೆ ಎಂದರು. ಸರಕಾರ ಏನೆ ಮಾಡಿದರೂ ನಾವು ಭೂಮಿ ಬಿಡಲು ತಯಾರಿಲ್ಲ. ಜೈಲಿಗೆ ಹೋಗಲು ಸಿದ್ದ ಎಂದರು. ಮುಖಂಡರಾದ ಆರ್.ಎಂ. ಮುಲ್ಲಾ, ಎಚ್.ಬಿ. ನಾಯಕ, ಈಕ್ಕಪ್ಪ ಗುರುಬಣ್ಣವರ ಮುಂತಾದವರು ಹೋರಟಕ್ಕೆ ಬೆಂಬಲಿಸಿ ಮಾತನಾಡಿದರು.

ಜಂಟಿ ಸಭೆ : ಧರಣಿ ನಡೆಯುತ್ತಿದ್ದ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿಗಳ ಪರವಾಗಿ ಅಪರ ಜಿಲ್ಲಾಧಿಕಾರಿಗಳು ಬೇಡಿಕೆಗಳ ಮೇಲೆ ಜಂಟಿ ಸಭೆ ಕರೆದು ಚರ್ಚಿಸುವುದಾಗಿ ತಿಳಿಸಿದರು. ಅಗಸ್ಟ 30 ರಿಂದ ಅರಣ್ಯ ಅತಿಕ್ರಮಣದಾರರ ಮೇಲ್ಮನವಿ ಪರಿಶೀಲನೆ ಪ್ರಾರಂಭಿಸುವುದಾಗಿ ಹಾಗೂ ನಗರ ವ್ಯಾಪ್ತಿಯ ಅರಣ್ಯ ಅತಿಕ್ರಮಣದಾರರ ಸರ್ವೆ ಕೂಡಲೇ ಆರಂಭಿಸುವುದಾಗಿ ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ 3 ದಿನಗಳ ಧರಣಿ ಸತ್ಯಾಗ್ರಹವನ್ನು ಮುಗಿಸಲಾಯಿತು.

ಮುಖಂಡರಾದ ಮಂಜುನಾಥ ಮಲ್ಯರ, ಶಾಂತಾರಾಮ ನಾಯಕ, ವಿಷ್ಣು ಶಂಕರ ನಾಯ್ಕ, ಶ್ಯಾಮನಾಥ ನಾಯ್ಕ, ಗೌರೀಶ ನಾಯಕ, ಸುಭಾಶ ಕೊಪ್ಪಿಕರ, ಭೀಮಣ್ಣ ಭೋವಿ, ಬಸವರಾಜ ಎಸ್. ಧಾರವಾಡ, ನಾರಾಯಣ ವೇಳಿಪ, ಪ್ರೇಮಾನಂದ ವೇಳಿಪ, ರಾಜೇಶ ಗಾವುಡಾ, ದಿಗಂಬರ ದೇಸಾಯಿ, ಸುಭಾಶ ಕೊಪ್ಪಿಕರ ಮುಂತಾದವರು ಧರಣಿ ನೇತೃತ್ವ ವಹಿಸಿದ್ದರು.

JANASHAKTHI KANNADA VARA PATRIKE SEPT. 18, 2011 Price : Rs. 5/- RNI No. KARKAN /2006/17926 'Posted on every Satuarda
Postal Reg. No. RNP/KA/BGS/2078/2010-12 Posted at MBC Bangalore GP



ಇತ್ತೀಚೆಗೆ ಜಗತ್ತಿನಾದ್ಯಂತ ಗಮನ ಸೆಳೆದ ಒಂದು ವಿಶೇಷ ಕೃತಿ,ಟೆರಿ ಈಗಲ್‌ಟನ್ ಅವರ 'ವೈ ಮಾರ್ಕ್ಸ್ ವಾಸ್ ರೈಟ್' ಮಾರ್ಕ್ಸ್‌ವಾದಕ್ಕೆ ತತ್ವದ ಒಳನೋಟಗಳನ್ನು ಹೊಸ ಕಾಲದ ವಿಮರ್ಶೆಗಳಿಗೆ ಅನ್ವಯಿಸಿ, ಹೊಸ ಬೆಳಕಿನಲ್ಲಿ ಇನ್ನೊಮ್ಮೆ ವಿವರಿಸಿದ್ದಾರೆ.

(ಪ್ರಜಾವಾಣಿಯಲ್ಲಿ ಪ್ರಕಟವಾದ ಈ ಕೃತಿಯ ಕುರಿತ ಲೇಖನದ ಆಯ್ದ ಭಾಗ)



ಹೊಸ ಕುಲುಮೆಯಲ್ಲಿ ಮಾರ್ಕ್ಸ್ ಚಿಂತನೆ

ಎಸ್.ಆರ್.ವಿಜಯಕುಮಾರ್

ಯಾಕೆ ಮಾರ್ಕ್ಸ್ ಹೇಳಿದ್ದು ಸರಿ ಎಂಬುದು ಟೆರಿ ಈಗಲ್‌ಟನ್ ಅವರ ತೀರಾ ಈಚಿನ ಪುಸ್ತಕ. ಯಾಲೆ ಯೂನಿವರ್ಸಿಟಿಯವರು ಇತ್ತೀಚೆಗೆ ಪ್ರಕಟಿಸಿದ ಈ ಪುಸ್ತಕ ಜಗತ್ತಿನಾದ್ಯಂತ ವಿಚಾರವಂತರ ಗಮನ ಸೆಳೆಯುತ್ತಿದೆ. ಟೆರಿ ಈಗಲ್‌ಟನ್ (ಜ:1943)ಈಗ ಜೀವಂತವಿರುವ ಇಂಗ್ಲೀಷ್ ವಿಮರ್ಶಕರಲ್ಲಿ ಬಹಳ ಮುಖ್ಯರಾದವರು. ಇಂಗ್ಲೀಷ್ ಸಾಹಿತ್ಯದ ಪ್ರಾಧ್ಯಾಪಕರಾದ ಅವರು ಇಂಗ್ಲೆಂಡ್‌ನ ಲ್ಯಾಂಕಾಸ್ಟರ್ ವಿಶ್ವವಿದ್ಯಾನಿಲಯ ಹಾಗೂ ಅಮೇರಿಕಾದ ನಾರ್ಥ್‌ಡಾಮ್ ವಿಶ್ವವಿದ್ಯಾನಿಲಯಗಳಲ್ಲಿ ಸಾಹಿತ್ಯದ ಪಾಠ ಹೇಳುತ್ತಾರೆ. ಡಬ್ಲಿನ್‌ನಲ್ಲಿ ವಾಸಿಸುತ್ತಾರೆ. ರೇಮಂಡ್ ವಿಲಿಯಮ್ಸ್, ವಾಲ್ಟರ್ ಬೆಂಜಮಿನ್ ಇವರಂತೆ ಎಡಪಂಥೀಯ ಚಿಂತನೆಗೆ ಹೆಸರಾದವರು. 'ವೈ ಮಾರ್ಕ್ಸ್ ವಾಸ್ ರೈಟ್' ಎನ್ನುವ ಈ ಕೃತಿಯಲ್ಲಿ ಸೋವಿಯತ್ ಒಕ್ಕೂಟದ ಪತನದ ಬಳಿಕ, ಮಾರ್ಕ್ಸ್‌ವಾದಕ್ಕೆ ತತ್ವದ ಒಳನೋಟಗಳನ್ನು ಹೊಸ ಕಾಲದ ವಿಮರ್ಶೆಗಳಿಗೆ ಅನ್ವಯಿಸಿ, ಹೊಸ ಬೆಳಕಿನಲ್ಲಿ ಇನ್ನೊಮ್ಮೆ ವಿವರಿಸಿದ್ದಾರೆ.

ಈ ಕೃತಿಯಲ್ಲಿ ಒಟ್ಟು ಹತ್ತು ಅಧ್ಯಾಯಗಳಿವೆ. ಅವುಗಳಲ್ಲಿ ಇಂದು ಮಾರ್ಕ್ಸ್‌ವಾದದ ವಿರುದ್ಧ ಹಾಗೂ ಮಾರ್ಕ್ಸ್ ಇನ್ನು ಮುಂದೆ ನಿರುಪಯುಕ್ತ ಎಂದು ವಾದಿಸುವ ಹತ್ತು ಮುಖ್ಯ ವಿಮರ್ಶಾತ್ಮಕ ಆಕ್ಷೇಪಗಳನ್ನು ಸಂಗ್ರಹಿಸಿ ಅವುಗಳಿಗೆ ಉತ್ತರಿಸುವ ರೂಪದಲ್ಲಿ ಪುಸ್ತಕವನ್ನು ರಚಿಸಲಾಗಿದೆ. ಟೆರಿ ಈಗಲ್‌ಟನ್ ಉತ್ತರಗಳು ಅವರ ವ್ಯಾಖ್ಯಾನ. ಸಮರ್ಥ ಪಾಂಡಿತ್ಯ, ಆಧುನಿಕ ಕಾಲದ ಅಮೂಲಾಗ್ರ ತಿಳುವಳಿಕೆ, ವಿಮಶಾತ್ಮಕ ಒಳನೋಟ. ಅಲ್ಲಲ್ಲಿ ಹಾಸ್ಯಮಿಶ್ರಿತ ವ್ಯಂಗ್ಯ ಮತ್ತು ಶಕ್ತಿಯುತ ಸಂವಹನ ಶಕ್ತಿಯಿಂದ ಕೂಡಿದೆ. ಎಲ್ಲೂ ಈ ಕೃತಿ ಕೇವಲ ವಿಮರ್ಶಕರು, ಪಂಡಿತರು ಮಾತ್ರ ಓದಿಬಹುದಾದ ಪುಸ್ತಕ ಅನಿಸುವುದಿಲ್ಲ. ಸಾಮಾನ್ಯ ಓದುಗರೂ ಈ ಕೃತಿಯಲ್ಲಿ ಪರಿಸರ, ಆಧುನಿಕತೆ ಮುಂತಾದ ವಿಚಾರಗಳನ್ನು ಚರ್ಚಿಸುವಾಗ, ತನ್ಮಯರಾಗಿ ತಮ್ಮದೇ ಆಧುನಿಕ ಕಾಲದ ಅಮೂಲಾಗ್ರ ತಿಳುವಳಿಕೆ, ವಿಮರ್ಶಾತ್ಮಕ ಒಳನೋಟ, ಅಲ್ಲಲ್ಲಿ ಹಾಸ್ಯಮಿಶ್ರಿತ ವ್ಯಂಗ್ಯ ಮತ್ತು ಶಕ್ತಿಯುತ ಸಂವಹನ ಶಕ್ತಿಯಿಂದ ಕೂಡಿದೆ. ಎಲ್ಲೂ ಈ ಕೃತಿ ಕೇವಲ ವಿಮರ್ಶಕರು, ಪಂಡಿತರು ಮಾತ್ರ ಓದಬಹುದಾದ ಪುಸ್ತಕ ಅನಿಸುವುದಿಲ್ಲ. ಸಾಮಾನ್ಯ ಓದುಗರೂ ಈ ಕೃತಿಯಲ್ಲಿ ಪರಿಸರ,ಆಧುನಿಕ ಮುಂತಾದ ವಿಚಾರಗಳನ್ನು ಚರ್ಚಿಸುವಾಗ, ತನ್ಮಯರಾಗಿ ತಮ್ಮದೇ ಅನುಭವಗಳ ವಿಸ್ತಾರವೆಂಬಂತೆ ಓದಿಕೊಳ್ಳಬಹುದು.

ಮಾರ್ಕ್ಸ್‌ವಾದದ ಬಗೆಗಿನ ಹತ್ತು ಆಕ್ಷೇಪಗಳನ್ನು ಹೀಗೆ ಪಟ್ಟಿ ಮಾಡಬಹುದು.

1. ಮಾರ್ಕ್ಸ್‌ವಾದ ಮುಗಿಯಿತು. ಕೈಗಾರಿಕಾ ಪಕ್ವತೆಯ ಬಳಿಕದ ಲೋಕಕ್ಕೆ ಮಾರ್ಕ್ಸ್‌ವಾದದ ಪ್ರಸ್ತುತವಲ್ಲ.
2. ಮಾರ್ಕ್ಸ್‌ವಾದ ಅತ್ಯುತ್ತಮವಾದ ತತ್ವವಾಗಿರಬಹುದು. ಆದರೆ ಅದು ಜಾರಿಗೆ ತರುವುದು ಕೊನೆಗೂ ರಾಜಕೀಯ ನಿರಂಕುಶಾಧಿಕಾರವನ್ನು
3. ಮಾರ್ಕ್ಸ್‌ವಾದದ ಸ್ವಾತಂತ್ರ್ಯ ನೀಡದೆ ಗಂಡು-ಹೆಣ್ಣುಗಳನ್ನು ಕೂಡಾ ಚಾರಿತ್ರಿಕ ಘಟನೆಗಳ ಫಲಗಳಾಗಿಯೇ ನೋಡುತ್ತದೆ. ಅದು ಮಾರ್ಕ್ಸ್‌ವಾದ ಆಡಳಿತಕ್ಕೆ ಬಂದ ದೇಶಗಳಲ್ಲಿ ಅದಂತೆ ಮಾನವ ಘನತೆಗೆ ವಿರುದ್ಧವಾದದು.
4. ಮಾರ್ಕ್ಸ್‌ವಾದ ಎಂದೂ ಸಾಧ್ಯವಾಗದ ಒಂದು ಯುಟೋಪಿಯಾ. ಅದು ಸಾಧ್ಯವಾಗದ ಮಾನವ ಸಮಾನತೆಯ ಕನಸುಗಳನ್ನು ಬಿತ್ತುತ್ತದೆ. ಮನುಷ್ಯನ ಸ್ವಾರ್ಥ ಹಾಗೂ ದುಷ್ಟತನಗಳಿಗೆ ಕುರುಡಾಗಿದೆ.
5. ಮಾರ್ಕ್ಸ್‌ವಾದದ ಸಕಲವನ್ನೂ ಆರ್ಥಿಕ ತಳಹದಿಗೆ ಇಳಿಸಿ ಸರಳಗೊಳಿಸುತ್ತದೆ. ಆರ್ಥಿಕತೆಗೆ ಮೇಲೆಯೇ ಎಲ್ಲವನ್ನೂ ನಿರ್ಧರಿಸುವ ಸ್ವಭಾವದ್ದು, ಮನುಷ್ಯ ಚೈತನ್ಯ ಅದಕ್ಕಿಂತ ದೊಡ್ಡದು.
6. ಮಾರ್ಕ್ಸ್ ಕೇವಲ ಒಬ್ಬ ಭೌತವಾದಿ, ಭೌತಿಕತೆ ಆಚೆ ಏನೂ ಇಲ್ಲ ಎನ್ನುವವ



ಧರ್ಮ. ದೇವರು ಮೊದಲಾದವನ್ನು ಸಾರಾಸಗಟು ತಿರಸ್ಕರಿಸುವ ಅಲೌಕಿಕದ ಅನುಭವದ ಬಗ್ಗೆ ಕುರುಡಾದವ.

7. ಮಾರ್ಕ್ಸ್‌ವಾದದ ವರ್ಗ ಕಲ್ಪನೆಗಿಂತ ಹೆಚ್ಚು ಅಪ್ರಸ್ತುತವಾದ್ದು ಹಾಗೂ ಹಳಸಲಾದ ವಿಚಾರ ಇಂದು ಇನ್ನೊಂದಿಲ್ಲ.
8. ಮಾರ್ಕ್ಸ್‌ವಾದಿಗಳು ಕ್ರೌರ್ಯದ ಪ್ರತಿಪಾದಕರು. ಹಿಂಸೆಯ ರಾಜಕೀಯವೇ ಅವರ ಪ್ರತಿಪಾದನೆ. ಅವರು ಕತ್ತಿ ಕೋವಿಗಳಲ್ಲಿ ನಂಬಿಕೆ ಉಳ್ಳವರು.
9. ಮಾರ್ಕ್ಸ್‌ವಾದ ಶಕ್ತಿಶಾಲಿ ರಾಷ್ಟ್ರ ಕಲ್ಪನೆಯನ್ನು ಹೊಂದಿದೆ. ಖಾಸಗಿ ಆಸ್ತಿಯನ್ನು ಕೊನೆಗೊಳಿಸಿ ರಾಜ್ಯ ಪ್ರಭುತ್ವದ ಶಕ್ತಿಯಿಂದ ವೈಯಕ್ತಿಕ ಸ್ವಾತಂತ್ರ್ಯವನ್ನು ಹರಣ ಮಾಡುವವರು.
10. ಕಳೆದ ನಾಲ್ಕು ದಶಕಗಳ ಎಲ್ಲಾ ಮುಖ್ಯ ವೈಚಾರಿಕ ಚಳುವಳಿಗಳೂ ಮಾರ್ಕ್ಸ್‌ವಾದದ ಹೊರಗಿನಿಂದಲೇ ಬಂದಿವೆ. ಸ್ತ್ರೀವಾದ, ಪರಿಸರವಾದ, ಸಲಿಂಗ ಸಂಬಂಧ ಸ್ವಾತಂತ್ರ್ಯ ವಾದ, ಜನಾಂಗೀಯ/ವರ್ಣೀಯ ವಾದ, ಪ್ರಾಣಿಗಳ ಹಕ್ಕುಗಳ ವಾದ, ಶಾಂತಿ ಚಳವಳಿ, ಜಾಗತೀಕರಣದ ವಿರುದ್ಧದ ಚಳವಳಿ ಮೊದಲಾದವು ಈಗ ಸಾಮಾಜಿಕ ರಾಜಕೀಯ ಅಕ್ಟಿವಿಸಂ ಆಗಿ ಬೆಳೆಯುತ್ತಿವೆ. ಅವುಗಳಿಗೂ ಮಾರ್ಕ್ಸ್ ವಾದಕ್ಕೂ ಏನೂ ಸಂಬಂಧವಿಲ್ಲ.

ಮೇಲೆ ನಾನು ಸರಳಗೊಳಿಸಿ ಸಂಗ್ರಹಿಸಿದ ಮಾರ್ಕ್ಸ್‌ವಾದದ ಮೇಲಿನ ಟೀಕೆಗಳಿಗೆ ಟೆರಿ ಈಗಲ್‌ಟನ್ ಶಾಂತರಾಗಿ ಪ್ರತಿಯೊಂದು ವಿಚಾರಗಳಿಗೂ ತಾತ್ವಿಕ ಒಳನೋಟ, ಕಾರ್ಲ್‌ಮಾರ್ಕ್ಸ್, ಎಂಗೆಲ್ಸ್ ಮತ್ತು ಆ ಬಳಿಕ ನಡೆದ ಚರ್ಚೆ, ಚಳವಳಿಗಳಿಂದ ವಿಚಾರಗಳನ್ನು ಆರಿಸಿ ವಿಶ್ಲೇಷಿಸಿ ತೋರಿಸಿಕೊಡುತ್ತಾರೆ. ಈ ಕೃತಿ ಮಾರ್ಕ್ಸ್ ಹೇಳಿದ್ದೆಲ್ಲಾ ಸರಿ ಎಂದು ವಾದಿಸುವ ಕೃತಿಯಲ್ಲ. ಮಾರ್ಕ್ಸ್ ಹೇಳಿದ್ದರಲ್ಲಿ ಅಸಮಂಜಸವಾದದ್ದು ಯಾವುದೂ ಇಲ್ಲ ಎಂದು ಹೇಳುವ ಕೃತಿಯೂ ಅಲ್ಲ. ಮಾರ್ಕ್ಸ್‌ವಾದವನ್ನು ಇಂದಿನ ಸಂದರ್ಭದಲ್ಲಿ ಅರ್ಥ ಮಾಡಿಕೊಳ್ಳಬೇಕಾದ್ದು ಹೇಗೆ ಎಂದು ತೋರಿಸಿಕೊಡುವ ಕೃತಿ.

ಸಮಾಜವಾದಿ ಸೋವಿಯತ್ ರಷ್ಯಾ ಒಕ್ಕೂಟ ವಿಘಟನೆ ಹೊಂದಿದ ಬಳಿಕ ಮಾರ್ಕ್ಸ್‌ವಾದವನ್ನು ಕೇವಲ ರಾಜಕೀಯ ಅಧಿಕಾರ ಪಡೆಯುವ ಒಂದು ತತ್ವದ ಮಟ್ಟಕ್ಕೆ ಇಳಿಸಿದ ಚರ್ಚೆಗಳು ಹೆಚ್ಚಾದವು. ಸೋವಿಯತ್ ಪತನ...... ಬಳಿಕ, ಮಾರ್ಕ್ಸ್‌ವಾದ ಇನ್ನು ಮುಂದೆ ಹೇಗೆ ಸರಿ? ಎಂಬ ಚರ್ಚೆ ಹೆಚ್ಚಾಯಿತು. ರಾಜಕೀಯ ಅಧಿಕಾರ ಮಾರ್ಕ್ಸ್‌ವಾದದ ಒಂದು ಸೂಚನೆ ಮಾತ್ರ. ಆ ತತ್ವದ ಇತರ ನೆಲೆಗಳೇನು? ಇಂದು ಬಂಡವಾಳಶಾಹಿ ವ್ಯವಸ್ಥೆ ಹೊಸ ರೂಪಗಳಲ್ಲಿ ಜಾಗತೀಕರಣದ ಹೆಸರಲ್ಲಿ ಪಸರಿಸುತ್ತಿರುವಾಗ ಮಾರ್ಕ್ಸ್‌ವಾದದ ಹೊಸ ವ್ಯಾಖ್ಯಾನಗಳು ಹೇಗಿರಬೇಕು ಎಂಬುದನ್ನು ಈ ಕೃತಿ ಮನದಟ್ಟು ಮಾಡುತ್ತದೆ. ಈ ಲೇಖನಕ್ಕಿರುವ ಪುಟಗಳ ಮಿತಿಯಲ್ಲಿ ನಾವು ಕೆಲವು ಅಂಶಗಳನ್ನು ಮಾತ್ರ ಇಲ್ಲಿ ಗಮನಿಸಬಹುದು.

(ಮುಂದಿನ ವಾರ

ಕೃಪೆ: ಪ್ರಜಾವಾಣಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana,12,18thCross,S.R.Nagar,BANGALORE-560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH